ಅಖಿಲ ಭಾರತ ಪತ್ರಿಕೆ
ಜನವರಿ 2017



# ಅಗ್ನಿಯ ಪಥ

## (ವೈದಿಕ ಋಷಿಗಳ ಯೋಗ)

ಬೆಲೆ : 15/–



*The whole creation speaks of the Divine to him*
*who knows how to hear within his heart.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### ‘ಅಗ್ನಿಯ ಪಥ’
**(ವೈದಿಕ ಋಷಿಗಳ ಯೋಗ)**


**ಅನು : ಡಾ. ಕೆ.ಎಸ್. ಆಮೂರ**

ವೇದದ ಶೋಧ 3
ಯಜ್ಞದ ಪಥ 16

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಕೆಲವು ವೈದಿಕ ಸಂಕೇತಗಳು 25

**ಅನು : ಡಾ. ಕೆ.ಎಸ್. ಆಮೂರ**

ವೇದಗಳಲ್ಲಿ ಕಂಡು ಬರುವ ದೇವರುಗಳು
ಹಾಗೂ ದೇವಿಯರು 32
ವೇದದಲ್ಲಿರುವ ಮೂಲಭೂತ ಸತ್ಯಗಳು 44

ವಾರ್ತಾಪತ್ರ 59

## (All India Magazine) ಸಂಪಾದಕೀಯ:

“ವೇದಗಳನ್ನು ಶ್ರುತಿ ಇಲ್ಲವೆ ಜ್ಞಾನ ಪ್ರಕಾಶನ (revelation) ಎಂದು ನ್ಯಾಯಯುತವಾಗಿ ಕರೆಯಲಾಗಿದೆ. ಇವುಗಳಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವಣವೇದ ಇವು ಭೂಮಿಯನ್ನು ಫಲಪ್ರದವನ್ನಾಗಿ ಮಾಡುವ ಮಳೆಯಿದ್ದ ಹಾಗಿವೆ, ಅವು ದೈವೀ ಸತ್ಯದ ಸಸ್ಯಕ್ಕೆ ಪೋಷಣೆ ನೀಡಿದವು ಮತ್ತು ಅದು ಬೆಳೆಯುವಂತೆ ಮಾಡಿದವು, ಬ್ರಾಹ್ಮಣಗಳು ಎಂಬ ಅರಣ್ಯದಲ್ಲಿ ಆ ಸಸ್ಯವಿರುವುದು ಕಂಡುಬರುತ್ತದೆ, ಅರಣ್ಯಕಗಳು ಅಲ್ಲಿರುವ ಭೂಮಿಯ ಸ್ವರೂಪದವಾಗಿದ್ದು ಅದರಲ್ಲಿ ಆ ಸಸ್ಯ ಬೆಳೆಯುತ್ತದೆ, ಉಪನಿಷತ್ತುಗಳು ಸ್ವತಃ ಆ ಸಸ್ಯ ಅದರ ಬೇರುಗಳು, ಕಾಂಡ, ಎಲೆಗಳು, ಬಟ್ಟಲುಕುಳಿ ಹಾಗೂ ಪಕಳೆಗಳು ಆಗಿರುತ್ತವೆ. ಒಮ್ಮೆ ಮತ್ತು ಎಂದೆಂದಿಗೂ ಪುಷ್ಪವೆಂದು ಪ್ರಕಟವಾಗುವುದು ಸೋಽಹಮ್ ಎಂಬ ಶ್ರೇಷ್ಠ ಉಕ್ತಿಯಾಗಿದೆ, ಅದು ಉಪನಿಷತ್ತುಗಳ ಪರಾಕಾಷ್ಠೆ ಇದ್ದ ಹಾಗೆ.

**CWSA, 17/102** **– ಶ್ರೀ ಅರವಿಂದರು**

ದೈವೀ ಸತ್ಯದ ಬೀಜಗಳು ಹೀಗಿವೆ, ಅವುಗಳನ್ನು ಭಾರತದ ಶ್ರೇಷ್ಠ ದೃಷ್ಟಾರರು ನಾಗರಿಕತೆಯ ಪ್ರಾರಂಭಕಾಲದಲ್ಲಿ ಮಾನವ ಹೃದಯದಲ್ಲಿ ಬಿತ್ತಿದ್ದರು. ಈ ಸಂಚಿಕೆಯನ್ನು ಆ ಪ್ರಾಚೀನಕಾಲದ ಪೂರ್ವಜರು ಕೈಕೊಂಡಿದ್ದ ಶೋಧನೆಗಳಿಗಾಗಿ ಮುಡುಪಾಗಿರಿಸಲಾಗಿದೆ.

*

# ವೇದದ ಶೋಧ

## ರಹಸ್ಯಗಳ ಯುಗ

ಬಹುಮಟ್ಟಿಗೆ ನಿಜವಾಗಿ ಎಲ್ಲೆಡೆಯಲ್ಲೂ ದೈವೀ ರಹಸ್ಯದ ಯುಗವಿತ್ತು, ಅದರಲ್ಲಿ ಆಳವಾದ ಜ್ಞಾನವಿದ್ದ ಹಾಗೂ ಸ್ವ–ಜ್ಞಾನವಿದ್ದ ಜನರು ತಮ್ಮ ಆಚರಣೆಗಳನ್ನು, ಪ್ರಾಮುಖ್ಯತೆಯದ್ದ ವ್ರತಗಳನ್ನು, ಸಂಕೇತಗಳನ್ನು, ಅಂತರಂಗದಲ್ಲಿ ಇಲ್ಲವೆ ಹೆಚ್ಚು ಆದಿಕಾಲದ ಬಾಹ್ಯ ಧರ್ಮಗಳ ಅಂಚಿನ ಮೇಲೆ ಸಂಪ್ರದಾಯಗಳನ್ನು ಹಾಗೂ ಸಂಗತಿಗಳನ್ನು ಸ್ಥಾಪಿಸಿದರು. ಇದು ಭಿನ್ನ ದೇಶಗಳಲ್ಲಿ ಭಿನ್ನ ರೂಪ ತಾಳಿತು. ಗ್ರೀಸ್ ದೇಶದಲ್ಲಿ ಓರ್ಫಿಕ್ (orphic) ಮತ್ತು ಎಲ್ಯೂಸಿನಿಯನ್ (Eleusinian) ರಹಸ್ಯಗಳಿದ್ದವು, ಇಜಿಪ್ತ ಮತ್ತು ಚಾಲ್ಡಿಯಾ ದೇಶಗಳಲ್ಲಿ ಪುರೋಹಿತರಿದ್ದರು, ಅವರ ರಹಸ್ಯ ಸಂಪ್ರದಾಯಗಳು, ಸಂಗತಿಗಳಿದ್ದವು ಮತ್ತು ಮಂತ್ರವಿದ್ಯೆ ಇತ್ತು, ಪರ್ಶಿಯಾ ದೇಶದಲಿ ಮಾಗಿ (Magi) ಇತ್ತು, ಭಾರತದಲ್ಲಿ ಋಷಿಗಳಿದ್ದರು. ರಹಸ್ಯವಾದಿಗಳ (ಅನುಭಾವಿಗಳ) ಪೂರ್ವಮಗ್ನತೆ ಸ್ವ–ಜ್ಞಾನ, ಹೆಚ್ಚು ಗಾಢವಾದ ಜಗತ್ತಿನ ಜ್ಞಾನ ಇವುಗಳನ್ನು ಕುರಿತಾಗಿತ್ತು. ಮನುಷ್ಯನಲ್ಲಿ ಆಳವಾದ ಆತ್ಮವಿದೆ ಮತ್ತು ಅವನ ಬಾಹ್ಯ ಮೇಲ್ಮೈ ಹಿಂದಿರುವ ಆಂತರಿಕ ಸತ್ತೆಯಿದೆ ಎಂಬುದನ್ನು ಶೋಧಿಸಿದ್ದರು, ಅವರ ಅತ್ಯುಚ್ಚ ವ್ಯವಹಾರ ಶೋಧ ಮಾಡುವುದು ಹಾಗೂ ತಿಳಿದುಕೊಳ್ಳುವುದು ಆಗಿತ್ತು. "ನಿನ್ನನ್ನು ಅರಿತುಕೋ" ಎಂಬುದು ಅವರ ಶ್ರೇಷ್ಠ ಐಂದ್ರಿಯ ಜ್ಞಾನ (percept) ವಾಗಿತ್ತು, ಅದೇ ರೀತಿಯಲ್ಲಿ ಭಾರತದಲ್ಲಿ ಆತ್ಮನ್ ಅತ್ಯಂತ ಶ್ರೇಷ್ಠ ಆಧ್ಯಾತ್ಮಿಕ ಆವಶ್ಯಕತೆ "ನಿನ್ನನ್ನು ನೀನು ತಿಳಿದುಕೋ" ಎಂಬುದೇ ಆಗಿತ್ತು. ಹಾಗೆಯೇ ಅವರು ವಿಶ್ವದ ಬಾಹ್ಯಮುಖದ ಹಿಂದೆ ಒಂದು ದೈವೀ ಸತ್ಯ, ದೈವೀ ನೈಜತೆ ಇರುವುದನ್ನು ಶೋಧಿಸಿದರು, ಈ ಸತ್ಯವನ್ನು ಶೋಧಿಸುವುದು, ಅನುಸರಿಸುವುದು, ಸಿದ್ಧಿಸಿಕೊಳ್ಳುವುದು ಅವರ ಶ್ರೇಷ್ಠ ಅಭೀಪ್ಸೆಯಾಗಿತ್ತು. ಅವರು ಪ್ರಕೃತಿಯ ರಹಸ್ಯಗಳನ್ನು ಹಾಗೂ ಸಾಮರ್ಥ್ಯಗಳನ್ನು ಶೋಧಿಸಿದರು, ಅವು ಭೌತಿಕ ಜಗತ್ತಿಗೆ ಸೇರಿದವುಗಳಾಗಿರಲಿಲ್ಲ, ಆದರೆ ಅವು ಭೌತಿಕ ಜಗತ್ತಿನ ಮೇಲೆ, ಭೌತಿಕ ವಸ್ತುಗಳ ಮೇಲೆ ರಹಸ್ಯ ಪ್ರಭುತ್ವವನ್ನು ತರಬಲ್ಲವಾಗಿದ್ದವು. ಮತ್ತು ಈ ರಹಸ್ಯ ಜ್ಞಾನವನ್ನು ಕ್ರಮಬದ್ಧಗೊಳಿಸುವುದು ಅವರ ಬಲವತ್ತರವಾದ ಪೂರ್ವಮಗ್ನತೆಗಳಲ್ಲಿ ಒಂದಾಗಿತ್ತು. ಇದೆಲ್ಲವನ್ನು ಕಠಿಣ, ಕಾಳಜಿಪೂರ್ವಕ ನೀಡಿದ ತರಬೇತು,

ಶಿಸ್ತುಪಾಲನೆ, ಸ್ವಭಾವವನ್ನು ಪರಿಶುದ್ಧಗೊಳಿಸುವಿಕೆ ಇವೆಲ್ಲವುಗಳ ಮೂಲಕ ಸುರಕ್ಷಿತವಾಗಿ ಕೈಕೊಳ್ಳಬಹುದು, ಅದನ್ನು ಸರ್ವಸಾಧಾರಣ ಮನುಷ್ಯ ಕೈಕೊಳ್ಳಲಾರ. ಜನರು ಈ ವಿಷಯದಲ್ಲಿ ಕಟ್ಟುನಿಟ್ಟಿನ ಪರೀಕ್ಷೆ ಹಾಗೂ ತರಬೇತು ಇವುಗಳಿಲ್ಲದೆ ಪ್ರವೇಶಿಸಿದರೆ, ಅದು ಅವರಿಗೇ ಸ್ವತಃ ಹಾಗೂ ಇತರರಿಗೂ ಅಪಾಯಕಾರಿಯಾಗುತ್ತದೆ. ಈ ಜ್ಞಾನವನ್ನು, ಸಾಮರ್ಥ್ಯಗಳನ್ನು ತಪ್ಪಾಗಿ ಉಪಯೋಗಿಸಬಹುದು, ತಪ್ಪಾಗಿ ವಿವೇಚಿಸಬಹುದು, ಸತ್ಯದಿಂದ ಮಿಥ್ಯೆಯತ್ತ ಒಳ್ಳೆಯದರಿಂದ ಅನಿಷ್ಟದತ್ತ ಹೊರಳಿಸಬಹುದು. ಹಾಗಾಗಿ ಕಟ್ಟುನಿಟ್ಟಿನ ರಹಸ್ಯವನ್ನು ಉಳಿಸಿಕೊಂಡು ಬರಲಾಗುತ್ತಿತ್ತು. ಆ ಜ್ಞಾನವನ್ನು ಗುರು ಶಿಷ್ಯನಿಗೆ ಪರದೆಯ ಹಿಂದೆ ನೀಡುತ್ತಿದ್ದ. ಸಂಕೇತಗಳಿರುವ ಆ ಪರದೆಯನ್ನು ಸೃಷ್ಟಿಸ–ಲಾಗುತ್ತಿತ್ತು, ಅದರ ಹಿಂದೆ ಈ ರಹಸ್ಯಗಳು ಆಶ್ರಯ ಪಡೆಯಬಹುದಾಗಿತ್ತು, ದೀಕ್ಷೆ ಪಡೆದವನು ಅರ್ಥಮಾಡಿಕೊಳ್ಳಬಹುದಾದ ಮಾತಿನ ಸೂತ್ರಗಳಿರುತ್ತಿದ್ದವು, ಇತರರಿಗೆ ಅವು ತಿಳಿದಿರುತ್ತಿರಲಿಲ್ಲ, ಇಲ್ಲವೆ ಅವುಗಳನ್ನು ಅವುಗಳ ಬಾಹ್ಯಾರ್ಥದಲ್ಲಿ ತೆಗೆದುಕೊಳ್ಳುತ್ತಿದ್ದರು, ಆ ಸೂತ್ರಗಳು ನಿಜವಾದ ಅರ್ಥ ಹಾಗೂ ರಹಸ್ಯಗಳನ್ನು ಕಾಳಜಿಪೂರ್ವಕ ಮುಚ್ಚಿಡುತ್ತಿದ್ದವು. ಇದು ಎಲ್ಲೆಡೆಯಲ್ಲಿ ರಹಸ್ಯ ಜ್ಞಾನದ ಮೂಲ ತತ್ವವಾಗಿತ್ತು.

**CWSA, 16/5–6** **– ಶ್ರೀ ಅರವಿಂದರು**

*

**ವೇದಗಳು ಮನುಕುಲದ ಅಂತರ್ಬೋಧೆಯ ಯುಗದ ಸೃಷ್ಟಿಗಳು**

ವೇದ ನಮ್ಮ ಬೌದ್ಧಿಕ ತತ್ವಶಾಸ್ತ್ರಗಳಿಗಿಂತ ಹಿಂದಿನ ಯುಗದಲ್ಲಿ ಸೃಷ್ಟಿ–ಯಾದದ್ದು. ಆ ಸೃಜನಾತ್ಮಕ ಯುಗದಲ್ಲಿ ಚಿಂತನ ಮುಂದುವರಿದುಕೊಂಡು ಹೋದ ರೀತಿ ನಾವು ಒಪ್ಪಿಕೊಂಡ ತಾರ್ಕಿಕ ಪದ್ಧತಿ ಮತ್ತು ಮಾತಿನ ರೀತಿಗಳಿಗಿಂತ ಭಿನ್ನವಾದದ್ದು, ಅದು ನಮ್ಮ ಆಧುನಿಕ ರೂಢಿಗಳಿಗೆ ಒಪ್ಪಲಾಗದಂತಹದು. ಆಗ ಅತ್ಯಂತ ವಿವೇಕಿಗಳಾಗಿದ್ದವರು ಮನುಕುಲದ ಸಾಮಾನ್ಯ ಗ್ರಹಿಕೆಗಳು ಮತ್ತು ದೈನಂದಿನ ಚಟುವಟಿಕೆಗಳು ಇವುಗಳಾಚೆ ವಿಸ್ತರಿಸಿಕೊಂಡ ಜ್ಞಾನಕ್ಕಾಗಿ ಆಂತರಿಕ ಅನುಭವ ಮತ್ತು ಅಂತರ್ಬೋಧೆಯ ಮನಸ್ಸಿನ ಸೂಚನೆಗಳ ಮೇಲೆ ಅವಲಂಬಿಸಿದ್ದರು. ಅವರ ಗುರಿ ಜ್ಞಾನೋದಯ ಪಡೆಯುವುದಾಗಿತ್ತು, ತಾರ್ಕಿಕವಾಗಿ ಮನವರಿಕೆ ಮಾಡಿಕೊಳ್ಳುವುದಾಗಿರಲಿಲ್ಲ, ಅವರ ಆದರ್ಶ

ಸ್ಫೂರ್ತಿಗೊಂಡ ದೃಷ್ಟಾರನಾಗಿದ್ದ, ನಿಖರವಾಗಿ ತರ್ಕಮಾಡುವವನಾಗಿರಲಿಲ್ಲ. ವೇದಗಳ ಮೂಲದ ವಿವರವನ್ನು ಭಾರತೀಯ ಪರಂಪರೆ ಪ್ರಾಮಾಣಿಕವಾಗಿ ಕಾಪಾಡಿಕೊಂಡು ಬಂದಿದೆ. ಋಷಿ ಸೂಕ್ತಗಳನ್ನು ವೈಯಕ್ತಿಕವಾಗಿ ರಚಿಸುತ್ತಿರಲಿಲ್ಲ. ಆದರೆ ಅವನು ಸನಾತನ ಸತ್ಯದ ಮತ್ತು ಅವೈಯಕ್ತಿಕ ಜ್ಞಾನದ ದೃಷ್ಟಾ ಆಗಿರುತ್ತಿದ್ದ. ವೇದದ ಭಾಷೆಯೇ ಶ್ರುತಿಯಾಗಿದೆ, ಬುದ್ಧಿಯಿಂದ ರಚನೆ ಮಾಡಿದ ಛಂಧೋಬದ್ಧತೆಯಲ್ಲ, ಆದರೆ ಕೇಳಿಸಿಕೊಂಡದ್ದು. ಅವೈಯಕ್ತಿಕ ಜ್ಞಾನಕ್ಕಾಗಿ ತನ್ನನ್ನು ಯೋಗ್ಯನನ್ನಾಗಿ ಮಾಡಿಕೊಂಡ ಮನುಷ್ಯನ ಆಂತರಿಕ ಕೇಳುಗನಿಗೆ ಅನಂತದೊಳಗಿಂದ ಕಂಪಿಸುತ್ತ ಬಂದ ದೈವೀಶಬ್ದ. 'ದೃಷ್ಟಿ' ಮತ್ತು 'ಶ್ರುತಿ' ಇವು ವೈದಿಕ ಅಭಿವ್ಯಕ್ತಿಯಿಂದ ಬಂದ ಪದಗಳಾಗಿವೆ; ಇವು ಮತ್ತು ಇವುಗಳಿಗೆ ಸಂಬಂಧಿಸಿದ ಪದಗಳು ದೀಕ್ಷೆ ಪಡೆದವರ ಸೂಕ್ತಗಳಲ್ಲಿ ತೆರೆದಿರಿಸಲಾದ ದಿವ್ಯಜ್ಞಾನ ಮತ್ತು ಸ್ಫೂರ್ತಿಯ ವಸ್ತು–ವಿಷಯ ಇವುಗಳ ಲಕ್ಷಣಗಳನ್ನು ಸೂಚಿಸುತ್ತವೆ.

*

**ವೇದಾಂತ: ಉಪನಿಷತ್ತುಗಳು ಹಾಗೂ ಬ್ರಾಹ್ಮಣಗಳು**

ಬ್ರಾಹ್ಮಣಗಳು ಹಾಗೂ ಉಪನಿಷತ್ತುಗಳು ವೇದ ಸಾಹಿತ್ಯದ ಸಾಮರ್ಥ್ಯ ಪೂರ್ಣ ಪುನರುಜ್ಜೀವನವನ್ನು ಮಾಡಿದ ದಾಖಲೆಗಳಾಗಿವೆ. ಆಧ್ಯಾತ್ಮಿಕ ಜೀವನ ಮತ್ತು ಅನುಭವ ಇವುಗಳನ್ನು ಹೊಸರೂಪದಲ್ಲಿ ಹೇಳಲು ಅವು ಪವಿತ್ರ ಗ್ರಂಥಗಳನ್ನು ಹಾಗೂ ವ್ರತಾಚರಣೆಗಳನ್ನು ಪ್ರಾರಂಭಬಿಂದುವನ್ನಾಗಿ ಮಾಡಿ–ಕೊಂಡವು. ಈ ಆಂದೋಲನಕ್ಕೆ ಎರಡು ಪೂರಕ ಅಂಶಗಳಿದ್ದವು, ರೂಪಗಳನ್ನು ಕಾಯ್ದುಕೊಂಡು ಬರುವುದು ಒಂದು ಅಂಶವಾದರೆ ವೇದದ ಆತ್ಮದ ಜ್ಞಾನಪ್ರಕಾಶನ ಇನ್ನೊಂದು ಅಂಶವಾಗಿತ್ತು. ಮೊದಲನೆಯದನ್ನು ಬ್ರಾಹ್ಮಣಗಳು ಮತ್ತು ಎರಡನೆಯದನ್ನು ಉಪನಿಷತ್ತುಗಳು ಮಾಡಿದವು.

ವೈದಿಕ ಸಮಾರಂಭಗಳ ಅತಿ ಸೂಕ್ಷ್ಮ ವಿವರಗಳನ್ನು ಹಾಗೂ ಅವುಗಳ ಲೌಕಿಕ ಪರಿಣಾಮಕಾರಿತ್ವವನ್ನು ಅವುಗಳ ಬೇರೆ ಬೇರೆ ಭಾಗಗಳ ಚಲನೆಗಳನ್ನು, ಸಾಮಗ್ರಿಗಳನ್ನು, ವ್ರತಾಚರಣೆಯಲ್ಲಿ ಮುಖ್ಯವಾದ ಪಠ್ಯಗಳ ಪ್ರಾಮುಖ್ಯತೆಯನ್ನು, ಸಹಜಪ್ರವೃತ್ತಿಯ ಬಗ್ಗೆ ಮಬ್ಬಾದ ಭಾಗಗಳ ಪ್ರಾಸಂಗಿಕ ಸೂಚನೆಯನ್ನು, ಪ್ರಾಚೀನ ಕಾಲದ ಪುರಾಣಗಳು ಹಾಗೂ ಸಂಪ್ರದಾಯಗಳ ಬಗೆಗಿನ ನೆನಪನ್ನು ನಿರ್ಧರಿಸುವುದು ಹಾಗೂ ಜೋಪಾನವಾಗಿಟ್ಟುಕೊಳ್ಳುವುದು ಬ್ರಾಹ್ಮಣಗಳ ಶ್ರಮ ಸಾಧನೆಯಾಗಿತ್ತು.

ಉಪನಿಷತ್ತುಗಳನ್ನು ರಚಿಸಿದ ಋಷಿಗಳು ಇನ್ನೊಂದು ಪದ್ಧತಿಯನ್ನು ಅನುಸರಿಸಿದರು. ಕಳೆದು ಹೋದ ಇಲ್ಲವೆ ಕ್ಷಯಿಸುತ್ತಿರುವ ಜ್ಞಾನವನ್ನು ಅವರು ಧ್ಯಾನ, ಆಧ್ಯಾತ್ಮಿಕ ಅನುಭವಗಳ ಮೂಲಕ ಮರಳಿ ಪಡೆಯುವುದನ್ನು ಅರಸಿದರು. ಮತ್ತು ಅವರು ಪ್ರಾಚೀನ ಕಾಲದ ಮಂತ್ರಗಳಿರುವ ಪಠ್ಯವನ್ನು ತಮ್ಮದೇ ಅಂತರ್ಬೋಧೆಗಳು ಹಾಗೂ ಗ್ರಹಿಕೆಗಳಿಗೆ ಆಸರೆಯನ್ನಾಗಿ ಇಲ್ಲವೆ ಪ್ರಮಾಣ ಗ್ರಂಥವನ್ನಾಗಿ ಮಾಡಿಕೊಂಡರು. ವೈದಿಕ ಶಬ್ದ ಅವರಿಗೆ ಚಿಂತನದ ಮತ್ತು ದರ್ಶನದ ಒಂದು ಬೀಜವಾಗಿತ್ತು, ಅದರ ಮೂಲಕ ಅವರು ಹಳೆಯ ಸತ್ಯಗಳನ್ನು ಹೊಸ ರೂಪಗಳಲ್ಲಿ ಮರಳಿ ಪಡೆದರು. ಅವರು ಕಂಡುಕೊಂಡದ್ದನ್ನು ತಾವು ಜೀವಿಸಿದ್ದ ಕಾಲಕ್ಕನುಗುಣವಾಗಿ ಹೆಚ್ಚಿನ ರೀತಿಯಲ್ಲಿ ತಿಳಿದುಕೊಳ್ಳಬಹುದಾದ ಪದಗಳಲ್ಲಿ ಅಭಿವ್ಯಕ್ತಗೊಳಿಸಿದರು. . . . ಅವರು ಹೆಣಗುತ್ತಿದ್ದ ಜ್ಞಾನೋದಯಕ್ಕಾಗಿ ಕೇವಲ ಸೂಚನೆಗಳ ರೂಪದಲ್ಲಿದ್ದ ಶಬ್ದಗಳಿಗಿಂತ ಹೆಚ್ಚಿನದನ್ನು ಅರಸುತ್ತಿದ್ದರು.

ಏಕೆಂದರೆ ಈ ಶ್ರೇಷ್ಠ ಚಲನೆ ಒಂದು ಹೊಸ ಮತ್ತು ಹೆಚ್ಚು ಶಾಶ್ವತವಾಗಿ ಸಾಮರ್ಥ್ಯಪೂರ್ಣವಾಗಿರುವ ಚಿಂತನ ಹಾಗೂ ಆಧ್ಯಾತ್ಮಿಕತೆ ಇವುಗಳ ಬಗ್ಗೆ ಹೇಳಿಕೆ ನೀಡುವುದರಲ್ಲಿ ಪರಿಣಾಮಕಾರಿಯಾಯಿತು.

**CWSA, 15/13–15** **– ಶ್ರೀ ಅರವಿಂದರು**

*

**ಶ್ರುತಿ ಹಾಗೂ ಸ್ಮೃತಿ**

ಪ್ರಾಚೀನ ಕಾಲದಲ್ಲಿ ವೇದವನ್ನು ಸೂಕ್ಷ್ಮಪರಿಜ್ಞಾನವಿರುವ ಪವಿತ್ರಗ್ರಂಥವೆಂದು ಗೌರವಿಸಲಾಗುತ್ತಿತ್ತು, ಅದು ಸ್ಫೂರ್ತಿಯಿಂದ ಬಂದ ಕಾವ್ಯದ ಮೊತ್ತ, ಋಷಿಗಳು, ದೃಷ್ಟಾರರು ಕೈಕೊಂಡ ಕಾರ್ಯ, ಅದನ್ನು ಅವರು ಜ್ಞಾನೋದಯ ಪಡೆದ ಮನಸ್ಸುಗಳಲ್ಲಿ ಪಡೆದರು, ಮನಸ್ಸಿನಿಂದ ರಚಿಸಿರಲಿಲ್ಲ, ಅದು ಶ್ರೇಷ್ಠ, ವಿಶ್ವಂಭರ, ಸನಾತನ ಮತ್ತು ಅವೈಯಕ್ತಿಕ ದೈವೀಸತ್ಯ, ಆ ಸತ್ಯ ಮಂತ್ರಗಳ ರೂಪದಲ್ಲಿ ಮೈವೆತ್ತಿತ್ತು, ಮಂತ್ರಗಳು ಸಾಮರ್ಥ್ಯಪೂರ್ಣವಾಗಿದ್ದವು, ಸಾಧಾರಣ ಮಟ್ಟದವಲ್ಲ, ಆದರೆ ದೈವೀ ಸ್ಫೂರ್ತಿ ಹಾಗೂ ಮೂಲದಿಂದ ಬಂದವುಗಳಾಗಿದ್ದವು. ಈ ಋಷಿಗಳಿಗೆ 'ಕವಿ'ಗಳು ಎಂಬ ಹೆಸರನ್ನು ನೀಡಲಾಗಿತ್ತು. ಈಗ ಈ ಶಬ್ದ ಕವಿತೆ ಬರೆದ ಪ್ರತಿಯೊಬ್ಬನಿಗೂ ಅನ್ವಯಿಸುತ್ತದೆ, ಆದರೆ ಆ ಕಾಲದಲ್ಲಿ ಕವಿ ಶಬ್ದಕ್ಕೆ ದೈವೀ ಸತ್ಯದ ದೃಷ್ಟಾರ ಎಂಬ ಅರ್ಥವಿರುತ್ತಿತ್ತು. ವೇದವೇ ಸ್ವತಃ ಅವರನ್ನು ಕವಯಃ ಸತ್ಯ

ಶ್ರುತಃ ಎಂದು ವರ್ಣಿಸುತ್ತದೆ "ದೈವೀ ಸತ್ಯವನ್ನು ಕಂಡುಕೊಳ್ಳುವವರು ಹಾಗೂ ಕೇಳಿಸಿಕೊಳ್ಳುವವರು", ವೇದವನ್ನೇ ಸ್ವತಃ ಶ್ರುತಿ ಎಂದು ವರ್ಣಿಸಲಾಗುತ್ತಿತ್ತು, ಆ ಶಬ್ದ "ತೆರೆದು ತೋರಿಸಿದ ಶಾಸ್ತ್ರ" ಎಂಬ ಅರ್ಥ ಹೊಂದಿದೆ. ವೇದವನ್ನು ಕುರಿತು ಉಪನಿಷತ್ತುಗಳ ದೃಷ್ಟಾರರಿಗೂ ಕೂಡ ಅದೇ ಬಗೆಯ ವಿಚಾರವಿತ್ತು, ಬಹಳಷ್ಟು ಸಲ ತಾವೇ ಘೋಷಿಸಿದ ಸತ್ಯಗಳಿಗಾಗಿ ವೇದದ ಪ್ರಮಾಣ (authority) ಕ್ಕಾಗಿ ಮೊರೆ ಹೋಗುತ್ತಿದ್ದರು, ಈ ಸತ್ಯಗಳನ್ನೂ ಕೂಡ ಶ್ರುತಿ, ತೆರೆದು ತೋರಿಸಿದ ಶಾಸ್ತ್ರ, ಎಂದು ಪರಿಗಣಿಸಲಾಯಿತು, ಮತ್ತು ಇವುಗಳನ್ನು ಅಂಗೀಕೃತ ಪವಿತ್ರ ಗ್ರಂಥಗಳಲ್ಲಿ ಸೇರಿಸಲಾಯಿತು.

**CWSA, 16/3** **– ಶ್ರೀ ಅರವಿಂದರು**

*

**ಮಾತಿನ ಒಂದು ರಹಸ್ಯ ಹಾಗೂ ಆಧ್ಯಾತ್ಮಿಕ ರೂಪ**

ವೇದದಲ್ಲಿಯ ಹಲವಾರು ಸಾಲುಗಳು, ಹಲವಾರು ಇಡೀ ಸ್ತೋತ್ರಗಳು ಅವುಗಳ ಮುಖಗಳ ಮೇಲೆ ಆಧ್ಯಾತ್ಮಿಕ ಅರ್ಥವನ್ನು ಹೊತ್ತುಕೊಂಡಿರುತ್ತವೆ, ಅವು ಸ್ಪಷ್ಟವಾಗಿ ಮಾತಿನ ಒಂದು ರಹಸ್ಯ ರೂಪ ಹೊಂದಿದವುಗಳಾಗಿವೆ, ಅವುಗಳಿಗೆ ಆಂತರಿಕ ಅರ್ಥವಿರುತ್ತದೆ. ದೃಷ್ಟಾರನೊಬ್ಬ ಅಗ್ನಿಯನ್ನು ಕುರಿತು "ದೈವೀ ಸತ್ಯದ ಪ್ರಕಾಶಮಯ ಪಾಲಕ, ತನ್ನದೇ ಮನೆಯಲ್ಲಿ ಹೊಳೆಯುತ್ತಿರುವವನು" ಎಂದು ಹೇಳಿದಾಗ ಇಲ್ಲವೆ ಮಿತ್ರ ಹಾಗೂ ವರುಣ ಇವರನ್ನು ಕುರಿತು ಇಲ್ಲವೆ ಇತರ ದೇವತೆಗಳನ್ನು ಕುರಿತು "ದೈವೀ ಸತ್ಯದ ಸ್ಪರ್ಶದಲ್ಲಿರುವವರೆಂದು" ಇಲ್ಲವೆ "ದೈವೀ ಸತ್ಯದಲ್ಲಿ ಜನಿಸಿದವರೆಂದು" ಎಂದು ಹೇಳಿದಾಗ ಈ ಶಬ್ದಗಳು ಆಧ್ಯಾತ್ಮಿಕ ಕವಿಯವಾಗಿರುತ್ತವೆ, ಅವನು ಅವುಗಳ ಹಿಂದಿರುವ ಆಂತರಿಕ ದೈವೀಸತ್ಯವನ್ನು ಕುರಿತು ಯೋಚಿಸುತ್ತಿರುತ್ತಾನೆ, ಅವುಗಳನ್ನು ಕುರಿತು ಪ್ರಾಚೀನ ಕಾಲದ ಋಷಿಗಳು ಅರಸುವವರಾಗಿದ್ದರು. ಆಧ್ಯಾತ್ಮಿಕ ಕವಿ ಪ್ರಕೃತಿ ಸಾಮರ್ಥ್ಯವನ್ನು ಕುರಿತು ಯೋಚಿಸುತ್ತಿದ್ದಾಗ ಅಗ್ನಿಯ ಬಾಹ್ಯ ಅಂಶವನ್ನು ಇಲ್ಲವೆ ಯಜ್ಞದ ಸಮಾರಂಭದಲ್ಲಿ ಉಪಯೋಗಿಸಲಾಗುವ ಅಗ್ನಿಯ ಅಂಶವನ್ನು ಕುರಿತು ಯೋಚಿಸುತ್ತಿರುವುದಿಲ್ಲ. ಇಲ್ಲವೆ ಸರಸ್ವತಿಯನ್ನು ಕುರಿತು ಮಾತನಾಡಿದಾಗ ದೈವೀ ಸತ್ಯವಿರುವ ಶಬ್ದಗಳಿಗೆ ಪ್ರಚೋದನೆ ನೀಡಿರುತ್ತಾಳೆ, ಇಲ್ಲವೆ ಯೋಚನೆಗಳಿಂದ ಶ್ರೀಮಂತವಾಗಿರಿಸುತ್ತಾಳೆ ಎಂದು ಮಾತನಾಡಿರುತ್ತಾನೆ ಸರಸ್ವತಿ ಪ್ರಜ್ಞೆಗೆ ಎಚ್ಚರಿಸುತ್ತಾಳೆ ಇಲ್ಲವೆ "ಯೋಚನೆಗಳ

ಶ್ರೇಷ್ಠ ಸಮುದ್ರದ ಬಗ್ಗೆ ಪ್ರಜ್ಞೆಯುಳ್ಳವರನ್ನಾಗಿ ಮಾಡುತ್ತಾಳೆ ಮತ್ತು ನಮ್ಮ ಎಲ್ಲ ಯೋಚನೆಗಳಿಗೆ ಜ್ಞಾನೋದಯವನ್ನುಂಟು ಮಾಡುತ್ತಾಳೆ." ಅವನು ನಿಶ್ಚಿತವಾಗಿ ಸರಸ್ವತಿ ಹೆಸರಿನ ನದಿಯನ್ನು ಕುರಿತು ಈ ರೀತಿ ಸ್ತೋತ್ರ ಮಾಡುತ್ತಿರುವುದಿಲ್ಲ, ಆದರೆ ಅದು ದೈವೀ ಸಾಮರ್ಥ್ಯವಿರುವ, ಸ್ಫೂರ್ತಿಯಿಂದ ತುಂಬಿಕೊಂಡ ನದಿಯ, ದೈವೀ ಶಬ್ದದ, ನಮ್ಮ ಯೋಚನೆಗಳಲ್ಲಿ ಅದರ ಪ್ರಕಾಶ ತರುವ, ನಮ್ಮಲ್ಲಿ ಆ ದೈವೀ ಸತ್ಯವನ್ನು ನಿರ್ಮಾಣ ಮಾಡುವ ಆಂತರಿಕ ಜ್ಞಾನವನ್ನು ಕುರಿತಾಗಿರುತ್ತದೆ. ದೇವರುಗಳು ಸತತ ತಮ್ಮ ಮನೋವೈಜ್ಞಾನಿಕ ಕಾರ್ಯವಿಧಾನಗಳೊಂದಿಗೆ ಎದ್ದು ನಿಂತಿರುತ್ತಾರೆ, ಯಜ್ಞಾಹುತಿ ಆಂತರಿಕ ಕಾರ್ಯದ ಬಾಹ್ಯ ಸಂಕೇತ, ದೇವರುಗಳು ಹಾಗೂ ಮನುಷ್ಯರ ನಡುವೆ ಆಂತರಿಕ ಪರಸ್ಪರ ವಿನಿಮಯ, ಮನುಷ್ಯ ತನ್ನಲ್ಲಿರು–ವುದನ್ನು ಕೊಡುವುದಾಗಿರುತ್ತದೆ, ದೇವರುಗಳು ಪ್ರತಿಯಾಗಿ ಸಾಮರ್ಥ್ಯವುಳ್ಳ ಕುದುರೆಗಳನ್ನು, ಪ್ರಕಾಶದ ಗುಂಪುಗಳನ್ನು, ದೈವೀಬಲದ ಮಹಾಸಾಹಸಿಗಳ ಪರಿವಾರವನ್ನು ಕೊಡುವುದಾಗಿರುತ್ತದೆ, ಆ ಪರಿವಾರದವರು ಅವನಿಗಾಗಿ ಅಂಧಕಾರದ ಅತಿಥೇಯರು, ವೃತ್ರರು, ದಸ್ಯುಗಳು, ಪಾಣಿಗಳು ಇಂತಹರೆಲ್ಲರ ವಿರುದ್ಧ ಜಯ ಸಾಧಿಸುತ್ತಾರೆ, . . . ಹಾಗೆಯೇ ಅನೇಕ ಬಗೆಯ ಸಂಪತ್ತನ್ನು, ಆಕಳುಗಳು, ಕುದುರೆಗಳು ಇವುಗಳನ್ನು ಮತ್ತು ಯಜ್ಞ ಕೈಕೊಳ್ಳುವವನು ಪ್ರಾರ್ಥಿಸಿ ಕೇಳಿಕೊಂಡದ್ದನ್ನು ಅವರು ಕೊಡುತ್ತಾರೆ, ಸ್ಪಷ್ಟವಾಗಿ ಇದು ಪ್ರಾಪಂಚಿಕ ಸಂಪತ್ತಲ್ಲ, ಅದು ದೈವೀ ಯೋಚನೆ, ಮಂತ್ರದಲ್ಲಿ ಮೈವೆತ್ತ ಯೋಚನೆ ಕೊಡಬಹುದಾದ ಏನೋ ಒಂದು. ದೈವೀಕರಣದ ಮತ್ತು ಶ್ರೇಷ್ಠ ಹಾಗೂ ಪ್ರಕಾಶಮಯ ಸಂಪತ್ತು, ಅಮೂಲ್ಯ ಕಲಾಕೃತಿಗಳು ಇವುಗಳನ್ನು ಎಂದರೆ ಯಜ್ಞದ ಆಂತರಿಕ ಕಾರ್ಯದ ಮೂಲಕ ದೇವತೆಗಳಿಂದ ಗಳಿಸಿದವುಗಳನ್ನು ಕೆಳಗಿಳಿಸಿ ತರುವ ವಿಧಾನವನ್ನು ಕುರಿತು ಅವಶ್ಯವಾಗಿ ರಹಸ್ಯ ಶಬ್ದಗಳಲ್ಲಿ ಸೂಚನೆ ಕೊಡಲಾಗಿದೆ, ಆದಾಗ್ಯೂ ಈ ರಹಸ್ಯ ಶಬ್ದಗಳನ್ನು ನಿನ್ಯಾವಚಾಂಸಿ ಓದಬಲ್ಲವನಿಗೆ ಸಾಕಷ್ಟು ಅಭಿವ್ಯಕ್ತಿಗೊಳಿಸು–ವಂತಹವಾಗಿರುತ್ತವೆ, ಕವಯೇ ನಿವಚನಾ.

**CWSA, 16/12–13** **– ಶ್ರೀ ಅರವಿಂದರು**

*

**ವೈದಿಕ ಋಕ್ಕುಗಳ ಎರಡು ಬಗೆಯ ಅರ್ಥ**

ನಾವು ಅನುಭಾವಿಗಳ ಶ್ರೇಷ್ಠ ಪವಿತ್ರ ಗ್ರಂಥದ ಸಾನ್ನಿಧ್ಯದಲ್ಲಿದ್ದೇವೆ, ಅದಕ್ಕೆ

ಎರಡು ಬಗೆಯ ಪ್ರಾಮುಖ್ಯತೆ ಇದೆ, ಒಂದು ಸಾಮಾನ್ಯರಿಗೂ ಅರ್ಥವಾಗು–ವಂತಹದು, ಇನ್ನೊಂದು ದೀಕ್ಷೆ ಪಡೆದ (ಉಪದೇಶ ಪಡೆದ) ವರಿಗೆ ಅರ್ಥವಾಗು–ವಂತಹದು, ರಹಸ್ಯ ಬೋಧನೆ ಹಾಗೂ ಜ್ಞಾನ ಇವುಗಳ ಅಂಶವಾಗಿರುವಂತಹದು. ಕಡಿಮೆ ಸಂಖ್ಯೆಯಲ್ಲಿರುವ ಕೆಲವು ಸ್ತೋತ್ರಗಳನ್ನು ಹೊರತುಪಡಿಸಿ ಋಗ್ವೇದ ಅದರ ಅಂತರಾರ್ಥದಲ್ಲಿ ಇಂತಹ ಪವಿತ್ರ ಗ್ರಂಥವಾಗಿದೆ. ಅದೇ ಕಾಲಕ್ಕೆ ಸಾಮಾನ್ಯರಿಗೂ ಆಗುವ ಅರ್ಥ ಕೇವಲ ಮುಖವಾಡವಾಗಿರಬೇಕಿಲ್ಲ, ಋಕ್ಕುಗಳನ್ನು ರಚಿಸಿದ ರಚನಾಕಾರರು ಅವು ಕೇವಲ ಆಂತರಿಕ ವಿಷಯಗಳಿಗಷ್ಟೇ ಸಾಮರ್ಥ್ಯವಿರುವ ಶಬ್ದಗಳೆಂದು ಪರಿಗಣಿಸಿರಬಹುದು. ಕೇವಲ ಆಧ್ಯಾತ್ಮಿಕ ಪವಿತ್ರಶಾಸ್ತ್ರ ಆಧ್ಯಾತ್ಮಿಕ ವಿಷಯಗಳಿಗಷ್ಟೇ ಸಂಬಂಧಿಸಿರಬಹುದು, ಆದರೆ ಪ್ರಾಚೀನ ಕಾಲದ ಅನುಭಾವಿಗಳು ನಾವು ರಹಸ್ಯವಾದಿಗಳು ಎಂದು ಕರೆಯುವವರೂ ಕೂಡ ಆಗಿದ್ದರು, ಅವರು ತಮ್ಮ ಆಂತರಿಕ ಸಾಧನದ ಮೂಲಕ ಆಂತರಿಕ ಹಾಗೂ ಬಾಹ್ಯ ಪರಿಣಾಮಗಳನ್ನು ಉತ್ಪಾದಿಸಬಹುದು ಎಂದು ನಂಬಿದ್ದರು. ಅವರ ಪ್ರಕಾರ ಯೋಚನೆಗಳು ಹಾಗೂ ಶಬ್ದಗಳು ಪ್ರತಿಯೊಂದು ಬಗೆಯ ಸಿದ್ಧಿಯನ್ನು ತಂದುಕೊಡಬಹುದಾಗಿತ್ತು, ಮಾನವ ಹಾಗೂ ದೇವ ಇವರಿಗೆ ಸಂಬಂಧಿಸಿದ ಪದಗುಚ್ಛ ಸ್ವತಃ ವೇದದಲ್ಲಿ ಇದೆ.

**CWSA, 16/10–11** **– ಶ್ರೀ ಅರವಿಂದರು**

*

ಸಂಕೇತ ಹಾಗೂ ಸಾಂಕೇತಿಕ ಶಬ್ದಗಳ ಮೂಲಕ ಅರ್ಥಕ್ಕೆ ಮುಖವಾಡ ಇರಿಸಬೇಕಾದ ಒತ್ತಡದಿಂದಾಗಿ– ಏಕೆಂದರೆ ರಹಸ್ಯವನ್ನು ಕಾಪಾಡಿಕೊಂಡು ಬರಬೇಕಾಗಿತ್ತು– ಋಷಿಗಳು ದ್ವಂದ್ವಾರ್ಥ ಇರಿಸುವುದಕ್ಕೆ ಆಶ್ರಯಕ್ಕಾಗಿ ಮೊರೆಹೊಕ್ಕರು. ಈ ಉಪಾಯವನ್ನು ಸಂಸ್ಕೃತ ಭಾಷೆಯಲ್ಲಿ ಸುಲಭವಾಗಿ ನಿರ್ವಹಿಸಬಹುದು, ಆ ಭಾಷೆಯಲ್ಲಿ ಒಂದು ಶಬ್ದಕ್ಕೆ, ಬಹಳಷ್ಟು ಸಲ, ಅನೇಕ ಅರ್ಥಗಳಿರುತ್ತವೆ, ಅದನ್ನು ಇಂಗ್ಲಿಷ್ ಭಾಷೆಯಲ್ಲಿ ತರುವುದು ಬಹುಮಟ್ಟಿಗೆ ಅಸಾಧ್ಯವಾಗಿರುತ್ತದೆ. ಹೀಗೆ ಆಕಳಿನ ಹೆಸರಿರುವ ಗೋ ಶಬ್ದಕ್ಕೆ ಪ್ರಕಾಶ ಇಲ್ಲವೆ ಪ್ರಕಾಶದ ಕಿರಣ ಎಂಬ ಅರ್ಥವಿತ್ತು. ಇದು ಕೆಲವು ಋಷಿಗಳ ಹೆಸರಿನಲ್ಲಿ ಕಂಡುಬರುತ್ತದೆ, ಗೌತಮ– ಅತ್ಯಂತ ತೇಜಸ್ಸುಳ್ಳವ, ಗವಿಸ್ಥಿರ– ದೈವೀ ಪ್ರಕಾಶದಲ್ಲಿ ಅಚಂಚಲವಾಗಿ ಉಳಿದುಕೊಳ್ಳುವವನು. ವೇದಗಳಲ್ಲಿ ಗೋವುಗಳು ಸೂರ್ಯನ

ಹಿಂಡುಗಳಾಗಿದ್ದವು, ಗ್ರೀಕ ಪುರಾಣದಲ್ಲಿ ರಹಸ್ಯಾರ್ಥದಲ್ಲಿ ಹಾಗೆ ಪರಿಚಿತ–ವಾಗಿದ್ದವು, ದೈವೀ ಸತ್ಯದ, ಪ್ರಕಾಶದ ಹಾಗೂ ಜ್ಞಾನದ ಕಿರಣಗಳಾಗಿದ್ದವು; ಕೆಲವು ಪರಿಚ್ಛೇದಗಳಲ್ಲಿ ತೋರಿಬರುವ ಈ ಅರ್ಥವನ್ನು ಎಲ್ಲೆಡೆಯಲ್ಲಿ ಸುಸಂಗತವಾಗಿ ಹೊಂದಿಕೆಯಾಗುವ ಹಾಗೆ ಅನ್ವಯಿಸಬಹುದು.

**CWSA, 16/13–14** **– ಶ್ರೀ ಅರವಿಂದರು**

*

**ವೈದಿಕ ಋಷಿಗಳು**

ಭಾರತದಲ್ಲಿ ಬಹಳ ಪ್ರಾಚೀನ ಕಾಲದಿಂದ ಬಂದ ಸಂಪ್ರದಾಯದಲ್ಲಿ ವೈದಿಕ ಕವಿ–ಋಷಿಗಳು ಈ ಬಗೆಯ ಮನುಷ್ಯರಾಗಿದ್ದರು, ಅವರಲ್ಲಿದ್ದ ಶ್ರೇಷ್ಠ ಆಧ್ಯಾತ್ಮಿಕ ಹಾಗೂ ರಹಸ್ಯ ಜ್ಞಾನ ಸಾಮಾನ್ಯ ಮನುಷ್ಯನಲ್ಲಿರಲಿಲ್ಲ. ಈ ಋಷಿಗಳು ಈ ಜ್ಞಾನವನ್ನು, ತಮ್ಮ ಸಾಮರ್ಥ್ಯಗಳನ್ನು ರಹಸ್ಯ ದೀಕ್ಷಾಪದ್ಧತಿಯ ಮೂಲಕ ತಮ್ಮ ವಂಶಜರಿಗೆ ಹಾಗೂ ಆಯ್ದುಕೊಂಡ ಶಿಷ್ಯರಿಗೆ ಒಪ್ಪಿಸಿಕೊಡುತ್ತಿದ್ದರು.

. . . ಉಪನಿಷತ್ತುಗಳ ಕಾಲದಲ್ಲಿಯೂ ಕೂಡ, ಆ ಕಾಲದ ಆಧ್ಯಾತ್ಮಿಕ ಅನ್ವೇಷಕರು ದೀಕ್ಷೆ, ಧ್ಯಾನಗಳ ಆಶ್ರಯ ಪಡೆಯಬೇಕಾಗುತ್ತಿತ್ತು, ಅದು ತಮ್ಮ ರಹಸ್ಯ ಜ್ಞಾನದಲ್ಲಿ ನುಗ್ಗಿಹೋಗುವುದಕ್ಕಾಗಿ ಅವಶ್ಯವಾಗಿತ್ತು, ಅದು ಹಾಗಿರುವಾಗ ನಂತರದ ಪಂಡಿತರು ದಾರಿಗಾಣದವರಾಗಿದ್ದರು, ಅವರು ಊಹೆಯ ಆಶ್ರಯ ಪಡೆಯಬೇಕಾಗಿತ್ತು, ಮಾನಸಿಕ ವಿವರಣೆಯ ಮೇಲೆ ಏಕಾಗ್ರತೆ ವಹಿಸಬೇಕಾಗಿತ್ತು, ಇಲ್ಲವೆ ಪುರಾಣಗಳು, ಬ್ರಾಹ್ಮಣಗಳ ಐತಿಹ್ಯಗಳ ಮೂಲಕ ವಿವರಿಸಿ ಹೇಳಬೇಕಾಗುತ್ತಿತ್ತು, ಅವು ಬಹಳಷ್ಟು ಸಾಂಕೇತಿಕ ಹಾಗೂ ಮಸುಕಾದವು ಆಗಿರುತ್ತಿದ್ದವು.

ವೈದಿಕ ಋಷಿಗಳು ತಮ್ಮ ಮಂತ್ರಗಳು, ಅಡಗಿರುವ ಉಚ್ಚತರ ಪ್ರಜ್ಞೆಯ ಸ್ತರಗಳಿಂದ ಸ್ಫೂರ್ತಿ ಪಡೆದವುಗಳೆಂದು ಮತ್ತು ಈ ರಹಸ್ಯ ಜ್ಞಾನವನ್ನು ಒಳಗೊಂಡಿರುತ್ತವೆ ಎಂದು ನಂಬಿದ್ದರು. ವೇದಗಳ ಶಬ್ದಗಳು, ಅವುಗಳ ನಿಜವಾದ ಅರ್ಥದಲ್ಲಿ ತಾನೇ ಸ್ವತಃ ಅನುಭಾವಿಯಾಗಿದ್ದವನಿಗೆ ತಿಳಿದುಬರಬಲ್ಲವು. ಅಲ್ಲಿರುವ ಶ್ಲೋಕಗಳು ತಮ್ಮ ಗುಪ್ತ ಜ್ಞಾನವನ್ನು ಇತರರಿಂದ ಬಚ್ಚಿಟ್ಟುಕೊಂಡಿರುತ್ತವೆ.

**CWSA, 16/6–8** **– ಶ್ರೀ ಅರವಿಂದರು**

*

## ವೈದಿಕ ಋಷಿಗಳು ಉಚ್ಚತರ ಪ್ರಾಂತಗಳಿಂದ ಬಂದ ಸತ್ತೆಗಳಾಗಿದ್ದರು

**ಪ್ರಶ್ನೆ :** *ಶ್ರೀಮಾತೆಯವರೆ, ಋಷಿಗಳು ಅವರ ಸ್ಥಿತಿಗೇರಿ ಹೋದ ಮಾನವರಾಗಿದ್ದರೆ ಇಲ್ಲವೆ ಅವರದು ವಿಶಿಷ್ಟ ಪ್ರಕಟಣೆಯಾಗಿತ್ತೇ?*

**ಶ್ರೀಮಾತೆ :** ನೀವು ಹೇಳುತ್ತಿರುವುದರ ಅರ್ಥವೇನು? ಅವರು ಉತ್ಕ್ರಾಂತಿಪರ ಸತ್ತೆಗಳಾಗಿದ್ದರೆ ಇಲ್ಲವೆ ಅಂತರ್ಲಗ್ನತೆ ಇರುವ ಸತ್ತೆಗಳಾಗಿದ್ದರೆ?

ಬಹುಶಃ ಅವರು ಹಾಗಿರಬಹುದು. . . . ಇಲ್ಲ. . . . ಅವರು ನಿಶ್ಚಿತವಾಗಿ ಅಂತರ್ಲಗ್ನತೆ ಇರುವ ಸತ್ತೆಗಳಾಗಿದ್ದರು. ಆದರೆ ದೇಹ ಉತ್ಕ್ರಾಂತಿಯ ಪರಿಣಾಮದಿಂದಾಗಿತ್ತು.

ಆದರೆ ಅವರು ಅಂತರ್ಲಗ್ನತೆಯಿರುವ ಸತ್ತೆಗಳಾಗಿದ್ದರೆಂಬುದು ಪರಿಪೂರ್ಣವಾಗಿ ನಿಶ್ಚಿತವಾದದ್ದು, ಎಂದರೆ, ಉಚ್ಚತರ ಪ್ರಾಂತಗಳಿಂದ ಕೆಳಗಿಳಿದು ಬಂದವರಾಗಿದ್ದರು ಹಾಗೂ ಈ ದೇಹಗಳನ್ನು ಉಪಯೋಗಿಸಿದ್ದರು, ಅವರು ಈ ದೇಹಗಳೊಡನೆ ತಮ್ಮನ್ನು ಗುರುತಿಸಿಕೊಂಡಿದ್ದರು.

ವಿಷಯ ಇದೇ ಆಗಿದೆ. ನಾನು ಈ ಹಿಂದೆ ಹೇಳಿದ ಹಾಗೆ ಪಾರ್ಥಿವ ಹಾಗೂ ಮಾನವ ಅಭಿವೃದ್ಧಿಯ ಮುನ್ನಡೆಯನ್ನು ಇಡಿಯಾಗಿ ಬದಲಿಸಬೇಕಾದುದು ಏನೆಂದರೆ ಉಚ್ಚತರ ಪ್ರಾಂತಗಳ ಸತ್ತೆಗಳಿಗಾಗಿ ದೇಹಗಳು ಉಪಕರಣಗಳಾಗಿ ಸೇವೆ ಸಲ್ಲಿಸಲು ಶಕ್ತವಾಗುವಂತಾಗಬೇಕು, ಆ ದೇಹಗಳಲ್ಲಿ ಆ ಸತ್ತೆಗಳು ಅವತಾರ ತಾಳುವಂತಾಗಬೇಕು, ಅದರಿಂದಾಗಿ ಆ ದೇಹಗಳನ್ನು ಉಪಯೋಗಿಸುವಂತಾ–ಗಬೇಕು. ಋಷಿಗಳು ಇವರವರಾಗಿರಬೇಕು ಎಂದು ಸ್ಪಷ್ಟವಾಗಿ ತೋರಿಬರುತ್ತದೆ– ಎಲ್ಲರೂ ಆಗಿರಲಿಕ್ಕಿಲ್ಲ, ಆದರೆ ಮುಂದಾಳುಗಳಾಗಿದ್ದವರು, ನೇತೃತ್ವ ವಹಿಸಿದವರು ಆಗಿರಬೇಕು. ಆದರೆ ಬಹುಶಃ ಅವರು ಒಂದು ಗುಂಪನ್ನು ರೂಪಿಸಿರಬೇಕು ಮತ್ತು ಅದಕ್ಕೆ ಅದರದೇ ಸಿದ್ಧಿ ಇದ್ದಿರಬೇಕು, ಅದು ನೆರೆಹೊರೆಯಿಂದ ಸ್ವತಂತ್ರವಾಗಿ–ದ್ದಿರಬಹುದು.

**CWM, 7/355–56** **– ಶ್ರೀಮಾತೆ**

*

## ವೈದಿಕ ಕವಿಗಳು

ವೈದಿಕ ಕವಿಗಳು ಕಲಾಕೌಶಲ ಕುರಿತು ಪೂರ್ಣ ಪ್ರಭುತ್ವವಿದ್ದವರಾಗಿದ್ದರು ಅವರ ಛಂಧೋಗತಿಗಳು ದೇವತೆಗಳ ರಥಗಳ ಹಾಗೆ ಕೊರೆದು ತೆಗೆದವು–

ಗಳಾಗಿದ್ದವು, ಮತ್ತು ಧ್ವನಿಯ ದೈವೀ, ವಿಶಾಲ ರೆಕ್ಕೆಗಳ ಮೇಲೆ ಹೊತ್ತೊಯ್ದ–ವುಗಳಾಗಿದ್ದವು, ಒಂದೇ ವೇಳೆಗೆ ಏಕತ್ರಗೊಂಡವುಗಳು ಹಾಗೂ ವಿಶಾಲ ತರಂಗಗಳನ್ನು ಹೊಂದಿದಂತಹವು ಆಗಿದ್ದವು, ಚಲನೆಯಲ್ಲಿ ಭವ್ಯ ಮತ್ತು ಶ್ರುತಿಗೂಡಿಸುವಿಕೆಯಲ್ಲಿ ಸೂಕ್ಷ್ಮವಾಗಿದ್ದವು, ಅವುಗಳ ವಚನ ಗೀತ ಪ್ರಧಾನ–ವಾದವುಗಳು, ಔನ್ನತ್ಯದ ಮೂಲಕ ಮಹಾಕಾವ್ಯ ಸ್ವರೂಪದವಾಗಿದ್ದವು, ಶ್ರೇಷ್ಠ ಸಾಮರ್ಥ್ಯವಿರುವ ಉಚ್ಚಾರಣೆಯಿದ್ದವುಗಳು, ರೂಪುರೇಷೆಯಲ್ಲಿ ಪರಿಶುದ್ಧ–ವಾದವು, ದಿಟ್ಟವಾದವುಗಳು, ಭವ್ಯವಾದವುಗಳು, ಅಪ್ಪಳಿಕೆಯಲ್ಲಿ ನೇರ ಹಾಗೂ ಸಂಕ್ಷಿಪ್ತ ವಚನವಿರುವಂತಹದು, ಅರ್ಥದಲ್ಲಿ ಹಾಗೂ ಸೂಚನೆಯಲ್ಲಿ ಹೊರಹೊಮ್ಮುವಿಕೆಗೆ ಪೂರ್ತಿಯಾದದ್ದು, ಹಾಗಾಗಿ ಪ್ರತಿಯೊಂದು ಶ್ಲೋಕ ತನ್ನಲ್ಲಿ ಒಮ್ಮೆಗೆ ಬಲವತ್ತರವಾದದ್ದು ಹಾಗೂ ಸಾಕಾಗುವಷ್ಟಾಗಿರುತ್ತದೆ, ಮೊದಲು ಬಂದದ್ದರ ಹಾಗೂ ನಂತರ ಬರುವುದರ ನಡುವೆ ಭವ್ಯ ಹೆಜ್ಜೆ ಇರಿಸುತ್ತದೆ. ಪವಿತ್ರ ಹಾಗೂ ಶ್ರೇಣಿ ವ್ಯವಸ್ಥೆಯುಳ್ಳ ಸಂಪ್ರದಾಯದ ವಿಶ್ವಾಸಪೂರ್ವಕವಾದ ಅನುಸರಣೆ ಅವುಗಳಿಗೆ ಅವುಗಳ ರೂಪ ಹಾಗೂ ಮೂಲ ತತ್ವಗಳನ್ನು ಕೊಟ್ಟಿತು, ಆದರೆ ಈ ಮೂಲದ್ರವ್ಯ ಆಳಾತಿ ಆಳದ ಚೈತ್ಯಾತ್ಮಿಕ ಹಾಗೂ ಆಧ್ಯಾತ್ಮಿಕ ಅನುಭವಗಳನ್ನು ಒಳಗೊಂಡಿತ್ತು, ಮಾನವ ಆತ್ಮ ಈ ಅನುಭವಗಳನ್ನು ಪಡೆಯುವ ಕ್ಷಮತೆ ಹೊಂದಿದೆ, ಮತ್ತು ರೂಪಗಳು ಎಂದೆಂದಿಗೂ ರೂಢಿಗತ ರೂಪದಲ್ಲಿ ಅವನತಿ ಹೊಂದುವುದಿಲ್ಲ ಇಲ್ಲವೆ ಅವುಗಳಲ್ಲಿ ಅಪರೂಪಕ್ಕೆ ಅವನತಿ ಕಂಡುಬರಬಹುದು, ಏಕೆಂದರೆ ಅವು ತಿಳಿಯಪಡಿಸಲು ಹೊಂದಿದ ಉದ್ದೇಶವನ್ನು ಪ್ರತಿಯೊಬ್ಬ ಕವಿ ಜೀವಿಸಿರುತ್ತಾನೆ ಮತ್ತು ಅವುಗಳನ್ನು ಮನಸ್ಸಿಗೆ ಅಭಿವ್ಯಕ್ತಿಯಲ್ಲಿ ಹೊಸದಾದ–ವುಗಳನ್ನಾಗಿ ಮಾಡಿಕೊಂಡಿರುತ್ತಾನೆ, ಅದನ್ನು ಅವನು ತನ್ನ ದರ್ಶನದಲ್ಲಿ ಸೂಕ್ಷ್ಮತೆಗಳು ಹಾಗೂ ಉದಾತ್ತತೆಗಳ ಮೂಲಕ ಮಾಡುತ್ತಾನೆ. ವಿಶ್ವಾಮಿತ್ರ, ವಾಮದೇವ, ದೀರ್ಘತಮಸ್ ಹಾಗೂ ಇನ್ನಿತರ ಅತ್ಯಂತ ಶ್ರೇಷ್ಠ ಋಷಿಗಳ ಉಚ್ಚಾರಣೆಗಳು ಅತ್ಯಂತ ಅಸಾಧಾರಣ ಘನತೆವೆತ್ತ ಹಾಗೂ ಆಧ್ಯಾತ್ಮಿಕ ಕಾವ್ಯದ ಎತ್ತರಗಳನ್ನು ಹಾಗೂ ವೈಶಾಲ್ಯಗಳನ್ನು ಸ್ಪರ್ಶಿಸುತ್ತವೆ ಮತ್ತು ಸೃಷ್ಟಿಯ ಸ್ತೋತ್ರದಂತಹ ಕವಿತೆಗಳಿವೆ, ಅವು ಸಾಮರ್ಥ್ಯಪೂರ್ಣ ಸ್ಪಷ್ಟತೆಯಲ್ಲಿ ಯೋಚನೆಯ ಶಿಖರಮೇಲೆ ಚಲಿಸುತ್ತವೆ, ಅವುಗಳ ಮೇಲೆ ಉಪನಿಷತ್ತುಗಳು ಹೆಚ್ಚಿನ ರೀತಿಯಲ್ಲಿ ಪೋಷಿಸಿಕೊಂಡು ಬಂದ ಉಸಿರಿನಿಂದ ಜೀವಿಸಿದವು. ಪ್ರಾಚೀನ ಕಾಲದ ಮನಸ್ಸು ತನ್ನ ಎಲ್ಲ ತತ್ವಜ್ಞಾನವನ್ನು, ಧರ್ಮವನ್ನು, ಅದರ

ನಾಗರಿಕತೆಯ ಸಾರಭೂತ ವಿಷಯಗಳನ್ನು ಈ ದೃಷ್ಟಾರ ಕವಿಗಳಿಗೆ ಹಿಂದಿನಿಂದ ಗುರುತಿಸಿದಾಗ ಅದು ತಪ್ಪು ಮಾಡಲಿಲ್ಲ, ಏಕೆಂದರೆ ಅದರ (ಭಾರತದ) ಜನರ ಭವಿಷ್ಯತ್ತಿನ ಆಧ್ಯಾತ್ಮಿಕತೆ ಅಲ್ಲಿ ಬೀಜ ರೂಪದಲ್ಲಿ ಇಲ್ಲವೆ ಮೊದಲ ಅಭಿವ್ಯಕ್ತಿಯಲ್ಲಿ ಒಳಗೊಂಡಿದೆ.

**CWSA, 20/326–27** – **ಶ್ರೀ ಅರವಿಂದರು**

*

**ವೇದ ಮಂತ್ರಗಳು**

ವೈದಿಕ ಕವಿಗಳ ಅರ್ಥದಲ್ಲಿ ಮಂತ್ರ ಎಂದರೆ ಸ್ಫೂರ್ತಿಗೊಳಗಾದದ್ದನ್ನು ಮತ್ತು ತೆರೆದು ತೋರಿಸಿದ್ದನ್ನು ಕಂಡುಕೊಳ್ಳುವಿಕೆ ಹಾಗೂ ದರ್ಶನ ಪಡೆದ ಯೋಚನೆ, ಅದರೊಂದಿಗೆ ಒಂದು ಸಿದ್ಧಿ ಇವೆಲ್ಲ ಇರುತ್ತಿದ್ದವು, ಭಾರವಾದ ಆದರೆ ಅವಶ್ಯವಾದ ಆಧುನಿಕ ಶಬ್ದಗಳಲ್ಲಿ ಹೇಳುವದಾದರೆ ಆ ಸಿದ್ಧಿ ದೇವನ ಒಂದಿಷ್ಟು ಆಳಾತಿ ಆಳದ ಸತ್ಯದ್ದು, ಆತ್ಮದ್ದು, ಮನುಷ್ಯ ಹಾಗೂ ಪ್ರಕೃತಿಯದು, ವಿಶ್ವದ್ದು, ಜೀವನ ಹಾಗೂ ವಸ್ತು–ವಿಷಯಗಳದು, ಯೋಚನೆ ಹಾಗೂ ಅನುಭವ, ಹಾಗೂ ಕ್ರಿಯೆಗೆ ಸಂಭವಿಸಿದುದು ಆಗಿರುತ್ತಿತ್ತು. ಅದು ಯೋಚಿಸುವ ಒಂದು ರೀತಿಯಾಗಿದ್ದು ಶ್ರೇಷ್ಠ ಆತ್ಮವೊಂದರ ಛಂದಸ್ಸಿನ ರೆಕ್ಕೆಗಳ ಮೇಲೆ ಬಂದಿತು. ಏಕೆಂದರೆ ನೋಡುವುದನ್ನು ಕೇಳಿಸಿಕೊಳ್ಳುವುದರಿಂದ ಪ್ರತ್ಯೇಕಿಸಲಾಗುತ್ತಿರಲಿಲ್ಲ, ಅದು ಒಂದೇ ಕ್ರಿಯೆಯಾಗಿತ್ತು. ಮನುಷ್ಯ ತನ್ನಲ್ಲಿಯೇ ಜೀವಿಸುವ ಸತ್ಯವನ್ನು ನಾವು ಸಿದ್ಧಿ ಎಂದು ಕರೆಯುತ್ತೇವೆ, ಮನುಷ್ಯ ಹಾಗೂ ಆ ಸತ್ಯವನ್ನು ಬೇರ್ಪಡಿಸಲಾಗದು, ಏಕೆಂದರೆ ಆತ್ಮದಲ್ಲಿ ಅದರ ಸಾನ್ನಿಧ್ಯ ಹಾಗೂ ಮನಸ್ಸನ್ನು ತನ್ನ ವಶದಲ್ಲಿ ಇಟ್ಟುಕೊಂಡಿರುವಿಕೆ ಇವುಗಳಲ್ಲಿ ಒಂದು ಮೊದಲು ಬರಬೇಕು ಇಲ್ಲವೆ ಜೊತೆಗೆ ಬರಬೇಕು, ಇದು ಸೃಷ್ಟಿಸುವವನಲ್ಲಿ ಇಲ್ಲವೆ ಮಾನವ ವಾಹಿನಿಯಲ್ಲಿ ಆಗಬೇಕು, ಆಂತರಿಕ ದೃಷ್ಟಿಯ ಆ ಅಭಿವ್ಯಕ್ತಿ ಹಾಗೂ ಕೇಳಿಸಿಕೊಳ್ಳುವಿಕೆ ಪ್ರಕಾಶಮಯ ಶಬ್ದದ ಆಕಾರ ತೆಗೆದುಕೊಳ್ಳುತ್ತದೆ.

**CWSA, 26/217–18** – **ಶ್ರೀ ಅರವಿಂದರು**

*

**ಮಂತ್ರ ಹೃದಯದ ಮೂಲಕ ಜನ್ಮತಾಳುತ್ತದೆ**

ಮಂತ್ರ ಹೃದಯದ ಮೂಲಕ ಜನ್ಮತಾಳುತ್ತದೆ ಮತ್ತು ಆಕಾರ ಪಡೆಯುತ್ತದೆ

ಇಲ್ಲವೆ ಯೋಚಿಸುವ ಮನಸ್ಸಿನ ಮೂಲಕ ಒಟ್ಟುಗೂಡಿ ಸನಾತನನ, ದೇವ ಪ್ರಮುಖನ ರಥವಾಗುತ್ತದೆ, ಅವನಲ್ಲಿ ಕಂಡ ಸತ್ಯ ಅವನ ಒಂದು ಮುಖ ಇಲ್ಲವೆ ರೂಪವಾಗಿರುತ್ತದೆ. ಯೋಗ್ಯನಾದ ಮನುಷ್ಯನ ಮನಸ್ಸಿನಲ್ಲಿಯೂ ಕೂಡ, ಅವನು ದೃಷ್ಟಾರ–ಕವಿಯ ಆ ಶಬ್ದವನ್ನು ಕೇಳಿಸಿಕೊಂಡಾಗ ನಮ್ಮ ಮಂತ್ರ ನಿಜವಾದದ್ದಾರೆ ಮೂರು ವಿಷಯಗಳು ಒಟ್ಟಿಗೆ ಬರಬೇಕು: ಆಳಾತಿಆಳದಲ್ಲಿರುವ ಸತ್ಯದ ದರ್ಶನ ಕೇಳಿಸಿಕೊಳ್ಳುವುದರೊಂದಿಗೆ ಜೊತೆಗೂಡಬೇಕು, ಮನಸ್ಸಿನಿಂದ ಅದರ ಆಳಾತಿ ಆಳದ ಆತ್ಮವನ್ನು ವಶಪಡಿಸಿಕೊಳ್ಳುವುದು ಮತ್ತು ಆತ್ಮಕ್ಕೆ ಹಿಂದಿರುಗುವುದು ಇದರ ಜೊತೆಗೆ ಶಬ್ದದ ಛಂದೋಬದ್ಧ ಸಂದೇಶ, ದೈವೀ ಸತ್ಯ ಕುರಿತು ಮನಸ್ಸಿನ ದರ್ಶನ ಕೂಡಲೆ ಇರಬೇಕು ಇಲ್ಲವೆ ಅನುಸರಿಸಬೇಕು. ಅದು ಹೆಚ್ಚಾಗಿ ರಹಸ್ಯ ಎಂಬ ಎಣಿಕೆಗೆ ಧ್ವನಿಗೊಡಬಹುದು, ಆದರೆ ಮೂಲಭೂತವಾಗಿ, ಆ ಸ್ಫೂರ್ತಿಪಡೆದ ಹಾಗೂ ತೆರೆದು ತೋರಿಸುವ ಶಬ್ದದ ಜನ್ಮ ಹಾಗೂ ಪರಿಣಾಮ ಕುರಿತು ಇದಕ್ಕಿಂತ ಹೆಚ್ಚು ಕಡಿಮೆ ಹೆಚ್ಚು ಸಂಪೂರ್ಣ ವರ್ಣನೆ ಇರುವುದು ಸಾಧ್ಯವಿಲ್ಲ. ಆ ಶಬ್ದವನ್ನು ನಿಜವಾಗಿಯೂ ಶ್ರೇಷ್ಠವಾಗಿರುವ ಕಾವ್ಯದ ಅತ್ಯುಚ್ಚ ಆಸ್ಫೋಟಗಳಿಗೆ ವೈದಿಕ ಋಷಿಗಳು ಉದ್ದೇಶವಿರಿಸಿಕೊಂಡುದುದಕ್ಕಿಂತ ಹೆಚ್ಚು ಕಡಿಮೆ ಪ್ರಮಾಣದಲ್ಲಿ–ಯಾದರೂ ಅನ್ವಯಿಸಬಹುದು. ಕಾವ್ಯ ಮಂತ್ರವಾಗಬೇಕಾದರೆ ಅದು ಆಳಾತಿ ಆಳದಲ್ಲಿರುವ ಸತ್ಯದ ಧ್ವನಿಯಾಗಿರಬೇಕು ಮತ್ತು ಆ ಸತ್ಯದ ಛಂಧೋಗತಿ ಹಾಗೂ ಮಾತುಗಳ ಅತ್ಯುಚ್ಚ ಸಾಮರ್ಥ್ಯದ ಹೊದಿಕೆಯೊಳಗಿರಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಮಂತ್ರ ನೇರವಾದ, ಅತ್ಯಂತ ಉಚ್ಚಸ್ಥಿತಿಗೇರಿಸಿದ, ಅತಿ ಹೆಚ್ಚಿನ ರೀತಿಯಲ್ಲಿ ಗಾಢವಾದ ದೈವಿಕ ಭಾರ ಹೊತ್ತ ಛಂದೋಗತಿ ಇರುವ ಶಬ್ದ, ಅದು ಸ್ಫೂರ್ತಿಯನ್ನು ಹೊರಗೆಡಹುವಂತಹದು, ಅಂತರ್ಬೋಧೆಯನ್ನು, ಮೈವೆತ್ತುವಂ–ತಹದು, ಅದು ಮನಸ್ಸನ್ನು ದರ್ಶನದೊಂದಿಗೆ, ಆತ್ಮದ್ದೇ ಸಾನ್ನಿಧ್ಯದೊಂದಿಗೆ, ವಸ್ತು–ವಿಷಯಗಳ ಆಳಾತಿ ಆಳದ ನೈಜತೆಯೊಂದಿಗೆ, ಅದರ ಸತ್ಯದೊಂದಿಗೆ ಹಾಗೂ ಅದರ ದೈವಿಕ ಆತ್ಮದ ರೂಪಗಳೊಂದಿಗೆ, ಜೀವಿಸುತ್ತಿರುವ ದೈವೀ ಸತ್ಯದಿಂದ ಜನ್ಮತಾಳಿದ ದೇವಪ್ರಮುಖರೊಂದಿಗೆ ಆತ್ಮವನ್ನು ತುಂಬುತ್ತದೆ. ಇಲ್ಲವೆ ಅದು ಪರಮೋಚ್ಚ ಭಾಷೆ, ಸಾಂತವಾಗಿರುವುದೆಲ್ಲದರ ಮೇಲೆ ಹಿಡಿತ ಸಾಧಿಸುತ್ತದೆ ಮತ್ತು ಪ್ರತಿಯೊಂದರಲ್ಲಿ ಪ್ರಕಾಶವನ್ನು ಮತ್ತು ತನ್ನದೇ ಅನಂತತೆಯ ಧ್ವನಿಯನ್ನು ತರುತ್ತದೆ ಎಂದು ಹೇಳೋಣ.

**CWSA, 26/218** **– ಶ್ರೀ ಅರವಿಂದರು**

*

## ನಿಜವಾದ ಅಭೀಪ್ಸೆ ಮತ್ತು ಮಂತ್ರ

ನಿಜವಾದ ಅಭೀಪ್ಸೆ ಶಿರ (ಮಿದುಳು)ದಿಂದ ಬರುವುದಿಲ್ಲ. ಅದಕ್ಕೆ ಯೋಚನೆಯಿಂದ ಸೂತ್ರ ಕೊಟ್ಟಾಗಲೂ ಅದು ಹೃದಯದ ಜ್ವಾಲೆಯ ಹಾಗೆ ಜಿಗಿದು ಬರುತ್ತದೆ. ವೇದಗಳನ್ನು ಕುರಿತು ಶ್ರೀ ಅರವಿಂದರು ಬರೆದದ್ದನ್ನು ನೀವು ಓದಿರುವಿರೋ ಇಲ್ಲವೋ ನನಗೆ ತಿಳಿಯದು, ಅವರು ಒಂದೆಡೆ ವಿವರಣೆ ನೀಡಿದ್ದಾರೆ. ಈ ಸ್ತೋತ್ರಗಳನ್ನು ಮನಸ್ಸಿನ ಬಲದಿಂದ ಬರೆದಿಲ್ಲ. ಮನುಷ್ಯ ಯೋಚಿಸಬಹುದಾದಂತೆ ಅವು ಪ್ರಾರ್ಥನೆಗಳಲ್ಲ, ಆದರೆ ಅಭೀಪ್ಸೆಯ ಅಭಿವ್ಯಕ್ತಿಗಳು, ಆ ಅಭೀಪ್ಸೆ ಒಂದು ಪ್ರಚೋದನೆಯಿಂದ ಬಂದಿತ್ತು, ಹೃದಯದಿಂದ ಬರುವ ಜ್ವಾಲೆಯ ಹಾಗಿತ್ತು. (ಆದಾಗ್ಯೂ ನಿಖರವಾದ ಶಬ್ದಗಳಲ್ಲಿ ಅದು ಭೌತಿಕ ಹೃದಯವಲ್ಲ, ಆದರೆ ಸತ್ತೆಯ ಮನೋವೈಜ್ಞಾನಿಕ ಕೇಂದ್ರ). ಅವು ಯೋಚಿಸಿ ಹೊರತೆಗೆದ ಶಬ್ದಗಳಲ್ಲ, ಅನುಭವಕ್ಕೆ ಹೊಂದಿಸಿದವುಗಳಲ್ಲ, ಅನುಭವಗಳು ಇಡಿಯಾಗಿ ಮೂರ್ತರೂಪದಲ್ಲಿ ನಿಖರವಾದ, ಯಥಾವತ್ತಾದ, ಅನಿವಾರ್ಯವಾದ ಶಬ್ದಗಳಿಂದ ಬಂದಂತಹವು.– ಅವುಗಳನ್ನು ಬದಲು ಮಾಡಲಾಗುತ್ತಿರಲಿಲ್ಲ. ಇದು ಅಭೀಪ್ಸೆಯ ನಿಜವಾದ ಸ್ವಭಾವ. ನೀವು ಅದಕ್ಕೆ ಸೂತ್ರ ರೂಪ ಕೊಡುವುದನ್ನು ಅರಸುವುದಿಲ್ಲ. ಅದು ನಿಮ್ಮಿಂದ ತಯಾರಾದ ಜ್ವಾಲೆಯ ಹಾಗೆ ಪುಟಿದೆದ್ದು ಬರುತ್ತದೆ. ಮತ್ತು ಅಲ್ಲಿ ಶಬ್ದಗಳಿದ್ದರೆ (ಕೆಲವೊಮ್ಮೆ ಅಲ್ಲಿ ಯಾವ ಶಬ್ದವೂ ಇರುವುದಿಲ್ಲ), ಅವುಗಳನ್ನು ಬದಲುಮಾಡಲಾಗದು, ನೀವು ಒಂದು ಶಬ್ದದ ಸ್ಥಾನದಲ್ಲಿ ಇನ್ನೊಂದು ಶಬ್ದವನ್ನು ತರಲಾರಿರಿ, ಪ್ರತಿಯೊಂದು ಶಬ್ದ ಸರಿಯಾದ ಶಬ್ದವೇ ಆಗಿರುತ್ತದೆ. ಅಭೀಪ್ಸೆಗೆ ಸೂತ್ರರೂಪ ಕೊಟ್ಟಾಗ, ಅದನ್ನು ನಿರಪೇಕ್ಷವಾಗಿ, ಪರಿಪೂರ್ಣವಾಗಿ, ಬದಲು ಮಾಡುವ ಸಾಧ್ಯತೆಯಿರದಂತೆ ಕೈಕೊಳ್ಳಲಾಗಿರುತ್ತದೆ.

**CWM, 4/136** **– ಶ್ರೀಮಾತೆ**

*

## ಸಂವ್ವನನ ಅಂಗೀರಸ, ಸೂಕ್ತ 191

ಸಂ ಗಚ್ಛಧ್ವಂ ಸಂ ವದಧ್ವಂ ಸಂ ವೋ ಮನಾಂಸಿ ಜಾನತಾಮ್ ।
ದೇವಾ ಭಾಗಂ ಯಥಾ ಪೂರ್ವೇ ಸಂಜಾನಾನಾ ಉಪಾಸತೆ ॥ 2 ॥

ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ ॥ 4 ॥

ಒಟ್ಟಿಗೆ ಸೇರಿಕೊಳ್ಳಿರಿ, ಒಂದು ಶಬ್ದವನ್ನು ಹೇಳಿರಿ, ನಿಮ್ಮ ಮನಸ್ಸುಗಳು, ಒಂದು ಜ್ಞಾನವನ್ನು ತಲುಪಲಿ, ಇದು ಪ್ರಾಚೀನ ಕಾಲದ ದೇವರುಗಳು ಒಂದೇ ಜ್ಞಾನದತ್ತ ತಲುಪಿ ತಮ್ಮ ಭಾಗದ ಪಾಲನ್ನು ತೆಗೆದುಕೊಂಡ ರೀತಿಯದಾಗಿರಬೇಕು.

ನಿಮ್ಮ ಅಭೀಪ್ಸೆ ಏಕೈಕವಾಗಲಿ ಹಾಗೂ ಸರ್ವರಿಗೂ ಸಾಮಾನ್ಯವಾಗಲಿ, ನಿಮ್ಮ ಹೃದಯಗಳು ಏಕವಾಗಲಿ, ನಿಮ್ಮ ಮನಸ್ಸು ಸರ್ವರಿಗೂ ಸಾಮಾನ್ಯವಾಗಲಿ, ಅದರಿಂದಾಗಿ ಹತ್ತಿರದ ಒಡನಾಟ ನಿಮ್ಮದಾಗಬಹುದು.

**CWSA, 16/446–447** **– ಶ್ರೀ ಅರವಿಂದರು**

*

## ಯಜ್ಞದ ಪಥ

### ಯಜ್ಞದ ಪುರೋಹಿತ

ದೈವೀ ಜ್ಞಾನ ಹಾಗೂ ದೈವೀ ಸಾಮರ್ಥ್ಯ ಇವು ಅವಶ್ಯವಾಗಿವೆ. ಯಜ್ಞದ ಮೂಲಕ ಮಾತ್ರ ಬರಬಲ್ಲವು ಮತ್ತು ಪರಿಪೂರ್ಣವಾಗಿ ಬೆಳೆಯಬಲ್ಲವು. ನಾವು ಭಗವಂತನನ್ನು ಸ್ವಾಗತಿಸಬೇಕು ಮತ್ತು ಯಜ್ಞದ ವೇದಿಕೆಯ ಮೇಲೆ ಅವನನ್ನು ವಿಧಿವತ್ತಾಗಿ ಕುಳ್ಳಿರಿಸಬೇಕು. ಭಗವಂತ ಮನುಷ್ಯನ ಹೃದಯದಲ್ಲಿ ಪ್ರವೇಶಿಸದಿದ್ದರೆ ಪ್ರಕಟನಾಗಿ ತನ್ನನ್ನು ಅಲ್ಲಿ ಸ್ಥಾಪಿಸದಿದ್ದರೆ ಮಾನವ ಸತ್ತೆಗೆ ದೈವಿಕತೆಯನ್ನು ಹಾಗೂ ಅಮರತ್ವವನ್ನು ಸಿದ್ಧಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ದೈವೀ ಪ್ರಮುಖ ಎಚ್ಚತ್ತುಕೊಳ್ಳುವುದಕ್ಕಿಂತ ಮೊದಲು ಅವನನ್ನು ಆಹ್ವಾನಿಸಲು, ಯಜ್ಞ ಕೈಕೊಳ್ಳುವವನ ವತಿಯಿಂದ ಪೌರೋಹಿತ್ಯವನ್ನು ಸ್ವೀಕರಿಸುವುದಕ್ಕೆ ಮಂತ್ರ ದೃಷ್ಟಾರರು ಒಪ್ಪಿಗೆ ನೀಡುತ್ತಾರೆ. ವಿಶ್ವಾಮಿತ್ರ ಹಾಗೂ ವಶಿಷ್ಟ ಇವರು ಸುದಾಸ, ತ್ರದಶ್ಯು ಹಾಗೂ ಭರತನ ಮಗ ಇವರಿಗೆ ಪ್ರತಿನಿಧಿ (ಪುರೋಹಿತ)ಗಳಾಗಲು ಒಪ್ಪಿಕೊಂಡಿದ್ದರು. ಆದರೆ ಪುರೋಹಿತನ, ಹಾಜರಾತಿಗೆ ಕರೆಕೊಡುವವನ ಸ್ಥಾನವನ್ನು ಯಜ್ಞದ ವೇದಿಕೆಯ ಮೇಲೆ ಒಪ್ಪಿಕೊಳ್ಳೆಂದು ಭಗವಂತನಿಗೆ ಆಹ್ವಾನ ನೀಡುವುದಿರುತ್ತದೆ, ಅದಕ್ಕಾಗಿ ಮಂತ್ರಗಳನ್ನು ಹೇಳಲಾಗುತ್ತದೆ ಹಾಗೂ

ಕಾಣಿಕೆಗಳನ್ನು ಅರ್ಪಿಸಲಾಗುತ್ತದೆ. ಹೃದಯದಲ್ಲಿ ಭಗವಂತ ಎಚ್ಚತ್ತುಕೊಳ್ಳದಿದ್ದರೆ ಸತ್ತೆಯನ್ನು ಯಾರೂ ಮುಕ್ತಗೊಳಿಸಲಾರರು. ಮುಕ್ತಗೊಳಿಸುವವನು ದೇವನೇ ಆಗಿದ್ದಾನೆ. ಸಿದ್ಧಿಯನ್ನು ದಯಪಾಲಿಸುವ ಏಕೈಕ ಪುರೋಹಿತ ದೇವನೇ ಆಗಿದ್ದಾನೆ. ಭಗವಂತನೇ ಪ್ರತಿನಿಧಿ (ಪುರೋಹಿತ) ಆಗಿದ್ದಾಗ ಅವನು ಅಗ್ನಿಯೆಂದು ಪರಿಚಿತನಾಗಿರುತ್ತಾನೆ, ಅವನು ರಹಸ್ಯ ಅಗ್ನಿ, ಅವನಿಗೆ ಅಗ್ನಿಯ ರೂಪವಿರುತ್ತದೆ. ಅಗ್ನಿಯ ಪೌರೋಹಿತ್ಯ ಅತ್ಯಂತ ಮಂಗಳಕರ ಪ್ರಾರಂಭ, ಎಲ್ಲ ವಿವರಗಳಲ್ಲಿ ಪರಿಪೂರ್ಣವಾದ ಯಶಸ್ವಿ ಯಜ್ಞವನ್ನು ಕೈಕೊಳ್ಳುವುದಕ್ಕೆ ಅತ್ಯಂತ ಒಳ್ಳೆಯ ಸಾಧನ. ಆ ಕಾರಣದಿಂದಾಗಿ ಅಗ್ನಿಯ ಪೌರೋಹಿತ್ಯವನ್ನು ಋಗ್ವೇದದ ಮೊದಲನೆಯ ಸೂಕ್ತದ ಮೊದಲನೆಯ ಋಕ್‌ನಲ್ಲಿ ಸ್ಥಾಪಿಸಲಾಗಿದೆ.

*

**ಅಗ್ನಿ: ಭಗವಂತನ ಸರ್ವಜ್ಞ ಸಾಮರ್ಥ್ಯ**

ಬೀಜಾಕ್ಷರ ಅಗ್‌ದ ಅರ್ಥ ಸಾಮರ್ಥ್ಯ ಎಂದಿರುತ್ತದೆ. ಸಾಮರ್ಥ್ಯ ಪೂರ್ಣನಾದವನು 'ಅಗ್ನಿ'ಯಾಗಿರುತ್ತಾನೆ. ಮತ್ತೆ ಅಗ್ ಬೀಜಾಕ್ಷರದ ಪ್ರಾಮುಖ್ಯತೆ ಪ್ರಕಾಶ ಇಲ್ಲವೆ ಪ್ರಜ್ವಲಿಸುವಿಕೆ ಎಂಬುದರಲ್ಲಿದೆ, ಆ ಸಾಮರ್ಥ್ಯ ಜ್ಞಾನದ ಪ್ರಕಾಶ ಪ್ರಜ್ವಲಿಸುತ್ತಿರುವುದರಲ್ಲಿ ಹರಡಿಕೊಂಡಿರುತ್ತದೆ, ಅದು ಜ್ಞಾನದ ಪರಿಣಾಮಕಾರಿ ಶಕ್ತಿ. ಬೀಜಾಕ್ಷರ ಅಗ್ ಕ್ಕೆ ಆದ್ಯತೆ ಮತ್ತು ನಿಯಂತ್ರಣ ಎಂಬ ಅರ್ಥ ಕೂಡ ಇದೆ. ಆ ಶಕ್ತಿ ಆದಿಕಾಲದ ಅಂಶ, ಪ್ರಕಟಗೊಂಡ ವಿಶ್ವಂಭರ ಶಕ್ತಿಗಳಲ್ಲಿ ಮೂಲಭೂತ ಹಾಗೂ ಸರ್ವೋಚ್ಚವಾದದ್ದು, ಆ ಶಕ್ತಿಯನ್ನು ಹೊಂದಿದವನು ಅಗ್ನಿ. ಬೀಜಾಕ್ಷರ ಅಗ್ ಕ್ಕೆ 'ನಯನ' ಎಂಬ ಇನ್ನೊಂದು ಅರ್ಥವೂ ಇದೆ, ಅದು ಮುನ್ನಡೆಸುವುದು, ನಿರ್ದೇಶಿಸುವುದು ಎಂಬ ಅರ್ಥ ಹೊಂದಿದೆ, ವಿಶ್ವದಲ್ಲಿ ಆದಿಕಾಲದ, ಸನಾತನ, ಪ್ರಾಚೀನ ಹಾಗೂ ಸಾರ್ವಭೌಮ ಶಕ್ತಿಯನ್ನು ಹೊಂದಿದವನೊಬ್ಬ ಅದನ್ನು (ವಿಶ್ವವನ್ನು) ನಿಯೋಜಿತ ಮಾರ್ಗದ ಮೂಲಕ, ನಿಯೋಜಿತ ಗಮ್ಯಸ್ಥಾನ (destination) ದತ್ತ ಮುನ್ನಡೆಸಿಕೊಂಡು ಹೋಗುತ್ತಾನೆ, ತರುಣನಾದ ಅವನು ದೇವ ಸೈನ್ಯದ ಅತ್ಯುಚ್ಚ ಅಧಿಕಾರಿ, ಮಾರ್ಗದ ಮೇಲೆ ಮಾರ್ಗದರ್ಶಕ, ಅವನು ತನ್ನ ಜ್ಞಾನ ಹಾಗೂ ಸಾಮರ್ಥ್ಯಗಳಿಂದ ಪ್ರಕೃತಿಯ ನಾನಾ ಬಗೆಯ ಶಕ್ತಿಗಳಿಗೆ, ಅವುಗಳ ಭಿನ್ನ ಚಟುವಟಿಕೆಗಳಿಗೆ ಆಸರೆ ನೀಡುತ್ತಾನೆ ಮತ್ತು ಅವುಗಳನ್ನು ಸರಿಯಾದ ಮಾರ್ಗದಲ್ಲಿ ಇರಿಸುತ್ತಾನೆ, ಆ ಪ್ರಾಬಲ್ಯ ಅಗ್ನಿಯದಾಗಿರುತ್ತದೆ. ವೇದದ

ನೂರಾರು ಸೂಕ್ತಗಳಲ್ಲಿ ಅಗ್ನಿಯ ಈ ಎಲ್ಲ ಸದ್ಗುಣಗಳ ಬಗ್ಗೆ ಹೇಳಲಾಗಿದೆ ಅವುಗಳನ್ನು ಸ್ತುತಿಸಲಾಗಿದೆ; ಈ ವಿಶ್ವದ ಮೂಲ ಕಾರಣ, ಅದರ ಎಲ್ಲ ಅಭಿವ್ಯಕ್ತಿಗಳಲ್ಲಿ ಅವಿತುಕೊಂಡದ್ದು, ಎಲ್ಲ ಶಕ್ತಿಗಳಲ್ಲಿ ಅತ್ಯಂತ ಮೂಲಭೂತ–ವಾದದ್ದು, ಅವುಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು, ಎಲ್ಲ ದೇವತೆಗಳ ವಾಸಸ್ಥಾನ, ಎಲ್ಲ ಧರ್ಮಗಳ ನಿಯಂತ್ರಕ, ವಿಶ್ವದ ಅತ್ಯಂತ ಗಾಢ ಉದ್ದೇಶ ಹಾಗೂ ಸತ್ಯ ಇವುಗಳ ರಕ್ಷಕ, ಈ ಅಗ್ನಿ ಬೇರೆ ಯಾರೂ ಅಲ್ಲ, ಆದರೆ ಭಗವಂತನ ಚೈತನ್ಯ ನೀಡುವ ಶಕ್ತಿ, ಶಾಖ ಹಾಗೂ ಪ್ರಜ್ವಲತೆ ಎಂದು ಪ್ರಕಟವಾಗಿದೆ. ದೈವೀ ಸತ್ಯ ಪ್ರಜ್ಞೆ (ಋತ್‌ಚಿತ್)– ದಿವ್ಯಾನಂದ ಇದರಲ್ಲಿ ನಿಜವಾದ ಅಸ್ತಿತ್ವದ ತತ್ವ ತನ್ನಲ್ಲಿಯೇ ದೈವೀ ಪ್ರಜ್ಞೆಯನ್ನು ಒಳಗೊಂಡಿರುತ್ತದೆ. ದೈವೀ ಅಸ್ತಿತ್ವದ ಪ್ರಜ್ಞೆ ಅಸ್ತಿತ್ವದ ದೈವೀ ಶಕ್ತಿಯೂ ಕೂಡ ಆಗಿರುತ್ತದೆ, ದೈವೀ ಪ್ರಜ್ಞೆಯ ಶಕ್ತಿ ವಿಶ್ವವನ್ನು ಪೋಷಿಸುವ ಸಾಮರ್ಥ್ಯವಾಗಿರುತ್ತದೆ, ಅದು ಮೂಲ ಕಾರಣ ಹಾಗೂ ಸೃಷ್ಟಿಕರ್ತ, ಜೀವನ ಹಾಗೂ ವಿಶ್ವದ ನಿಯಂತ್ರಕ.

*

**ಅಗ್ನಿ ಸನಾತನ ಸತ್ಯವನ್ನು ಕಾಪಾಡಿಕೊಂಡು ಬರುತ್ತಾನೆ**

ಜಗತ್ತಿನ ಬಾಹ್ಯ ತೋರಿಕೆ ಭಿನ್ನವಾಗಿದೆ, ಅಲ್ಲಿ ಮಿಥ್ಯೆ, ಅಜ್ಞಾನ, ಅನಿಷ್ಟ ಮತ್ತು ವಿಫಲತೆ ಇವುಗಳ ಪ್ರಾಬಲ್ಯವಿರುತ್ತದೆ. ಹಾಗಿರುವಾಗಲೂ ಮಗುವನ್ನು ಅಂಜಿಸುವ ಮುಖವಾಡದ ಹಿಂದೆ ದೈವೀ ಮಾತೆಯ ಮುಖ ಅಡಗಿಕೊಂಡಿರುತ್ತದೆ. ಅಪ್ರಜ್ಞೆ, ಜಡತೆ ಹಾಗೂ ವೇದನೆ ಇವು ಕೇವಲ ಮಾಟಗಾರಿಕೆಗೆ ಸೇರಿದವುಗಳಾಗಿರುತ್ತವೆ. ಆ ಕಾರಣದಿಂದಾಗಿಯೆ ವೇದದಲ್ಲಿ ನಮ್ಮ ಸಾಮಾನ್ಯ ಪ್ರಜ್ಞೆಯನ್ನು ರಾತ್ರಿ ಎಂದು ಕರೆಯಲಾಗಿದೆ, ನಮ್ಮ ಬುದ್ಧಿಮತ್ತೆಯ ಅತ್ಯುಚ್ಚ ಅಭಿವೃದ್ಧಿ ಕೂಡ ದೈವೀ ರಾತ್ರಿಯ ಕೇವಲ ಚಂದ್ರನ ಬೆಳಕು ಹಾಗೂ ತಾರೆಗಳು ಇವುಗಳಿಂದ ಅಲಂಕೃತ ಲೀಲೆ. ಆದರೆ ಈ ರಾತ್ರಿಯ ಎದೆಯಲ್ಲಿ ದೈವೀಮಾತೆಯ ಸಹೋದರಿ ಉಷಾ ಅಡಗಿಕೊಂಡಿದ್ದು ತನ್ನೊಡನೆ ಭವಿಷ್ಯತ್ತಿನ ದೈವೀ ಜ್ಞಾನದ ಅನಂತದಿಂದ ಜನ್ಮತಾಳಿದ ಪ್ರಕಾಶವನ್ನು ಕೊಂಡೊಯ್ಯುತ್ತಾಳೆ. ಪೃಥ್ವಿ– ಪ್ರಜ್ಞೆಯ ರಾತ್ರಿಯಲ್ಲೂ ಕೂಡ ಅಗ್ನಿಯ ಶಕ್ತಿ ಮತ್ತೆ ಮತ್ತೆ ಧಗಧಗಿಸುತ್ತದೆ ಮತ್ತು ಉಷೆಯ ಉಜ್ವಲತೆ ಪ್ರಕಾಶವನ್ನು ಹೊರಸೂಸುತ್ತದೆ. ಕುರುಡು ಜಗತ್ತಿನಲ್ಲಿ ಅಗ್ನಿಯ ಶಕ್ತಿ ದೈವೀ ಪ್ರಜ್ಞೆಯ ಉಷಾ ಜನ್ಮತಾಳಿ ಬರುವುದನ್ನು ತಯಾರಿಸುತ್ತದೆ. ಈ ಜಗತ್ತಿನಲ್ಲಿ ಪರಮೋಚ್ಚ ಅಗ್ನಿಯ ಶಕ್ತಿಯನ್ನು ಕಳಿಸಿದ್ದಾನೆ ಮತ್ತು ಅದನ್ನು ಅಲ್ಲಿ ಸ್ಥಾಪಿಸಿದ್ದಾನೆ;

ವಸ್ತುಗಳಲ್ಲಿ, ಜೀವಿಸುವ ಸತ್ತೆಗಳಲ್ಲಿ ಮರೆಯಲ್ಲಿದ್ದುಕೊಂಡು ಅಗ್ನಿ ಜಗತ್ತಿನ ಎಲ್ಲ ಚಲನೆಗಳನ್ನು ನಿಯಂತ್ರಿಸುತ್ತಾನೆ. ತಾತ್ಕಾಲಿಕ ಮಿಥ್ಯೆಯ ಮಧ್ಯದಲ್ಲಿದ್ದು ಸನಾತನ ದೈವೀಸತ್ಯವನ್ನು ಕಾಪಾಡಿಕೊಂಡು ಬರುತ್ತಾನೆ, ಅಚೇತನವಾದದ್ದರಲ್ಲಿ ಹಾಗೂ ಜಡವಾದದ್ದರಲ್ಲಿ ಅಗ್ನಿ ಅಚೇತನದ ರಹಸ್ಯ ಪ್ರಜ್ಞೆಯಾಗಿರುತ್ತಾನೆ, ಭೌತದ್ರವ್ಯದ ಭಯಾನಕ ಕ್ರಿಯಾಶೀಲ ಶಕ್ತಿಯಾಗಿರುತ್ತಾನೆ. ಅಜ್ಞಾನದಲ್ಲಿ ಮುಚ್ಚುಮರೆಯಲ್ಲಿರುವ ಅಗ್ನಿ ಭಗವಂತನ ಮರೆಯಲ್ಲಿರುವ ಜ್ಞಾನವಾಗಿರುತ್ತಾನೆ. ಪಾಪದ ಕುರೂಪದಲ್ಲಿ ಅಗ್ನಿ ದೇವನ ಮೂಲರೂಪದ ನಿರ್ಮಲ ಪರಿಶುದ್ಧತೆಯಾಗಿರುತ್ತಾನೆ, ದುಃಸ್ಥಿತಿ ಹಾಗೂ ವೇದನೆಯ ಮಂಜಿನಲ್ಲಿ ಅಗ್ನಿ ಅವನ ವಿಶ್ವಂಭರ ದಿವ್ಯಾನಂದದಲ್ಲಿ ಪ್ರಜ್ವಲಿಸುವ ಆನಂದವಾಗಿರುತ್ತಾನೆ. ದೌರ್ಬಲ್ಯದ, ಮರಗಟ್ಟಿಸುವ ಸ್ಥಿತಿಯಲ್ಲಿರುವ ಕೊಳಕಾದ ಹರಿದ ಬಟ್ಟೆಗಳಲ್ಲಿ ಅಗ್ನಿ ತನ್ನ ಎಲ್ಲವನ್ನೂ ಹೊತ್ತುಕೊಳ್ಳುವ, ಎಲ್ಲವನ್ನೂ ಸಿದ್ಧಿಸಿಕೊಳ್ಳುವ ಪರಿಣಾಮಕಾರಿ ಕ್ರಿಯೆಯಾಗಿರುತ್ತಾನೆ. ಒಮ್ಮೆ ನಾವು ಈ ಅಂಧಕಾರದ ಆವರಣವನ್ನು ಸೀಳಿಕೊಂಡು ಹೋಗಿ ಈ ಅಗ್ನಿಯನ್ನು ಹೊರಗೆಡವಿ ನಮ್ಮ ಹೃದಯಗಳಲ್ಲಿ ಹೊತ್ತಿಸುವುದು ಸಾಧ್ಯವಾದರೆ ಬಿಡುಗಡೆ–ಗೊಳಿಸಿ ಮೇಲ್ಗಡೆಗೆ ನಿರ್ದೇಶನ ಮಾಡುವಂತಾದರೆ ಅವನು ದೈವೀ ಉಷಾಳನ್ನು ಕೆಳಗೆ ಮಾನವ ಪ್ರಜ್ಞೆಯಲ್ಲಿ ಕೆಳಗಿಳಿಸಿ ತರುತ್ತಾನೆ, ಆಂತರಿಕ ದೇವರುಗಳನ್ನು ಜಾಗ್ರತಗೊಳಿಸುತ್ತಾನೆ, ಮಿಥ್ಯೆಯ ಅಜ್ಞಾನದ ವೇದನೆ ಹಾಗೂ ವಿಫಲತೆಗಳ ಕಪ್ಪಾದ ಹೊದಿಕೆಯನ್ನು ತೆಗೆದು ಹಾಕುತ್ತಾನೆ ಮತ್ತು ನಮ್ಮ ಸ್ವಭಾವದಲ್ಲಿ ನಾವು ಅಮರರಾಗುವಂತೆ ಮಾಡುತ್ತಾನೆ.

*

**ಅಗ್ನಿ ನಮ್ಮೊಳಗೆ ಭಗವಂತನ ಮೊದಲ ಜೀವಿಸುವ ರೂಪ**

ಅಗ್ನಿ ನಮ್ಮೊಳಗೆ ಜೀವಿಸುವ ಭಗವಂತನ ಮೊದಲ ಹಾಗೂ ಪರಮೋಚ್ಚ ರೂಪ. ಹೃದಯದ ವೇದಿಕೆಯ ಮೇಲೆ ಅವನನ್ನು ಹೊತ್ತಿಸೋಣ, ಯಜ್ಞದ ಪುರೋಹಿತನೆಂದು ಅವನನ್ನು ಸ್ವಾಗತಿಸೋಣ ಮತ್ತು ಅವನ ಸಾಮರ್ಥ್ಯ ಹಾಗೂ ಜ್ಞಾನದ ಜ್ವಾಲೆಯಲ್ಲಿ, ಅವನ ಬಂಗಾರ ವರ್ಣದ ಮತ್ತು ತೆರೆದುತೋರಿಸುವ ಜ್ಞಾನದ ಜ್ವಾಲೆಯಲ್ಲಿ, ಎಲ್ಲವನ್ನೂ ಸುಟ್ಟು ಹಾಕುವ ಹಾಗೂ ಪರಿಶುದ್ಧಗೊಳಿಸುವ ಸಾಮರ್ಥ್ಯದ ಜ್ವಾಲೆಯಲ್ಲಿ ನಮ್ಮ ಎಲ್ಲ ಕ್ಷುದ್ರ ಸಂತೋಷ ಹಾಗೂ ದುಃಖಗಳನ್ನು

ಅರ್ಪಿಸೋಣ, ನಮ್ಮ ಎಲ್ಲ ಸೀಮಿತ ಹಾಗೂ ಕ್ಷುದ್ರ ಪ್ರಯತ್ನ ಹಾಗೂ ವಿಫಲತೆ–ಗಳನ್ನು, ಎಲ್ಲ ಮಿಥ್ಯೆ ಹಾಗೂ ಮೃತ್ಯುವನ್ನು ಅರ್ಪಿಸೋಣ. ಗತಕಾಲದ್ದು ಹಾಗೂ ಸತ್ಯವಲ್ಲದ್ದು ಸುಟ್ಟು ಬೂದಿಯಾಗಲಿ; ಆಗ ಸ್ವರ್ಗವನ್ನು ಮುದ್ದಿಸುವ ಅಗ್ನಿಯ ಶಕ್ತಿಯಿಂದ ಹೊಸದಾದದ್ದು ಹಾಗೂ ಸತ್ಯವಾದದ್ದು ಜೀವಂತವಿರುವ ಸಾವಿತ್ರಿ–ಯಾಗಿ ಮೇಲಕ್ಕೇಳುತ್ತದೆ. ನಮ್ಮ ಹೃದಯದಲ್ಲಿ ಪ್ರತಿಯೊಂದೂ ಇದೆ ಎಂಬುದನ್ನು ಮರೆಯುವುದು ಬೇಡ; ಅಗ್ನಿ ಮನುಷ್ಯನ ಒಳಗಿರುತ್ತಾನೆ, ವೇದಿಕೆ, ಕಾಣಿಕೆ, ಕಾಣಿಕೆ ನೀಡುವವ ಅಂತರಂಗದಲ್ಲಿರುತ್ತಾರೆ ದೃಷ್ಟಾರನ, ದೈವೀಶಬ್ದದ ಹಾಗೂ ದೇವತೆ ಇವೆಲ್ಲವುಗಳ ಒಳಗೂ ಇರುತ್ತಾನೆ. ಬ್ರಹ್ಮನನ್ನು ಕುರಿತಾಗಿರುವ ವೈದಿಕ ಸ್ತೋತ್ರ, ದೈವ–ವಿರೋಧಿ ದಾನವರು ಹಾಗೂ ರಾಕ್ಷಸರು ಅಂತರಂಗದಲ್ಲಿರುತ್ತಾರೆ, ವೃತ್ರ ಹಾಗೂ ವೃತ್ರನನ್ನು ನಾಶಮಾಡಿದವ ಇವರೂ ಅಂತರಂಗದಲ್ಲಿರುತ್ತಾರೆ, ದೇವರುಗಳು ಹಾಗೂ ದಾನವರು ಇವರ ನಡುವಿನ ಸಮರ ಅಂತರಂಗದಲ್ಲಿ ಸಂಭವಿಸುತ್ತದೆ, ವಶಿಷ್ಠ, ವಿಶ್ವಾಮಿತ್ರ, ಅಂಗೀರ, ಅತ್ರಿ, ಭೃಗು, ಅಥರ್ವ, ಸುದಾಸ, ತ್ರಿಸದಸ್ಯು– ಬ್ರಹ್ಮನನ್ನು ಕುರಿತು ಈ ಐದು ಬಗೆಯ ಆರ್ಯನ್ ಅನ್ವೇಷಕರು ಹಾಗೂ ದಸ್ಯುಗಳು– ಇವರೆಲ್ಲ ಅಂತರಂಗದಲ್ಲಿರುತ್ತಾರೆ. ಮನುಷ್ಯನ ಆತ್ಮ ಹಾಗೂ ವಿಶ್ವ ಏಕೈಕವಾಗಿವೆ. ಹತ್ತಿರವಿದ್ದವರು, ದೂರದಲ್ಲಿರುವವರು, ಹತ್ತು ಅಡಿಗಲ್ಲಾದ ಬಿಂದುಗಳು, ಎರಡು ಸಾಗರಗಳು, ಏಳು ನದಿಗಳು ಮತ್ತು ಏಳು ಜಗತ್ತುಗಳು ಇವೆಲ್ಲ ಅವನೊಳಗಿರುತ್ತವೆ.

**Bengali Writings pp. 35-40** **– ಶ್ರೀ ಅರವಿಂದರು**

*

**ಯಜ್ಞದ ಪಥ**

ಸಾಂತದ ಹಾಗೂ ಅಸತ್ಯದ ನೇಣು ಹಾಕುವವನ ಹಗ್ಗದ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡ ಪಾರ್ಥಿವ ಸ್ವಭಾವ ಆ ಸೀಮಾರಹಿತ ದೈವೀ ಅಸ್ತಿತ್ವವನ್ನು, ಮೇರೆರಹಿತ ದೈವೀ ಪ್ರಜ್ಞಾ– ಶಕ್ತಿಯನ್ನು, ಅಳತೆಗೊಳಪಡಿಸಲಾಗದ ದಿವ್ಯಾನಂದದ ಪ್ರಜ್ಞೆಯನ್ನು ದೊರಕಿಸುವ ಭರವಸೆಯನ್ನು ಎಂದಾದರೂ ಹೊಂದಲು ಸಾಧ್ಯವಿದೆಯೆ? ಇದ್ದರೆ ಅದಕ್ಕೆ ಸಾಧನ ಯಾವುದು? ಯಜ್ಞ ಅದಕ್ಕೆ ಸಾಧನ. ಯಜ್ಞದ ಅರ್ಥ ಶರಣಾಗತಿ ಹಾಗೂ ಸ್ವ–ಬಲಿದಾನ. ನೀವೇನಾಗಿರುವಿರೋ,

ನಿಮ್ಮಲ್ಲಿ ಏನಿರುವುದೋ, ಭವಿಷ್ಯತ್ತಿನಲ್ಲಿ ನಿಮ್ಮದೇ ಪ್ರಯತ್ನದಿಂದ ಇಲ್ಲವೆ ಭಗವಂತನ ಕೃಪೆಯಿಂದ ನೀವೇನಾಗುವಿರೋ, ನಿಮ್ಮ ಕ್ರಿಯೆಯ ಮೂಲಕ ನೀವೇನು ಗಳಿಸುವಿರೋ ಹಾಗೂ ಉಳಿಸುವಿರೋ ಇದೆಲ್ಲವನ್ನು ದೈವೀ ಚೈತನ್ಯದ ಅಗ್ನಿಯಲ್ಲಿ ಕಾಣಿಕೆಯ ರೂಪದಲ್ಲಿ ಹಾಕಿರಿ. ಚಿಕ್ಕದಾದರೂ ಇಡಿಯಾದದ್ದನ್ನು ಕೊಡುವುದರ ಮೂಲಕ ನೀವು ಇಡಿಯಾದ ಅನಂತವನ್ನು ದೊರಕಿಸುತ್ತೀರಿ. ಯೋಗ ಯಜ್ಞದಲ್ಲಿ (ಬಲಿದಾನದಲ್ಲಿ) ಅಂತರ್ನಿಹಿತವಾಗಿರುತ್ತದೆ. ಯೋಗದ ಆಚರಣೆಯ ಪರಿಣಾಮವೆಂದು ಅನಂತತೆ, ಅಮರತ್ವ ಹಾಗೂ ದೈವೀ ಸಂತೋಷ ಇವುಗಳನ್ನು ದೊರಕಿಸುವುದು ನ್ಯಾಯಯುತವಾಗಿರುತ್ತದೆ. ಈ ಮಾರ್ಗವನ್ನು ಅನುಸರಿಸುವುದು ಪ್ರಕೃತಿಯ ಮುಕ್ತಿಗೆ ಸಾಧನವಾಗುತ್ತದೆ.

ಸೂಕ್ಷ್ಮ, ನೀರಡಗಿದ ಭೌತಿಕ ವಸ್ತುಗಳು ಯಜ್ಞದಲ್ಲಿ ಘೃತವಿರುವ ಹಾಗಿರುತ್ತವೆ, ಜೀವ ಎಂದರೆ ಸತ್ತೆ ಯಜ್ಞಕ್ಕಾಗಿ ಕಟ್ಟಿಹಾಕಿದ ಪಶುವಾಗಿರುತ್ತಾನೆ. ಪ್ರಕೃತಿ ಜೀವವನ್ನು ಸತತ ನಾಶಮಾಡುತ್ತಿರುತ್ತದೆ, ಮನಸ್ಸು, ಪ್ರಾಣ ಹಾಗೂ ದೇಹ ಎಂಬ ಮೂರು ಬಗೆಯ ಕಟ್ಟುಗಳಿಂದ ಜೀವವನ್ನು ನೇಣುಗಂಬಕ್ಕೆ ಕಟ್ಟಿ ಹಾಕಲಾಗಿರುತ್ತದೆ. ಮನಸ್ಸಿನಿಂದ ಬರುವ ಕಟ್ಟು ಅಜ್ಞಾನ, ಪ್ರಾಣದಿಂದ ಬರುವ ಕಟ್ಟು ವೇದನೆ, ಆಸೆ ಮತ್ತು ಸಂಘರ್ಷ, ದೇಹದಿಂದ ಬರುವ ಕಟ್ಟು ಮೃತ್ಯು. ಪ್ರಕೃತಿಗೆ ಅದರ ಮುಕ್ತಿಯ ಮಾರ್ಗವನ್ನು ತೋರಿಸಿಕೊಡಲಾಗಿರುತ್ತದೆ. ಬೇಡಿಗಳಿಂದ ಕಟ್ಟಿ ಹಾಕಲಾದ ಜೀವ ಯಾವ ಸಾಧನದ ಮೂಲಕ ಬಿಡುಗಡೆ ಪಡೆಯಬಹುದು? ಯಜ್ಞದ ಮೂಲಕ, ಸ್ವ–ಅರ್ಪಣೆ ಮತ್ತು ಸ್ವ–ನಾಶದ ಮೂಲಕ ಪಡೆಯಬಹುದು. ಪ್ರಕೃತಿಯ ಪ್ರಾಬಲ್ಯದಡಿಯಲ್ಲಿ ಇರುವುದರ ಬದಲಾಗಿ, ಅದರಿಂದ ಅರ್ಪಿತವಾಗುವುದರ ಬದಲಾಗಿ ಜೀವ ಮೇಲಕ್ಕೇರಿ ಹೋಗಬೇಕು, ಯಜ್ಞ ಕೈಕೊಳ್ಳುವವನಾಗಬೇಕು ಮತ್ತು ಅದು ವಶಮಾಡಿಕೊಂಡದ್ದನ್ನೆಲ್ಲ ಅರ್ಪಿಸಬೇಕು.

ಮಾನವ ದೇಹದಲ್ಲಿ ಲೀಲೆಯನ್ನು ನಡೆಸಲು ಬಯಸುವ ದೈವೀ ಪುರುಷನ ಬಯಕೆಯನ್ನು ಈಡೇರಿಸಲು ಮನುಷ್ಯನನ್ನು ಸೃಷ್ಟಿಸಲಾಗಿದೆ. ತನ್ನತನ (self hood), ಅಮರತ್ವ, ವೈವಿಧ್ಯಮಯ ಅನಂತ ದಿವ್ಯಾನಂದ, ಸೀಮಿತವಲ್ಲದ ಜ್ಞಾನ, ಮಿತಿರಹಿತ ಶಕ್ತಿ, ಆಳತೆಗೆ ಸಿಗದ ಪ್ರೇಮ ಇವೆಲ್ಲವನ್ನು ಮಾನವ ದೇಹದಲ್ಲಿ ಹಾಗೂ ಮಾನವ ಪ್ರಜ್ಞೆಯಲ್ಲಿ ಹೊಂದಿ ಸಂತೋಷ ಪಡಬೇಕು. ಈ ಎಲ್ಲ ವಿಧದ

ಸಂತೋಷಗಳು ಸ್ವತಃ ಪುರುಷನಲ್ಲಿಯೇ ಅಸ್ತಿತ್ವದಲ್ಲಿರುತ್ತವೆ ಮತ್ತು ಸನಾತನ–ನೆಂದಾಗಿ ಅವನು ಶಾಶ್ವತವಾಗಿ ಇವೆಲ್ಲವುಗಳ ಸಂತೋಷ ಪಡೆಯುತ್ತಿರುತ್ತಾನೆ. ಆದರೆ ಮನುಷ್ಯನನ್ನು ಸೃಷ್ಟಿಸಿ ಅವನು ಕ್ರಿಯಾಶೀಲವಾಗಿ ವಿರುದ್ಧ ರೀತಿಯಲ್ಲಿ, ವೈವಿಧ್ಯತೆಯಲ್ಲಿ ಏಕವಾಗಿರುವುದನ್ನು, ಸಾಂತದಲ್ಲಿ ಅನಂತವಿರುವುದನ್ನು, ಬಾಹ್ಯವಾದುದರಲ್ಲಿ ಅಂತರಂಗವಿರುವುದನ್ನು, ಇಂದ್ರಿಯಗಳಲ್ಲಿ ಅವುಗಳಿಗೆ ಅತೀತವಾದುದನ್ನು ಮತ್ತು ಪಾರ್ಥಿವ ಜೀವನದಲ್ಲಿ ಅಮರತ್ವದ ಅಸ್ತಿತ್ವವನ್ನು ಪರಿಣಾಮ ರೂಪದಲ್ಲಿ ನೋಡುವುದರಲ್ಲಿ ತೊಡಗಿಕೊಂಡಿದ್ದಾನೆ. . . .

*

ಇಂದ್ರ, ಅಗ್ನಿ, ವರುಣ ಎಂಬ ಹೆಸರುಳ್ಳ ದೇವರುಗಳನ್ನು ವೇದದಲ್ಲಿ ಪ್ರಸ್ತಾಪಿಸಲಾಗಿದೆ, ನಂತರದ ದಿನಗಳಲ್ಲಿ ಸಾಮಾನ್ಯ ಜನರಿಂದ ಉಪೇಕ್ಷೆಗೊಳಗಾದ ಹಾಗೆ ಇವರು ನಿಮ್ನತರ ಚಿಕ್ಕ ದೇವತೆಗಳಲ್ಲ, ಅವರು ಭಗವಂತನ ಭಿನ್ನ ರೂಪ–ಗಳಲ್ಲಿ ಕಂಡು ಬರುತ್ತಾರೆ, ಸಾಮರ್ಥ್ಯಪೂರ್ಣರಾಗಿದ್ದಾರೆ, ಪ್ರಕಾಶಮಯ–ವಾಗಿದ್ದಾರೆ. ಇವರ ಈ ಅಮರತ್ವ ಪುರಾಣಗಳಲ್ಲಿ ವರ್ಣಿಸಿದ ಹಾಗಿರುವ ಕ್ಷುಲ್ಲಕ ಸ್ವರ್ಗಕ್ಕೆ ಸೇರಿದುದಾಗಿಲ್ಲ, ಆದರೆ ವೈದಿಕ ಋಷಿಗಳು ಬಯಸಿದ ದೈವೀಸತ್ಯದ ಜಗತ್ತು 'ಸ್ವರ', ಅನಂತ ದೈವೀ ಅಸ್ತಿತ್ವದ ಪ್ರತಿಷ್ಠಾನ. ವೇದದಲ್ಲಿ ಪ್ರಸ್ತಾಪಿಸಿದ ಅಮರತ್ವ, ಅನಂತ ದೈವೀ ಸತ್ತೆ ಹಾಗೂ ಸಚ್ಚಿದಾನಂದದ ದೈವೀ ಪ್ರಜ್ಞೆಯಾಗಿದೆ.

**Bengali Writings pp. 47-48** **– ಶ್ರೀ ಅರವಿಂದರು**

*

**ಯಜ್ಞದ ನಿಯಮ**

ನಮ್ಮ ಸಾಮಾನ್ಯ ಜೀವನ ಹಾಗೂ ಪ್ರಜ್ಞೆ ಇವು ಅಂಧಕಾರಮಯವಾಗಿರುತ್ತವೆ, ಹೆಚ್ಚೆಂದರೆ ನಕ್ಷತ್ರಗಳ ಬೆಳಕಿರುವ ರಾತ್ರಿಯ ಹಾಗಿರುತ್ತವೆ. ಉಚ್ಚತರ ದೈವೀ ಸತ್ಯದ ಸೂರ್ಯ ಮೇಲೆದ್ದು ಬರುವುದರ ಮೂಲಕ ಅರುಣೋದಯ ಬರುತ್ತದೆ ಮತ್ತು ಅರುಣೋದಯದೊಂದಿಗೆ ಅಲ್ಲಿ ಪರಿಣಾಮಕಾರಿ ಯಜ್ಞ ಬರುತ್ತದೆ. ಯಜ್ಞದ ಮೂಲಕ ಸ್ವತಃ ಅರುಣೋದಯವನ್ನು ಹಾಗೂ ಕಳೆದು ಹೋದ ಸೂರ್ಯನನ್ನು ಮರಳಿ ಬರುತ್ತಿರುವ ರಾತ್ರಿಯಿಂದ ಮರಳಿ ಸತತ ಜಯಿಸಲಾಗುತ್ತದೆ ಮತ್ತು ಪ್ರಕಾಶಮಯ ಗುಂಪುಗಳನ್ನು ಕತ್ತಲಲ್ಲಿರುವ ಪಾಣಿಗಳ ಗುಹೆಗಳಿಂದ ಪಾರು

ಮಾಡಲಾಗುತ್ತದೆ. ಯಜ್ಞದ ಮೂಲಕ ಸ್ವರ್ಗದ ಸಮೃದ್ಧಿಯ ಮಳೆಯನ್ನು ನಮಗಾಗಿ ಧಾರೆಯೆರೆದು ಕೊಡಲಾಗುತ್ತದೆ ಮತ್ತು ಉಚ್ಚತರ ಅಸ್ತಿತ್ವದ ಏಳು ಬಗೆಯ ಜಲಗಳು ನಮ್ಮ ಪೃಥ್ವಿಯ ಮೇಲೆ ರಭಸದಿಂದ ಇಳಿದು ಬರುತ್ತವೆ, ಏಕೆಂದರೆ ಮಬ್ಬನ್ನುಂಟು ಮಾಡುವ ಹೆಬ್ಬಾವಿನ ಸುರುಳಿಗಳು, ಎಲ್ಲದಕ್ಕೂ ಹೊದಿಕೆ ಹೊದಿಸುವ, ಎಲ್ಲವನ್ನೂ ಹಿಡಿದಿಟ್ಟುಕೊಳ್ಳುವ ವೃತ್ರ ಇವುಗಳು ದೂರ ದೂರವಾಗಿರುವಂತೆ ದೇವ ಮನಸ್ಸಿನ ಬೆಳಕು ಬೀರುವ ಮಿಂಚುಗಳಿಂದ ಸೀಳಲಾಗಿದೆ, ಯಜ್ಞದಲ್ಲಿ ಸೋಮರಸವನ್ನು ಬಟ್ಟಿ ಇಳಿಸಿ ತೆಗೆಯಲಾಗಿರುತ್ತದೆ, ಅದು ನಮ್ಮನ್ನು ಉಚ್ಚತರ ಸ್ವರ್ಗಗಳತ್ತ ಅಮರಗೊಳಿಸುವ ದಿವ್ಯಾನಂದದ ಪ್ರವಾಹದ ಮೇಲೆ ಎತ್ತಿ ಹಿಡಿಯುತ್ತದೆ.

ನಮ್ಮ ಯಜ್ಞ ನಮ್ಮ ಎಲ್ಲ ಲಾಭಗಳನ್ನು ಹಾಗೂ ಕ್ರಿಯೆಗಳನ್ನು ಉಚ್ಚತರ ಅಸ್ತಿತ್ವದ ಸಾಮರ್ಥ್ಯಕ್ಕೆ ಅರ್ಪಿಸುವುದಾಗಿದೆ. ಇಡೀ ಜಗತ್ತು ಮೂಕ, ಅಸಹಾಯಕ ಯಜ್ಞ, ಅದರಲ್ಲಿ ಆತ್ಮ ಬಲಿ ಪಶುವಿನ ಹಾಗೆ ಬಂಧನಕ್ಕೊಳಗಾಗಿದೆ, ಗೋಚರ–ವಾಗದ ದೇವರುಗಳಿಗೆ ಅರ್ಪಿತವಾಗಿರುತ್ತದೆ. ಮುಕ್ತಗೊಳಿಸುವ ದೈವೀ ಶಬ್ದವನ್ನು ಕಂಡು ಹಿಡಿಯಬೇಕು, ಜ್ಞಾನೋದಯವನ್ನುಂಟು ಮಾಡುವ ಸ್ತೋತ್ರ ಮನುಷ್ಯನ ಹೃದಯದಲ್ಲಿ ಹಾಗೂ ಮನಸ್ಸಿನಲ್ಲಿ ರಚಿತವಾಗಬೇಕು ಮತ್ತು ಅವನ ಜೀವನ ಪ್ರಜ್ಞಾಪೂರ್ಣವಾಗಿ, ಸ್ವ–ಇಚ್ಛೆಯಿಂದ ಅರ್ಪಣೆಯಾಗುವ ತಿರುವು ಪಡೆಯಬೇಕು, ಅದರಲ್ಲಿ ಆತ್ಮ ಇನ್ನು ಮುಂದೆ ಬಲಿಪಶುವಾಗಿರುವುದಿಲ್ಲ, ಆದರೆ ಯಜ್ಞದ ಯಜಮಾನನಾಗಿರುತ್ತದೆ. ಸರಿಯಾದ ಯಜ್ಞದ ಮೂಲಕ ಮತ್ತು ಸರ್ವಸೃಷ್ಟ್ಯಾತ್ಮಕ ಹಾಗೂ ಎಲ್ಲವನ್ನೂ ಅಭಿವ್ಯಕ್ತಿಗೊಳಿಸುವ ದೈವೀ ಶಬ್ದದ ಮೂಲಕ– ಆ ಶಬ್ದ ಅವನ ಆಳಗಳಿಂದ ದೇವರುಗಳಿಗೆ ಘನತೆವೆತ್ತ ಸ್ತೋತ್ರದ ರೂಪದಲ್ಲಿ ಮೇಲೆದ್ದು ಬರುತ್ತದೆ– ಮನುಷ್ಯ ಎಲ್ಲ ವಿಷಯಗಳನ್ನು ಸಿದ್ಧಿಸಿಕೊಳ್ಳಬಲ್ಲನು. ಅವನು ತನ್ನ ಪರಿಪೂರ್ಣತೆಯನ್ನು ಗೆದ್ದುಕೊಳ್ಳುತ್ತಾನೆ, ಪ್ರಕೃತಿ ಅವನ ಬಳಿ ಸ್ವ–ಸಂತೋಷದ ಸಮ್ಮತಿಯಿಂದ, ಹಾತೊರೆತದಿಂದ ಬಯಸುವ ವಧುವಿನ ಹಾಗೆ ಬರುತ್ತದೆ, ಅವನು ಅದರ ದೃಷ್ಟಾರನಾಗಿರುತ್ತಾನೆ ಹಾಗೂ ಅದರ ಮೇಲೆ ರಾಜನ ಹಾಗೆ ಆಳಿಕೆ ನಡೆಸುತ್ತಾನೆ.

ಪ್ರಾರ್ಥನೆಯ ಸ್ತೋತ್ರದ ಹಾಗೂ ದೇವಾಕರ್ಷಣೆಯ ಮೂಲಕ, ಹೊಗಳುವ ಸ್ತೋತ್ರ ಹಾಗೂ ದೇವನ ದೃಢೀಕರಣದ ಮೂಲಕ, ದೈವ ಸಿದ್ದಿಯ ಸ್ತೋತ್ರದ

ಮೂಲಕ ಮತ್ತು ಸ್ವ–ಅಭಿವ್ಯಕ್ತಿಯ ಮೂಲಕ ಮನುಷ್ಯ ತನ್ನಲ್ಲಿ ದೇವರುಗಳಿಗೆ ವಾಸ ಕಲ್ಪಿಸಿಕೊಡಬಲ್ಲ, ಮಹಾದ್ವಾರವನ್ನಿರಿಸಿದ ಅವನ ಸತ್ತೆಯ ಮನೆಯಲ್ಲಿ ಆ ದೇವರುಗಳ ದೈವತ್ವ ಜೀವಂತವಿರುವ ಪ್ರತೀಕವನ್ನು ನಿರ್ಮಿಸಬಲ್ಲ, ಅವರ ದೈವೀ ಜನ್ಮಗಳಲ್ಲಿ ಬೆಳೆಯಬಲ್ಲ, ತನ್ನೊಳಗೆ ತನ್ನ ಆತ್ಮ ವಾಸಿಸುವುದಕ್ಕೆ ವಿಶಾಲ ಹಾಗೂ ಪ್ರಕಾಶಮಯ ಜಗತ್ತುಗಳನ್ನು ರೂಪಿಸಬಲ್ಲ.

*

**ಯಜ್ಞಕ್ಕೆ ಸಂಬಂಧಿಸಿದಂತೆ ದೈವೀ ಸತ್ಯವನ್ನು ಅರಸುವವನ ಮುನ್ನಡೆ**

ಎರಡು ರಹಸ್ಯ ಸಾಗರಗಳ ನಡುವೆ ನಮ್ಮ ಪಾರ್ಥಿವ ಅಸ್ತಿತ್ವ ಪ್ರಕಟವಾಗಿದೆ. ಕೆಳಸ್ತರದ ಸಾಗರ ಅಡಗಿಸಿಟ್ಟ ಅನಂತ ಪ್ರಜ್ಞೆಯದು, ಅದರಿಂದ ಹಗಲು ರಾತ್ರಿ, ಪ್ರತಿಕ್ಷಣದ ಈ ಎಲ್ಲ ಮನೋವಿಕಾರಗಳು, ಪ್ರಚೋದನೆಗಳು, ನಾಮ ರೂಪಗಳು, ಮೇಲೆದ್ದು ಬರುತ್ತವೆ, ಇದು ರಾತ್ರಿ–ದೇವತೆಯ ಎದೆಯಲ್ಲಿ ನಕ್ಷತ್ರಗಳು, ಆಕಾಶಗಂಗೆಗಳು ಹೊಳೆಯುತ್ತಿರುವ ಹಾಗಿರುತ್ತದೆ. ಇದನ್ನು ಆಧುನಿಕ ಭಾಷೆಯಲ್ಲಿ ಅಚೇತನ ಇಲ್ಲವೆ ಅವಚೇತನ ಎಂದು, ವೇದದಲ್ಲಿ ಅಪ್ರಕೇತಮ್, ಸಲಿಲಮ್ ಎಂದು ಕರೆಯಲಾಗಿದೆ, ಅದು ಅವಚೇತನದ ಸಾಗರ. ಅವಚೇತನದ್ದಾದರೂ ಅದು ಪ್ರಜ್ಞಾರಹಿತವಾಗಿಲ್ಲ, ಅದರಲ್ಲಿ ವಿಶ್ವಾತೀತ ವಿಶ್ವಂಭರ ಇದೆ, ಅದಕ್ಕೆ ಎಲ್ಲ ಜ್ಞಾನ ಪಡೆಯುವ ಕ್ಷಮತೆಯಿದೆ, ಎಲ್ಲ ಕ್ರಿಯೆಯಲ್ಲಿ ದಕ್ಷತೆ ಹೊಂದಿದೆ, ಸಮಾಧಿ ಸ್ಥಿತಿಯಲ್ಲಿಯೇನೋ ಎನ್ನುವ ಹಾಗೆ ತನ್ನನ್ನು ಪಸರಿಸುತ್ತದೆ ಮತ್ತು ವಿಶ್ವವನ್ನು, ಅದರ ಚಲನೆಯನ್ನು ಸೃಷ್ಟಿಸುತ್ತದೆ. ಮೇಲ್ಗಡೆ ರಹಸ್ಯ ಮುಕ್ತ ಅನಂತ ಪ್ರಜ್ಞೆ ಇದೆ, ಅದನ್ನು ಅತಿಪ್ರಜ್ಞೆ (Super conscient) ಎಂದು ಕರೆಯುತ್ತಾರೆ. ಇದರ ಛಾಯೆಯ ರೂಪದಲ್ಲಿ ಪ್ರಜ್ಞೆ–ಅಪ್ರಜ್ಞೆಗಳಿವೆ. ಅಲ್ಲಿ ಆ ಲೋಕದಲ್ಲಿ ಸತ್–ಚಿತ್–ಆನಂದ ಪೂರ್ತಿಯಾಗಿ ಪ್ರಕಟವಾಗಿದೆ– ಸತ್ ಲೋಕ ನಿಜವಾದ ಅನಂತ ಅಸ್ತಿತ್ವದ ಲೋಕವಾಗಿದೆ, ತಪೋಲೋಕ ಸ್ವ–ಪ್ರಜ್ಞೆಯ ಚೈತನ್ಯದ ಲೋಕ, ಅನಂತ ದೈವೀ ಪ್ರಜ್ಞೆಯೊಂದಿಗಿರುವುದು, ಜನಲೋಕ ಅನಂತ ದಿವ್ಯಾನಂದವೆಂದು ಸೃಷ್ಟ್ಯಾತ್ಮಕ ಪರಮ ಸುಖವಿರುವ ಲೋಕ, ಮಹರ್ಲೋಕ, ದಿವ್ಯಾತ್ಮನ ಭವ್ಯ ಪ್ರಜ್ಞೆಯಿರುವ, ವಿಶಾಲ ದೈವೀ ಸತ್ಯವಿರುವ ಲೋಕ. ಮಧ್ಯದಲ್ಲಿ ಬರುವ ಪಾರ್ಥಿವ ಪ್ರಜ್ಞೆ ವೇದದಲ್ಲಿ ಹೇಳಲಾದ ಪೃಥ್ವಿ. ಈ ಪೃಥ್ವಿಯಿಂದ ಆಕಾಶಗಳೆಡೆಗೆ ಮೇಲಕ್ಕೇರುವ ಪರ್ವತವಿದೆ, ಅದರ ಪ್ರತಿಯೊಂದು ಶ್ರೇಣಿ ಏಳು ರಾಜ್ಯಗಳಲ್ಲಿ ಒಂದು ರಾಜ್ಯದತ್ತ

ಆರೋಹಣ ಮಾಡುವ ಹೆಜ್ಜೆ. ನಮ್ಮ ಆರೋಹಣದಲ್ಲಿ ದೇವರುಗಳು ಸಹಾಯಕರಾಗಿರುತ್ತಾರೆ, ದಾನವರು ಮಾರ್ಗದಲ್ಲಿ ಅಡೆತಡೆ ಉಂಟು ಮಾಡುತ್ತಾರೆ. ಈ ಪರ್ವತಾರೋಹಣ ದೈವೀಸತ್ಯವನ್ನು ಅರಸುವ ವೈದಿಕ ಅನ್ವೇಷಕನ ಮುನ್ನಡೆ, ಆ ಯಜ್ಞದೊಂದಿಗೆ ನಾವು ಪರಮೋಚ್ಚ ಆಕಾಶ ದ್ರವ್ಯದ ಪ್ರಕಾಶದ ಸಾಗರದತ್ತ ಮೇಲಕ್ಕೇರಿ ಹೋಗಬೇಕು. ಆರೋಹಣಕ್ಕೆ ಅಗ್ನಿ ಉಪಕರಣ, ಮಾರ್ಗದಲ್ಲಿ ನೇತಾರ, ಸಮರದಲ್ಲಿ ಹೋರಾಟಗಾರ ಮತ್ತು ಯಜ್ಞದ ಪುರೋಹಿತ.

**Bengali Writings pp. 40-41** **– ಶ್ರೀ ಅರವಿಂದರು**

*

## ಕೆಲವು ವೈದಿಕ ಸಂಕೇತಗಳು

### ಘೃತದ (ತುಪ್ಪದ) ಅರ್ಪಣ

ಯಜ್ಞದಲ್ಲಿ ಕಾಯಿಸಿದ ಬೆಣ್ಣೆ ಎಂದರೆ "ಘೃತಮ್" ಶಬ್ದ ಏನನ್ನು ಸೂಚಿಸುವ ಸಾಧ್ಯತೆ ಇದೆ? ಯೋಚನೆ ಇಲ್ಲವೆ ಮನಸ್ಸಿನ ಜೊತೆಗೆ 'ಘೃತ' ಶಬ್ದವನ್ನು ಸತತ ಉಪಯೋಗಿಸಿದ್ದನ್ನು ನಾನು ಕಂಡುಕೊಂಡೆ, ಮತ್ತು ವೇದದಲ್ಲಿ ಸ್ವರ್ಗ ಮನಸ್ಸಿನ ಸಂಕೇತವಾಗಿತ್ತು, ಇಂದ್ರ ಜ್ಞಾನೋದಯ ಪಡೆದ ಮನೋವೃತ್ತಿ (mentality) ಯನ್ನು ಪ್ರತಿನಿಧಿಸುತ್ತಾನೆ ಮತ್ತು ಅವನ ಎರಡು ಕುದುರೆಗಳು ಮನೋವೃತ್ತಿಯ ದ್ವಿವಿಧ ಚೈತನ್ಯಗಳನ್ನು ಪ್ರತಿನಿಧಿಸುತ್ತವೆ. ಮತ್ತು ಹಾಗೆಯೇ ಬುದ್ಧಿಮತ್ತೆ (ಮನೀಷಾ) ಯನ್ನು ದೇವರುಗಳಿಗೆ ಪರಿಶುದ್ಧಗೊಳಿಸಿದ ಘೃತದ ಹಾಗೆ ಅರ್ಪಿಸಬೇಕೆಂದು ಸರಳವಾಗಿ ವೇದ ಹೇಳಿದೆ. ಘೃತಮ್ ನ ಪೂತಾಮ್ ಮನೀಷಾಮ್. ಶ್ರೀಮಂತ ಇಲ್ಲವೆ ಬೆಚ್ಚಗಿನ ಪ್ರಜ್ವಲತೆ ಕುರಿತು ಇರುವ ಭಾಷಾ ಶಾಸ್ತ್ರದ ಪ್ರಾಮುಖ್ಯತೆಗಳ ಮಧ್ಯೆ ಘೃತ ಶಬ್ದ ಲೆಕ್ಕಕ್ಕೆ ಬರುತ್ತದೆ.

*

### ಆಕಳುಗಳನ್ನು ಹಾಗೂ ಕುದುರೆಗಳನ್ನು ಕಾಣಿಕೆ ರೂಪದಲ್ಲಿ ಅರ್ಪಿಸುವುದು

ಆಕಳು ಮತ್ತು ಕುದುರೆ 'ಗೋ ಮತ್ತು ಅಶ್ವ' ಸತತ ಜೊತೆಗಿರುತ್ತವೆ. ಅರುಣೋದಯದ ಉಷಾಳನ್ನು 'ಗೋಮತಿ, ಅಶ್ವವತಿ' ಎಂದು ವರ್ಣಿಸಲಾಗಿದೆ.

ಉಷಾ ಯಜ್ಞ ಕೈಕೊಳ್ಳುವವನಿಗೆ ಕುದುರೆಗಳನ್ನು ಹಾಗೂ ಆಕಳುಗಳನ್ನು ಕೊಡುತ್ತಾಳೆ. ಭೌತಿಕ ಅರುಣೋದಯಕ್ಕೆ ಅನ್ವಯಿಸಿದ ಹಾಗೆ ಗೋಮತಿಯ ಅರ್ಥ ಪ್ರಕಾಶದ ಕಿರಣಗಳ ಜೊತೆಗೆ ಬರುವುದು ಇಲ್ಲವೆ ಅವುಗಳನ್ನು ತರುವುದು ಎಂದಾಗುತ್ತದೆ ಮತ್ತು ಅದು ಮನಸ್ಸಿನಲ್ಲಿ ಜ್ಞಾನೋದಯದ ಅರುಣೋದಯ– ವಾಗುವುದರ ಪ್ರತೀಕವಾಗಿದೆ. ಹಾಗಾಗಿ ಅಶ್ವವತಿ ಕೇವಲ ಭೌತಿಕ ಕುದುರೆಗೆ ಸಂಬಂಧಿಸಿದ ಶಬ್ದವಾಗಿರುವುದಿಲ್ಲ, ಅದಕ್ಕೆ ಮನೋವೈಜ್ಞಾನಿಕ ಪ್ರಾಮುಖ್ಯತೆ ಇರಲೇಬೇಕು. ವೈದಿಕ ಕುದುರೆ ಕುರಿತು ನಾನು ಕೈಕೊಂಡ ಅಭ್ಯಾಸದಿಂದ ಗೋ ಮತ್ತು ಅಶ್ವ ದೈವೀ ಪ್ರಕಾಶ ಹಾಗೂ ದೈವೀ ಚೈತನ್ಯ, ಹಾಗೆಯೇ ದೈವೀ ಪ್ರಜ್ಞೆ ಹಾಗೂ ದೈವೀ ಶಕ್ತಿ ಇವು ಜೊತೆಗೂಡಿರುವ ವಿಚಾರಗಳು, ಇವು ವೈದಿಕ ಹಾಗೂ ವೇದಾಂತದ ಮನಸ್ಸಿಗೆ ಅಸ್ತಿತ್ವದ ಎಲ್ಲ ಚಟುವಟಿಕೆಗಳ ದ್ವಿವಿಧ ಇಲ್ಲವೆ ಅವಳಿ ಮುಖಗಳು ಎಂಬುದನ್ನು ಕಂಡುಕೊಂಡೆ.

ಹಾಗಾಗಿ ವೈದಿಕ ಯಜ್ಞದ ಎರಡು ಮುಖ್ಯ ಫಲಗಳೆಂದರೆ ಗೋವುಗಳ ಸಂಪತ್ತು ಹಾಗೂ ಕುದುರೆಗಳ ಸಂಪತ್ತು ಆಗಿದ್ದವು, ಅದು ಸಾಂಕೇತಿಕವಾಗಿ ಮನಸ್ಸಿನಲ್ಲಾಗುವ ಜ್ಞಾನೋದಯದ ಶ್ರೀಮಂತಿಕೆ ಹಾಗೂ ಪ್ರಾಣಿಕ ಚೈತನ್ಯದ ಸಮೃದ್ಧಿ ಎಂಬುದು ಸುವ್ಯಕ್ತವಾಗಿದೆ.

**CWSA, 15/42–44** **– ಶ್ರೀ ಅರವಿಂದರು**

*

## ಸಂಖ್ಯೆಗಳ ರಹಸ್ಯ

ವೈದಿಕ ಪದ್ಧತಿಯಲ್ಲಿ ಸಂಖ್ಯೆ ಏಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ, ಇದು ಹೀಗಿರುವುದು ಅತಿ ಪ್ರಾಚೀನ ಕಾಲದಲ್ಲಿದ್ದ ಚಿಂತನ ಕೈಕೊಳ್ಳುತ್ತಿದ್ದ ವಿದ್ಯಾಲಯಗಳಲ್ಲಿ ಕಂಡುಬರುತ್ತದೆ. ಆ ಸಂಖ್ಯೆ ಸತತ ಮರಳಿ ಬರುತ್ತಿರುವುದನ್ನು ನಾವು ಕಂಡುಕೊಳ್ಳುತ್ತೇವೆ– ಸಪ್ತ ದಿವ್ಯಾನಂದಗಳು, ಸಪ್ತ ರತ್ನಗಳು, ಅಗ್ನಿಯ ಏಳು ಜ್ವಾಲೆಗಳು ಸಪ್ತ ಅರ್ಚಿಷಃ ಯೋಚನೆಯ ತತ್ವದ ಏಳು ರೂಪಗಳು, ಸಪ್ತಧಿತಯಃ ಏಳು ರಶ್ಮಿಗಳು ಇಲ್ಲವೆ ಏಳು ಆಕಳುಗಳು, ಕೊಲ್ಲಲಾಗದ ಆಕಳುಗಳ ರೂಪಗಳು, ದೇವತೆಗಳ ಮಾತೆಯಾದ ಅದಿತಿ, ಸಪ್ತಗಾವಃ, ಏಳು ನದಿಗಳು, ಏಳು ಮಾತೆಯರು ಇಲ್ಲವೆ ಪೋಷಿಸುವ ಆಕಳುಗಳು, ಸಪ್ತ ಧೇನವಃ – ಈ ಶಬ್ದವನ್ನು ಭಿನ್ನತೆ ತೋರಿಸದೆ ಕಿರಣಗಳಿಗೆ ಹಾಗೂ ನದಿಗಳಿಗೆ ಅನ್ವಯಿಸಲಾಗುತ್ತದೆ. ನನಗೆ

ತೋರಿಬರುವುದೇನೆಂದರೆ ಈ ಎಲ್ಲ ಏಳರ ಗುಂಪುಗಳು ಅಸ್ತಿತ್ವದ ಮೂಲಭೂತ ತತ್ವಗಳ ಮೇಲೆ ಅವಲಂಬಿಸಿವೆ ಎಂಬುದು. . . .

ಏಕೈಕವಾದುದನ್ನು ಆಧಾರವೆಂದು, ಅಖಂಡ ಭೂಮಿ (continent) ಎಂದು ಗುರುತಿಸಲಾಗಿತ್ತು. ಈ ಏಕೈಕವಾದುದರಲ್ಲಿ ದೈವೀ ಹಾಗೂ ಮಾನವ, ಅಮರ ಹಾಗೂ ಮರ್ತ್ಯ ಎಂಬ ಎರಡು ತತ್ವಗಳಿದ್ದವು. ಈ ರೀತಿಯ ದ್ವಿವಿಧ ಸಂಖ್ಯೆಯನ್ನು ಎರಡು ತತ್ವಗಳಿಗೆ ಅನ್ವಯಿಸಲಾಗುತ್ತಿತ್ತು, ಅವೆಂದರೆ ಸ್ವರ್ಗ ಹಾಗೂ ಪೃಥ್ವಿ, ಮನಸ್ಸು ಹಾಗೂ ದೇಹ, ಆತ್ಮ ಹಾಗೂ ಪ್ರಕೃತಿ, ಇವುಗಳನ್ನು ಎಲ್ಲ ಸತ್ತೆಗಳ ತಂದೆ, ತಾಯಿ ಎಂದು ಪರಿಗಣಿಸಲಾಗುತ್ತಿತ್ತು. ಇಲ್ಲಿ ಪ್ರಾಮುಖ್ಯತೆ ಇರುವ ವಿಷಯವೆಂದರೆ ಸ್ವರ್ಗ ಮತ್ತು ಪೃಥ್ವಿ ಇವುಗಳನ್ನು ಮಾನಸಿಕ ಹಾಗೂ ಭೌತಿಕ ಪ್ರಜ್ಞೆ ಎಂಬ ಸ್ವಾಭಾವಿಕ ಚೈತನ್ಯದ– ಎರಡು ರೂಪಗಳಿಗೆ ಸಂಕೇತ ಎಂದು ಪರಿಗಣಿಸಿದಾಗ ಅವು ತಂದೆ, ತಾಯಿಗಳಾಗಿರುವುದಿಲ್ಲ, ಆದರೆ ಇಬ್ಬರು ಮಾತೆಯರಾಗಿರುತ್ತಾರೆ. ಮೂರರ ತತ್ವವನ್ನು ದ್ವಿವಿಧ ರೀತಿಯಲ್ಲಿ ಗುರುತಿಸಲಾಗಿರುತ್ತದೆ, ಮೊದಲನೆಯದಾಗಿ ದೈವೀ ಅಸ್ತಿತ್ವ, ಪ್ರಜ್ಞೆ ಮತ್ತು ದಿವ್ಯಾನಂದ ಇವುಗಳನ್ನು ನಂತರ ಸಚ್ಚಿದಾನಂದವೆಂದು ಕರೆಯಲಾದದ್ದು, ಎರಡನೆಯದಾಗಿ ಮನಸ್ಸು, ಪ್ರಾಣ ಹಾಗೂ ದೇಹ ಇವುಗಳ ಮೂರು ಬಗೆಯ ಲೌಕಿಕ ತತ್ವವಾಗಿದೆ, ಅದರ ಮೇಲೆ ವೇದ ಹಾಗೂ ಪುರಾಣಗಳ ಮೂರು ಲೋಕಗಳನ್ನು ನಿರ್ಮಾಣ ಮಾಡಲಾಗಿದೆ. ಆದರೆ ಸರ್ವ ಸಾಧಾರಣವಾಗಿ ಸಂಖ್ಯೆ ಏಳನ್ನು ಇಡಿಯಾದ ಸಂಖ್ಯೆ ಎಂದು ಗುರುತಿಸಲಾಗುತ್ತದೆ. ಈ ಸಂಖ್ಯೆಯನ್ನು ತಲುಪಲು ಮೂರು ದೈವೀ ತತ್ವಗಳನ್ನು, ಮೂರು ಲೌಕಿಕ ತತ್ವಗಳನ್ನು ಹಾಗೂ ಒಂದು ಕೊಂಡಿತತ್ವವನ್ನು ಕೂಡಿಸಬೇಕು, ಈ ಕೊಂಡಿ–ತತ್ವ ನಿಖರವಾಗಿ ದೈವೀ ಸತ್ಯ ಪ್ರಜ್ಞೆ, ರಿತಮ್ ಬೃಹತ್, ಅದು ನಂತರ ವಿಜ್ಞಾನ ಇಲ್ಲವೆ ಮಹಸ್ ಎಂದು ಪರಿಚಿತಗೊಳ್ಳತೊಡಗಿತು.

**CWSA, 15/96–97** **– ಶ್ರೀ ಅರವಿಂದರು**

*

**ಏಳು ನದಿಗಳು**

ವೇದಗಳಲ್ಲಿಯ ಏಳು ನದಿಗಳು, ಜಲಗಳು, ಆಪಃ, ಇವುಗಳನ್ನು ವೈದಿಕ ಭಾಷೆಯಲ್ಲಿ ಏಳು ಜನ ಮಾತೆಯರು ಇಲ್ಲವೆ ಪೋಷಿಸುವ ಆಕಳುಗಳು, ಸಪ್ತಧೇನವಃ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಆಪಃ ಎಂಬ ಬೀಜ ಶಬ್ದಕ್ಕೆ

ಗೌಪ್ಯವಾಗಿ ದ್ವಿವಿಧ ಪ್ರಾಮುಖ್ಯತೆಯಿದೆ, ಏಕೆಂದರೆ ಆ ಬೀಜ ಶಬ್ದದ ಅರ್ಥ ಮೂಲದಲ್ಲಿ ಕೇವಲ ಚಲಿಸುವುದು ಎಂಬುದರಿಂದ ಬಹುಮಟ್ಟಿಗೆ ಜಲಗಳು ಎಂಬ ಅರ್ಥವನ್ನು ದೊರಕಿಸಲಾಗಿರಬಹುದು ಎಂದಷ್ಟೇ ಅಲ್ಲ, ಅಪತ್ಯ ಶಬ್ದದಲ್ಲಿ ಹೇಳಿರುವ ಹಾಗೆ ಇರುವುದು ಹಾಗೆಯೇ ಇರುವುದನ್ನು ಎಂದರೆ ಮಗುವನ್ನು ಅಪ್ಪ ತರುವುದಾಗಿರುತ್ತದೆ. ಆ ಏಳು ಜಲಗಳು ಸತ್ತೆಯ ಜಲಗಳಾಗಿವೆ, ಅವು ಮಾತೆಯರಾಗಿದ್ದು ಅವರಿಂದ ಎಲ್ಲ ಬಗೆಯ ಅಸ್ತಿತ್ವಗಳು ಜನ್ಮ ತಾಳುತ್ತವೆ. ಆದರೆ ನಾವು ಇನ್ನೊಂದು ಅಭಿವ್ಯಕ್ತಿಯನ್ನು ಭೇಟಿ ಮಾಡುತ್ತೇವೆ, ಸಪ್ತ ಗಾವಃ– ಏಳು ಆಕಳುಗಳು ಇಲ್ಲವೆ ಏಳು ದೈವೀ ಪ್ರಕಾಶಗಳು ಮತ್ತು ಸಪ್ತಗು ಎಂಬ ವಿಶೇಷಣ ಅದಕ್ಕೆ ಏಳು ಕಿರಣಗಳಿರುತ್ತವೆ. ಗು (ಗಾವಃ) ಮತ್ತು ಗೋ (ಗಾವಃ) ಈ ಶಬ್ದಗಳಿಗೆ ವೈದಿಕ ಸ್ತೋತ್ರಗಳಾದ್ಯಂತ ಆಕಳುಗಳು ಮತ್ತು ತೇಜಸ್ಸುಗಳು ಎಂಬ ದ್ವಿವಿಧ ಅರ್ಥಗಳಿರುವುದು ಕಂಡುಬರುತ್ತದೆ. ಪ್ರಾಚೀನ ಕಾಲದ ಯೋಚನಾ ಪದ್ಧತಿಯಲ್ಲಿ ಸತ್ತೆ ಹಾಗೂ ಪ್ರಜ್ಞೆಗಳಲ್ಲಿ ಒಂದು ಇನ್ನೊಂದರ ಮುಖವಾಗಿರುತ್ತಿತ್ತು, ಎಲ್ಲ ದೇವತೆಗಳಿಗೆ ಜನ್ಮ ನೀಡಿದ, ಅನಂತ ಅಸ್ತಿತ್ವವಾದ ಅದಿತಿಯನ್ನು ಅವಳ ಏಳು ಹೆಸರುಗಳೊಂದಿಗೆ ಹಾಗೂ ಏಳು ಆಸನ (ಧಾಮಾನಿ) ಗಳೊಂದಿಗೆ ಇರುವಳೆಂದು ವರ್ಣಿಸಲಾಗಿದೆ, ಹಾಗೆಯೇ ಅವಳು ಅನಂತಪ್ರಜ್ಞೆಯಿರುವ ದೈವೀ ಆಕಳೆಂದು, ಆದಿಕಾಲದ ದೈವೀ ಪ್ರಕಾಶವಾಗಿದ್ದು ಏಳು ದೈವೀ ತೇಜಸ್ಸುಗಳಲ್ಲಿ ಪ್ರಕಟವಾಗಿದ್ದಾಳೆ ಎಂದೂ ಕಲ್ಪಿಸಿಕೊಳ್ಳಲಾಗಿದೆ. ಹಾಗಾಗಿ ಆ ಏಳುಬಗೆಯ ಅಸ್ತಿತ್ವದ ತತ್ವವನ್ನು ಒಂದು ದೃಷ್ಟಿಕೋನದಿಂದ ನದಿಗಳ ಪ್ರತೀಕದಲ್ಲಿ ಆಕಾರ ಕೊಡಲಾಗಿದೆ, ಆ ನದಿಗಳು ಸಪ್ತ ಧೇನವಃ ಎಂಬ ಸಮುದ್ರದಿಂದ ಮೇಲೆದ್ದು ಬರುತ್ತವೆ, ಇನ್ನೊಂದು ದೃಷ್ಟಿಕೋನದಿಂದ ಎಲ್ಲವನ್ನೂ ಸೃಷ್ಟಿಸುವ ಸೂರ್ಯ ಸಾವಿತ್ರಿ (ಸಪ್ತಗಾವಃ) ಯ ಕಿರಣಗಳ ಆಕಾರದ ಹಾಗಿರುತ್ತದೆ.

*

**ದೈವೀ ಪ್ರಕಾಶದ ಮಕ್ಕಳು ಹಾಗೂ ಅಂಧಕಾರದ ಸಾಮರ್ಥ್ಯಗಳು**

ವೇದದಲ್ಲಿ ರಿತಮ್ ಜ್ಯೋತಿಃ, ಹಿರಣ್ಯಮ್ ಜ್ಯೋತಿ ಎಂದರೆ ನಿಜವಾದ ಜ್ಯೋತಿ, ಬಂಗಾರ ವರ್ಣದ ಜ್ಯೋತಿ ಇವುಗಳ ಅಭಿವ್ಯಕ್ತಿ ಇರುವುದನ್ನು ನಾವು ನೆನಪಿಗೆ ತಂದುಕೊಳ್ಳಬೇಕು, ಇವು ನಮಗೆ ಅಧಿಕ ಸುಳಿವು ನೀಡುತ್ತವೆ, ಆರ್ಯ, ರಿತ, ಹಿರಣ್ಯ ಎಂಬ ಸೂರ್ಯ ಪ್ರಕಾಶದ ವಿಶೇಷಣಗಳು ಪರಸ್ಪರ ಪ್ರಕಾಶ

ನೀಡುತ್ತವೆ ಮತ್ತು ಬಹುಮಟ್ಟಿಗೆ ಸಮಾನಾರ್ಥ ಹೊಂದಿರುತ್ತವೆ ಎಂದು ನಾನು ಸೂಚಿಸುತ್ತೇನೆ ದೈವೀ ಸೂರ್ಯ ದೈವೀ ಸತ್ಯದ ಪ್ರಭು, ಹಾಗಾಗಿ ಅದರ ಪ್ರಕಾಶ ರಿತಮ್ ಜ್ಯೋತಿಃ, ಈ ಸತ್ಯದ ಪ್ರಕಾಶವನ್ನು ಆರ್ಯನ್, ದೇವ ಇಲ್ಲವೆ ಮರ್ತ್ಯ ವಶಪಡಿಸಿಕೊಂಡಿರುತ್ತಾನೆ, ಅದು ಅವನ ಆರ್ಯ– ಅವಸ್ಥೆ ಮತ್ತೆ ಹೇಳುವುದಾದರೆ ಹಿರಣ್ಯ ಎಂಬ ವಿಶೇಷಣವನ್ನು ಸೂರ್ಯನಿಗೆ ಸತತ ಅನ್ವಯಿಸಲಾಗುತ್ತದೆ ಮತ್ತು ವೇದದಲ್ಲಿ ಹಿರಣ್ಯ ಬಹುಶಃ ಸತ್ಯದ ದ್ರವ್ಯದ ಸಂಕೇತ, ಏಕೆಂದರೆ ಅದರ ದ್ರವ್ಯ ಪ್ರಕಾಶವಾಗಿರುತ್ತದೆ, ಅದು ಸೂರ್ಯನಲ್ಲಿ ಹಾಗೂ 'ಸ್ವರ'ದ (ಅಪ್ಸು ಸೂರ್ಯೇ) ಜಲಗಳಲ್ಲಿ ಕಂಡುಕೊಂಡ ಹಿರಣ್ಯ ಸಂಪತ್ತು– ಹಾಗಾಗಿ ಹಿರಣ್ಯಮ್ ಜ್ಯೋತಿಃ ಎಂಬ ವಿಶೇಷಣ ನಮಗೆ ದೊರಕುತ್ತದೆ. ಈ ಬಂಗಾರ ವರ್ಣದ ಇಲ್ಲವೆ ಹೊಳೆಯುತ್ತಿರುವ ಜ್ಯೋತಿ ಸತ್ಯದ ವರ್ಣವಾಗಿರುತ್ತದೆ, ಅದು ಆರ್ಯನ್ ಜಯಿಸಿದ ಜ್ಞಾನೋದಯದೊಂದಿಗೆ ತುಂಬಿಕೊಂಡಿರುವ ಯೋಚನೆಗಳ ವರ್ಣ ಕೂಡ ಆಗಿರುತ್ತದೆ. ಶುಕ್ರ, ಶ್ವೇತ ವರ್ಣದವಾಗಿರುವ ಆಕಳುಗಳದು ದೈವೀ ಪ್ರಕಾಶದ ವರ್ಣ; ಅದು ಹಾಗಿರುವಾಗ ಅಂಧಕಾರದ ಒಂದು ಸಾಮರ್ಥ್ಯವಾಗಿರುವ ದಸ್ಯುವಿನ ಬಣ್ಣ ಕಪ್ಪಾಗಿರುತ್ತದೆ. ಸತ್ಯದ ಪ್ರಕಾಶದ ಪ್ರಜ್ವಲಿಸುವಿಕೆ, ಜ್ಯೋತಿಃ ಆರ್ಯಮ್ ಆರ್ಯವರ್ಣವಾಗಿದೆ "ಜ್ಯೋತಿರಗ್ರಾಃ" ಆದದ್ದು ಆರ್ಯರ ಬಣ್ಣವಾಗಿದೆ ಎಂದು ನಾನು ಸೂಚಿಸುತ್ತೇನೆ, ಅಜ್ಞಾನದ ರಾತ್ರಿಯ ಕತ್ತಲೆಯ ಬಣ್ಣ ಪಣಿಗಳದಾಗಿದೆ; ದಾಸವರ್ಣವಾಗಿದೆ. ಈ ರೀತಿಯಲ್ಲಿ ವರ್ಣದ ಅರ್ಥ ಬಹುಮಟ್ಟಿಗೆ ಸ್ವಭಾವ ಎಂದಾಗುತ್ತದೆ ಇಲ್ಲವೆ ಆ ಸ್ವಭಾವವಿದ್ದ ಎಲ್ಲರೂ ಎಂದಾಗುತ್ತದೆ, ವರ್ಣ ಸ್ವಭಾವದ ಸಂಕೇತವಾಗಿರುತ್ತದೆ.

**CWSA, 15/225–26** **– ಶ್ರೀ ಅರವಿಂದರು**

*

ದೈವೀ ಪ್ರಕಾಶದ ಮಕ್ಕಳಾಗಿ, ಅದಿತಿಯ ಅನಂತತೆಯ ಬಾಲಕರಾಗಿ ದೇವರುಗಳಿರುವುದನ್ನು ವರ್ಣಿಸಿದ್ದನ್ನು ನಾನು ಕಂಡುಕೊಂಡೆ, ಅಪವಾದವಿಲ್ಲದೆ ಅವರು ಮನುಷ್ಯ ಹೆಚ್ಚಿಕೊಳ್ಳುವಂತೆ ಮಾಡುವವರು. ಅವನಿಗೆ ಪ್ರಕಾಶ ತಂದುಕೊಡುವವರು, ಅವನ ಮೇಲೆ ಜಲಗಳ ಪೂರ್ಣತೆಯನ್ನು, ಸ್ವರ್ಗಗಳ ಸಮೃದ್ಧಿಯನ್ನು ಧಾರೆಯೆರೆಯುವವರು, ದೈವೀ ಲೋಕಗಳನ್ನು ನಿರ್ಮಾಣ ಮಾಡುವವರು, ಶ್ರೇಷ್ಠ ಗುರಿ, ಸಮಗ್ರ ಸಂತೋಷ ಪರಿಪೂರ್ಣ ದಿವ್ಯಾನಂದ

ಇವುಗಳತ್ತ ಎಲ್ಲ ಆಕ್ರಮಣಗಳ ವಿರುದ್ಧ ಕರೆದೊಯ್ಯುವವರು ಎಂದು ವರ್ಣಿಸಲಾಗಿದೆ. ಅವರ ಪ್ರತ್ಯೇಕ ಕಾರ್ಯವಿಧಾನಗಳು ಅವರ ಚಟುವಟಿಕೆಗಳು, ಅವರ ವಿಶೇಷಣಗಳು, ಅವರಿಗೆ ಸಂಬಂಧಿಸಿದ ಪುರಾಣಗಳ ಮನೋವೈಜ್ಞಾನಿಕ ಅರ್ಥ, ಉಪನಿಷತ್ತು ಹಾಗೂ ಪುರಾಣಗಳ ಸೂಚನೆಗಳು ಇವೆಲ್ಲವುಗಳೊಂದಿಗೆ ಹೊರಹೊಮ್ಮಿದವು, ಅವುಗಳೊಂದಿಗೆ ಗ್ರೀಕರ ಪ್ರಾಸಂಗಿಕ ಸಾಂಪ್ರದಾಯಿಕ ಕತೆಯ ಪಾರ್ಶ್ವ–ಪ್ರಕಾಶವೂ ಸೇರಿದೆ. ಇನ್ನೊಂದೆಡೆಗೆ ಅವರನ್ನು ವಿರೋಧಿಸಿದ ದಾನವರು ಅವರ ಹೆಸರುಗಳು ಸೂಚಿಸುವ ಹಾಗೆ ವಿಭಜನೆ ಹಾಗೂ ಮಿತಿಗಳ, ಮುಚ್ಚಿಡುವ, ಛಿದ್ರಗೊಳಿಸುವ, ನುಂಗಿಹಾಕುವ, ಮಿತಿಗಳನ್ನುಂಟು ಮಾಡುವ ಎರಡಾಗಿಸುವ, ಅಡೆತಡೆ ಉಂಟು ಮಾಡುವ, ದೇವರುಗಳನ್ನು ವಿರೋಧಿಸುವ ಸಾಮರ್ಥ್ಯವುಳ್ಳ–ವರಾಗಿದ್ದರು, ಅವರು ಸತ್ತೆಯ ಮುಕ್ತ ಹಾಗೂ ಏಕತ್ರವಾದ ಸಮಗ್ರತೆಯನ್ನು ವಿರೋಧಿಸುತ್ತಿದ್ದರು. ವೃತ್ರರು, ಪಾಣಿಗಳು, ಅತ್ರಿಗಳು, ರಾಕ್ಷಸರು, ಸಂಬರವಲ, ನಾಮುಚಿ ಇತ್ಯಾದಿ ಹೆಸರಿದ್ದ ಇವರೆಲ್ಲ ದ್ರಾವಿಡ ರಾಜರಾಗಲಿ, ದೇವರುಗಳಾಗಲಿ ಅಲ್ಲ, ಅವರು ಹಾಗಿರಲಿ ಎಂದು ಆಧುನಿಕ ಉತ್ಪ್ರೇಕ್ಷಿತವಾದ ಐತಿಹಾಸಿಕ ಮನಸ್ಸು ಇಷ್ಟಪಡುತ್ತದೆ. ಅವರು ಹೆಚ್ಚು ಪ್ರಾಚೀನ ಕಾಲದ ಯೋಚನೆಯನ್ನು ಪ್ರತಿನಿಧಿಸುತ್ತಾರೆ, ಅತಿ ಪ್ರಾಚೀನ ಕಾಲದ ಆ ಯೋಚನೆ ನಮ್ಮ ಪೂರ್ವಜರ ಧಾರ್ಮಿಕ ಹಾಗೂ ನೈತಿಕ ಪೂರ್ವಮಗ್ನತೆಗಳಿಗೆ ಹೆಚ್ಚು ಹೊಂದಿಕೊಳ್ಳುವಂತಹ–ದಾಗಿತ್ತು. ಅವರು ಉಚ್ಚತರ ಒಳ್ಳೆಯದು ಹಾಗೂ ನಿಮ್ನತರ ಆಸೆ ಇವುಗಳ ನಡುವಿನ ಹೋರಾಟವನ್ನು ಪ್ರತಿನಿಧಿಸುತ್ತಾರೆ, ಮತ್ತು ಋಗ್ವೇದದ ಈ ಕಲ್ಪನೆಯನ್ನು ಹಾಗೂ ಅದೇ ಒಳ್ಳೆಯದು ಹಾಗೂ ಅನಿಷ್ಟವಾದುದರ ನಡುವಿನ ಹೋರಾಟವನ್ನು ಬೇರೆ ರೀತಿಯಿಂದ ಝೋರಾಸ್ಟ್ರಿಯನ್‌ರ ಶಾಸ್ತ್ರಗಳಲ್ಲಿ ಕಡಿಮೆ ಮನೋವೈಜ್ಞಾನಿಕ ಸೂಕ್ಷ್ಮತೆಯಿಂದ, ನೈತಿಕವಾಗಿ ಹೆಚ್ಚು ನೇರವಾಗಿರುವಿಕೆಯಿಂದ ಅಭಿವ್ಯಕ್ತಪಡಿಸ–ಲಾಗಿದೆ. ಝೋರಾಸ್ಟ್ರಿಯನ್‌ರು ಪ್ರಾಚೀನ ಕಾಲದಲ್ಲಿ ನಮ್ಮ ನೆರೆಹೊರೆಯ–ವರಾಗಿದ್ದರು, ಬಂಧುವರ್ಗದವರಾಗಿದ್ದರು, ಬಹುಶಃ ಸಾಮಾನ್ಯ ಮೂಲ ಆರ್ಯನ್ ನಾಗರಿಕತೆಯ ಶಿಸ್ತುಪಾಲನೆಯಿಂದ ಮುಂದುವರಿದುಕೊಂಡು ಹೋಗಿರಬಹುದು.

*

## ದೈವೀ ಸತ್ಯ ಹಾಗೂ ದೈವೀ ಪ್ರಕಾಶ ಇವುಗಳ ಸ್ವಾಭಾವಿಕ ಶತ್ರು

ದಸ್ಯು ಸ್ವಾಭಾವಿಕ ಶತ್ರು. ಈ ವಿಭಜಿತಗೊಳಿಸುವವರು, ಕೊಳ್ಳೆ ಹೊಡೆಯು–ವವರು, ಹಾನಿಕಾರಕ ಸಾಮರ್ಥ್ಯಗಳು, ಈ ದಾನವರು ವಿಭಜನೆಯ ಮಾತೆಯ ಪುತ್ರರು ಇವರೆಲ್ಲರನ್ನು ಕುರಿತು ಹಲವಾರು ಸರ್ವಸಾಧಾರಣ ನಾಮಧೇಯಗಳಡಿ ಋಷಿಗಳು ಮಾತನಾಡಿದ್ದಾರೆ. ಅಲ್ಲಿ ರಾಕ್ಷಸರಿದ್ದಾರೆ, ತಿಂದು ಹಾಕುವವರಿದ್ದಾರೆ, ನುಂಗಿ ಹಾಕುವವರಿದ್ದಾರೆ, ತೋಳಗಳಿವೆ, ಮತ್ತು ಛಿದ್ರಗೊಳಿಸುವವರಿದ್ದಾರೆ, ನೋವುಂಟು ಮಾಡುವವರಿದ್ದಾರೆ ಹಾಗು ದ್ವೇಷಿಸುವವರಿದ್ದಾರೆ, ದ್ವಿಗುಣ–ಗೊಳಿಸುವವರಿದ್ದಾರೆ, ಬಂಧನಕ್ಕೊಳಪಡಿಸುವವರಿದ್ದಾರೆ, ದೂಷಣೆ ಮಾಡುವವ–ರಿದ್ದಾರೆ. ಆದರೆ ಹಾಗೆಯೇ ನಮಗೆ ಕೆಲವೊಂದು ವಿಶಿಷ್ಟ ಹೆಸರುಗಳನ್ನು ಕೊಡಲಾಗಿದೆ. ಸರ್ಪವಾಗಿದ್ದ ವೃತ್ರ ಬಹಳ ಭವ್ಯ ವಿರೋಧಿ; ಏಕೆಂದರೆ ಅವನು ತನ್ನ ಅಂಧಕಾರದ ಸುರುಳಿಗಳಿಂದ ದೈವೀ ಅಸ್ತಿತ್ವದ, ದೈವೀ ಕ್ರಿಯೆಯ ಎಲ್ಲ ಸಾಧ್ಯತೆಗೆ ಅಡ್ಡಿ ಉಂಟುಮಾಡುತ್ತಾನೆ. ವೃತ್ರನನ್ನು ಕೊಂದುಬಿಟ್ಟಾಗಲೂ ಕೂಡ ಅವನೊಳಗಿಂದ ಹೆಚ್ಚು ಭಯಾನಕ ಶತ್ರುಗಳು ಮೇಲೆದ್ದು ಬರುತ್ತಾರೆ. ಶುಶ್ನ ತನ್ನ ಅಶುದ್ಧ ಹಾಗೂ ಪರಿಣಾಮಕಾರಿಯಲ್ಲದ ಶಕ್ತಿಯಿಂದ ನಮಗೆ ನೋವನ್ನುಂಟು ಮಾಡುತ್ತಾನೆ, ನಾಮುಚಿ ತನ್ನ ದೌರ್ಬಲ್ಯಗಳೊಡನೆ ಮನುಷ್ಯನನ್ನು ಹೊಡೆಯುತ್ತಾನೆ, ಇತರರೂ ಮುತ್ತಿಗೆ ಹಾಕುತ್ತಾರೆ, ಪ್ರತಿಯೊಬ್ಬನಿಗೂ ಅವನಿಗೆ ಯೋಗ್ಯವಾದ ಅನಿಷ್ಟವಿರುತ್ತದೆ. ನಂತರ ಅಲ್ಲಿ ವಲ ಹಾಗೂ ಪಣಿಗಳಿರುತ್ತಾರೆ, ಅವರು ಇಂದ್ರಿಯ ಜೀವನದಲ್ಲಿ ವ್ಯಾಪಾರಿಗಳಾಗಿರುತ್ತಾರೆ, ಉಚ್ಚತರ ದೈವೀ ಪ್ರಕಾಶವನ್ನು ಹಾಗೂ ಅದರ ಜ್ಞಾನೋದಯಗಳನ್ನು ಕದಿಯುವವರು, ಮರೆಯಲ್ಲಿರಿಸಿರುವವರು ಆಗಿರುತ್ತಾರೆ, ಅವುಗಳನ್ನು ಅವರು ಅಂಧಕಾರಕ್ಕೀಡು ಮಾಡಬಲ್ಲರು ಹಾಗೂ ತಪ್ಪು ಉಪಯೋಗ ಮಾಡಬಲ್ಲರು– ತಮ್ಮ ಸಂಗ್ರಹದ ಬಗ್ಗೆ ಅಸೂಯೆಪಟ್ಟುಕೊಳ್ಳುವ ಅಪವಿತ್ರ ಅತಿಥೇಯರು ದೇವರುಗಳಿಗೆ ಯಜ್ಞವನ್ನು ಅರ್ಪಿಸುವುದಿಲ್ಲ. ಇವರು ಮತ್ತು ನಮ್ಮ ಅಜ್ಞಾನ ಅನಿಷ್ಟ ದೌರ್ಬಲ್ಯ ಹಾಗೂ ಅನೇಕ ಮಿತಿಗಳು ಇವುಗಳನ್ನು ಮೂರ್ತೀಕರಣಗೊಂಡವರಿಗಿಂತ ಹೆಚ್ಚಿನವರು ಮನುಷ್ಯನ ಮೇಲೆ ಸತತ ಸಮರ ನಡೆಸುತ್ತಾರೆ. ಅವರು ಹತ್ತಿರದಿಂದ ಮನುಷ್ಯನನ್ನು ಸುತ್ತುವರಿಯುತ್ತಾರೆ ಇಲ್ಲವೆ ದೂರದಿಂದ ಅವನ ಮೇಲೆ ತಮ್ಮ ಬಾಣಗಳನ್ನು ಬಿಡುತ್ತಾರೆ ಇಲ್ಲವೆ ಅವನ ದ್ವಾರವಿದ್ದ ಮನೆಯಲ್ಲಿ ದೇವರಿರಬೇಕಾದ ಸ್ಥಾನದಲ್ಲಿ ನೆಲೆಸುತ್ತಾರೆ, ತಮ್ಮ ಆಕಾರರಹಿತ, ತಡವರಿಸುವ ಮುಖಗಳನ್ನು

ಹೊತ್ತುಕೊಂಡು, ತಮ್ಮ ಶಕ್ತಿಯ ಸಾಕಷ್ಟಿರದ ಉಸಿರಿನೊಂದಿಗೆ ವಾಸ ಕೂಡ ಮಾಡುತ್ತಾರೆ; ಅವನ ಸ್ವ–ಅಭಿವ್ಯಕ್ತಿಯನ್ನು ನಾಶಮಾಡುತ್ತಾರೆ. ಅವರನ್ನು ಹೊರಗೋಡಿಸಬೇಕು, ಸೋಲಿಸಬೇಕು; ಕೊಂದು ಹಾಕಬೇಕು, ಪಾತಾಳದಲ್ಲಿಯ ಅವರ ಅಂಧಕಾರದಲ್ಲಿ ಅವರನ್ನು ತಳ್ಳಬೇಕು, ಅದಕ್ಕಾಗಿ ಅಧಿಕ ಬಲವುಳ್ಳ ಹಾಗೂ ಸಹಾಯಕರಾದ ದೇವತೆಗಳ ಸಹಾಯ ಪಡೆಯಬೇಕು.

**CWSA, 15/46–379** **– ಶ್ರೀ ಅರವಿಂದರು**

*

## ವೇದಗಳಲ್ಲಿ ಕಂಡುಬರುವ ದೇವರುಗಳು ಹಾಗೂ ದೇವಿಯರು

### ದೇವಪ್ರಮುಖರ ಆಂತರಿಕ ಪ್ರಾಮುಖ್ಯತೆ

ಎಲ್ಲ ವೈದಿಕ ದೇವಪ್ರಮುಖರಲ್ಲಿ ಈ ಬಾಹ್ಯ, ಆಂತರಿಕ ಹಾಗೂ ಅತ್ಯಂತ ಆಳದಲ್ಲಿರುವ ಕಾರ್ಯವಿಧಾನಗಳಿವೆ, ಅವರ ಹೆಸರುಗಳಿವೆ. ಪರಿಚಿತವಾಗಿರುವ ಹಾಗೂ ರಹಸ್ಯವಾಗಿರುವ ಅವರೆಲ್ಲರೂ ತಮ್ಮ ಬಾಹ್ಯಗುಣಲಕ್ಷಣಗಳಲ್ಲಿ ಭೌತಿಕ ಪ್ರಕೃತಿಯ ಸಾಮರ್ಥ್ಯಗಳಾಗಿದ್ದಾರೆ; ಅವರೆಲ್ಲರಿಗೂ ಆಂತರಿಕ ಅರ್ಥವಿದೆ, ಚೈತ್ಯಾತ್ಮಿಕ ಕಾರ್ಯವಿಧಾನವಿದೆ, ಮತ್ತು ಮನೋವೈಜ್ಞಾನಿಕ ಮಹಿಮಾಸ್ತೋತ್ರ–ಗಳಿವೆ; ಹಾಗೆಯೇ ಎಲ್ಲರೂ ಒಂದು ಅತ್ಯುಚ್ಚ ದೈವೀನೈಜತೆ (ಏಕಮ್ ಸತ್)ಯ ಅನಂತ ಅಸ್ತಿತ್ವದ ಅನೇಕ ರೀತಿಯ ಸಾಮರ್ಥ್ಯಗಳಾಗಿರುತ್ತಾರೆ ಬಹಳ ಶ್ರಮಪಟ್ಟು ಕಂಡುಕೊಳ್ಳಬಹುದಾದ, ತಿಳಿದುಕೊಳ್ಳಬೇಕಾದ ಈ ಪರಮೋಚ್ಚವಾದುದನ್ನು ತತ್ ಸತ್ಯಮ್, ತದೇಕಮ್ ಎಂದು ವೇದದಲ್ಲಿ ಕರೆಯಲಾಗಿದೆ ಹಾಗೂ ಅದು ವೈದಿಕ ದೇವಪ್ರಮುಖರ ಈ ಸಂಕೀರ್ಣ ಗುಣಲಕ್ಷಣ ರೂಪಗಳನ್ನು ಧಾರಣ ಮಾಡುತ್ತದೆ, ಅವುಗಳಿಗೆ ಕೇವಲ ಬಾಹ್ಯ ಭೌತಿಕ ಪ್ರಾಮುಖ್ಯತೆಯನ್ನು ಆರೋಪಿಸುವವರು ಅವುಗಳನ್ನು ತಪ್ಪಾದ ರೀತಿಯಲ್ಲಿ ಅರ್ಥಮಾಡಿಕೊಂಡಿರುತ್ತಾರೆ. ಈ ದೇವರುಗಳಲ್ಲಿ ಪ್ರತಿಯೊಬ್ಬನೂ, ಏಕೈಕ ದೈವೀ ಅಸ್ತಿತ್ವದಲ್ಲಿರುವ ಹಾಗೂ ತನ್ನಲ್ಲಿಯೇ ಸಂಪೂರ್ಣವಾದ ಹಾಗೂ ಪ್ರತ್ಯೇಕವಾದ ವ್ಯಕ್ತಿವಿಶಿಷ್ಟತೆಯಾಗಿರುತ್ತಾನೆ ಮತ್ತು ತಮ್ಮ ಸಾಮರ್ಥ್ಯಗಳ ಸಂಯೋಜನೆಯಲ್ಲಿ, ಅವರು ಸಂಪೂರ್ಣ ವಿಶ್ವಂಭರ ಸಾಮರ್ಥ್ಯವನ್ನು ರೂಪಿಸುತ್ತಾರೆ, ವಿಶ್ವವ್ಯಾಪಿಯಾಗಿ ಇಡಿಯಾದದ್ದಾಗುವಂತೆ ಮಾಡುತ್ತಾರೆ, 'ವೈಶ್ವದೇವ್ಯಮ್' ಮತ್ತೆ ಪ್ರತಿಯೊಬ್ಬನೂ, ತನ್ನದೇ ವಿಶಿಷ್ಟ ಕಾರ್ಯವಿಧಾನದ

ಹೊರತಾಗಿ, ಇತರರೊಂದಿಗೆ ಏಕೈಕ ದೇವಪ್ರಮುಖನಾಗಿರುತ್ತಾನೆ, ಪ್ರತಿಯೊಬ್ಬನೂ ತನ್ನಲ್ಲಿ ವಿಶ್ವಂಭರ ದೈವಿಕತೆಯನ್ನು ಹಿಡಿದಿಟ್ಟುಕೊಂಡಿರುತ್ತಾನೆ, ಪ್ರತಿಯೊಬ್ಬ ದೇವ ಇತರ ಎಲ್ಲ ದೇವರುಗಳೂ ಆಗಿರುತ್ತಾನೆ.

**CWSA, 20/201–02** **– ಶ್ರೀ ಅರವಿಂದರು**

*

## ವೈದಿಕ ದೇವತೆಗಳು ಜೀವಂತವಿರುವ ನೈಜತೆಗಳಾಗಿದ್ದಾರೆ

ವೈದಿಕ ದೇವತೆಗಳು ವಿಶ್ವಂಭರ ದೇವಪ್ರಮುಖನ ಹೆಸರುಗಳು, ಸಾಮರ್ಥ್ಯಗಳು, ವ್ಯಕ್ತಿವಿಶಿಷ್ಟತೆಗಳು ಆಗಿರುತ್ತಾರೆ ಮತ್ತು ಅವರಲ್ಲಿ ಪ್ರತಿಯೊಬ್ಬನು ದೈವೀ ಸತ್ತೆಯ ಒಂದು ಅವಶ್ಯವಾದ ಪ್ರಾಬಲ್ಯವನ್ನು ಪ್ರತಿನಿಧಿಸುತ್ತಾನೆ. ಅವರು ವಿಶ್ವವ್ಯಾಪಕತೆಯನ್ನು ಪ್ರಕಟಿಸುತ್ತಾರೆ ಮತ್ತು ಅದರಲ್ಲಿ ಅವರು ಪ್ರಕಟರಾಗಿರುತ್ತಾರೆ. ದೈವೀ ಪ್ರಕಾಶದ ಮಕ್ಕಳು, ಅನಂತದ ಪುತ್ರರು ಆದ ಅವರು ಮನುಷ್ಯನ ಆತ್ಮದಲ್ಲಿ ತಮ್ಮ ಸಹೋದರನನ್ನು, ಸಹಾಯಕನನ್ನು ಗುರುತಿಸುತ್ತಾರೆ, ತಾವೇ ಹೆಚ್ಚಿಕೊಳ್ಳು–ವುದರ ಮೂಲಕ ಅವನು ಹೆಚ್ಚಿಕೊಳ್ಳುವಂತಾಗಲು ಇಷ್ಟಪಡುತ್ತಾರೆ, ಅದರಿಂದಾಗಿ ಅವನ ಜಗತ್ತನ್ನು ತಮ್ಮ ಪ್ರಕಾಶ, ಬಲ ಹಾಗೂ ಸೌಂದರ್ಯಗಳೊಡನೆ ವಶಪಡಿಸಿಕೊಳ್ಳುವಂತಾಗುತ್ತದೆ. ದೇವರುಗಳು ದೈವೀ ಒಡನಾಟಕ್ಕಾಗಿ, ಬಾಂಧವ್ಯಕ್ಕಾಗಿ ಮನುಷ್ಯನಿಗೆ ಕರೆಕೊಡುತ್ತಾರೆ, ಅವರು ಅವನನ್ನು ತಮ್ಮ ಪ್ರಕಾಶಮಯ ಭ್ರಾತೃತ್ವದತ್ತ ಆಕರ್ಷಿಸುತ್ತಾರೆ, ಮೇಲಕ್ಕೆತ್ತಿ ಹಿಡಿಯುತ್ತಾರೆ, ಅವನ ಸಹಾಯಕ್ಕೆ ಕರೆ ಕೊಡುತ್ತಾರೆ, ರಾಕ್ಷಸೀ ಅಂಧಕಾರ ಹಾಗೂ ವಿಭಜನೆಗಳ ವಿರುದ್ಧ ತಮ್ಮ ಸಹಾಯ ನೀಡುತ್ತಾರೆ. ಮನುಷ್ಯ ತನ್ನ ವತಿಯಿಂದ ದೇವರುಗಳನ್ನು ಯಜ್ಞಕ್ಕಾಗಿ ಕರೆಯುತ್ತಾನೆ, ಅವರಿಗೆ ತನ್ನ ತೀವ್ರಗತಿಯನ್ನು ಹಾಗೂ ಬಲವನ್ನು, ದಾನಧರ್ಮಗಳನ್ನು ಮತ್ತು ತನ್ನ ಮಾಧುರ್ಯವನ್ನು ಅರ್ಪಿಸುತ್ತಾನೆ– ಅವುಗಳಲ್ಲಿ ಪ್ರಕಾಶಿಸುವ ಹಾಲು, ಬೆಣ್ಣೆಗಳಿರುತ್ತವೆ, ದೈವೀ ಸಂತೋಷ ಎಂಬ ಸಸ್ಯದಿಂದ ತಯಾರಾದ ಪಾನೀಯಗಳಿರುತ್ತವೆ, ಯಜ್ಞದ ಕುದುರೆ ಇರುತ್ತದೆ, ಕೇಕ್ (cake) ಮತ್ತು ಮಧುಗಳಿರುತ್ತವೆ, ದೈವೀ ಮನಸ್ಸಿರುವ ತೇಜಃಪೂರ್ಣ ಬೇಟೆಗಾರರಿಗಾಗಿ ಧಾನ್ಯವಿರುತ್ತದೆ. ಅವನು ಅವೆಲ್ಲವುಗಳನ್ನು ತನ್ನ ಸತ್ತೆಯಲ್ಲಿ ಮತ್ತು ಅವರ ಕಾಣಿಕೆಗಳನ್ನು ತನ್ನ ಜೀವನದಲ್ಲಿ ಸ್ವೀಕರಿಸುತ್ತಾನೆ, ಅವುಗಳನ್ನು ಸ್ತೋತ್ರದ ಮೂಲಕ, ಮಧುವಿನ ಮೂಲಕ ಹೆಚ್ಚಿಸುತ್ತಾನೆ– ಕಮ್ಮಾರ ಕಬ್ಬಿಣಕ್ಕೆ ರೂಪಕೊಟ್ಟಂತೆ

ಎಂದು ವೇದ ಹೇಳುತ್ತದೆ– ಮತ್ತು ಅವರ ಶ್ರೇಷ್ಠ ಮತ್ತು ಪ್ರಕಾಶಮಯ ದೇವಪ್ರಮುಖರನ್ನು ಪರಿಪೂರ್ಣವಾಗಿ ರೂಪಿಸುತ್ತಾನೆ.

ಈ ಎಲ್ಲ ವೈದಿಕ ಮಾನಸಿಕ ಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಬೀಗದ ಕೈ ದೊರೆತಾಗ ಅದು ಸುಲಭವಾಗುತ್ತದೆ, ಆದರೆ ಅದು ಕೇವಲ ಮಾನಸಿಕ ಕಲ್ಪನೆಗಳನ್ನು ಹೊಂದಿರುವಂತಹದು ಎಂಬ ತಪ್ಪು ಕಲ್ಪನೆ ಮಾಡಿಕೊಳ್ಳಬಾರದು. ದೇವರುಗಳು ಅಮೂರ್ತ ವಿಚಾರಗಳನ್ನು ಕುರಿತು ಇಲ್ಲವೆ ಪ್ರಕೃತಿಯ ಮನೋವೈಜ್ಞಾನಿಕ ಮತ್ತು ಭೌತಿಕ ಕಾರ್ಯ ವಿಧಾನಗಳನ್ನು ಕುರಿತು ಕೇವಲ ಕಾವ್ಯರೂಪದಲ್ಲಿರುವ ವ್ಯಕ್ತಿವಿಶಿಷ್ಟತೆಗಳಲ್ಲ. ಮಾನವ ಆತ್ಮದಲ್ಲಾಗುವ ವ್ಯತ್ಯಾಸಗಳು ವಿಶ್ವವ್ಯಾಪಿ ಹೋರಾಟವನ್ನು ಪ್ರತಿನಿಧಿಸುತ್ತವೆ, ಆ ವ್ಯತ್ಯಾಸಗಳು ತತ್ವಗಳಲ್ಲಿ ಹಾಗೂ ಪ್ರವೃತ್ತಿಗಳಲ್ಲಷ್ಟೇ ಅಲ್ಲ, ಆದರೆ ಅವುಗಳಿಗೆ ಆಧಾರ ನೀಡುವ ಹಾಗೂ ಅವುಗಳನ್ನು ಮೈವೆತ್ತುವ ವಿಶ್ವವ್ಯಾಪಿ ದೈವೀಸಾಮರ್ಥ್ಯಗಳಲ್ಲೂ ಇರುತ್ತವೆ. ಇವುಗಳೇ ದೇವರುಗಳು ಹಾಗೂ ದೈತ್ಯರಾಗಿರುತ್ತಾರೆ. ಜಗತ್ತಿನ ವೇದಿಕೆಯ ಮೇಲೆ ಹಾಗೂ ವ್ಯಕ್ತಿಗತ ಆತ್ಮದಲ್ಲಿ ಅದೇ ನಿಜವಾದ ನಾಟಕವನ್ನು ಅವೇ ಗಣ್ಯ ವ್ಯಕ್ತಿಗಳೊಂದಿಗೆ ಅಭಿನಯಿಸಲಾಗುತ್ತದೆ.

*

**ವಿಶ್ವವ್ಯಾಪಿ ದೇವರುಗಳು**

ಯಾವ ದೇವರುಗಳಿಗೆ ಯಜ್ಞವನ್ನು ಅರ್ಪಿಸಬೇಕು? ಮಾನವಸತ್ತೆಯಲ್ಲಿ ಹೆಚ್ಚುತ್ತಿರುವ ದೇವಪ್ರಮುಖನನ್ನು ಪ್ರಕಟಿಸಲು ಹಾಗೂ ಸಂರಕ್ಷಣೆ ಮಾಡಲು ಯಾರನ್ನು ಆಹ್ವಾನಿಸಬೇಕು?

**ಅಗ್ನಿ :** ಮೊದಲಿಗೆ ಅಗ್ನಿ, ಏಕೆಂದರೆ ಅವನಿಲ್ಲದೆ ಯಜ್ಞದ ಜ್ವಾಲೆ ಆತ್ಮದ ವೇದಿಕೆಯ ಮೇಲೆ ಪ್ರಜ್ವಲಿಸಲಾರದು. ಅಗ್ನಿಯ ಆ ಜ್ವಾಲೆ ಸಂಕಲ್ಪದ ಏಳು ನಾಲಿಗೆಗಳಿರುವ ಸಾಮರ್ಥ್ಯ, ಜ್ಞಾನದ ಸ್ವಭಾವವಿರುವ ದೇವನ ಶಕ್ತಿ. ಪ್ರಜ್ಞಾಪೂರ್ಣ ಹಾಗೂ ಶಕ್ತಿಯಿಂದ ತುಂಬಿಕೊಂಡಿರುವ ಸಂಕಲ್ಪ, ನಮ್ಮ ಮರ್ತ್ಯತೆಯಲ್ಲಿ ಅಮರ ಅತಿಥಿ, ಪರಿಶುದ್ಧ ಪುರೋಹಿತ ಮತ್ತು ದೈವೀ ಕೆಲಸಗಾರ, ಪೃಥ್ವಿ ಹಾಗೂ ಸ್ವರ್ಗಗಳ ನಡುವೆ ಮಧ್ಯಸ್ಥಿಕೆ ವಹಿಸುವವನು ಉಚ್ಚತರ ದೇವರುಗಳಿಗೆ ನಾವು ಅರ್ಪಿಸಿದ್ದನ್ನು ಅವನು ಕೊಂಡೊಯ್ಯುತ್ತಾನೆ ಮತ್ತು ಅವರ ಶಕ್ತಿ ಹಾಗೂ ಪ್ರಕಾಶಗಳನ್ನು ನಮ್ಮತ್ತ

ಮರಳಿ ತರುತ್ತಾನೆ.

**ಇಂದ್ರ :** ಪ್ರಬಲರಾದವರಲ್ಲಿ ಇಂದ್ರ ನಂತರ ಬರುತ್ತಾನೆ, ಅವನು ಪರಿಶುದ್ಧ ಅಸ್ತಿತ್ವದ ಸಾಮರ್ಥ್ಯವುಳ್ಳವನು, ಆ ಸಾಮರ್ಥ್ಯ ದೈವೀ ಮನಸ್ಸೆಂದು ಸ್ವ–ಪ್ರಕಟಗೊಂಡಿದೆ. ಅಗ್ನಿ ತನ್ನ ಜ್ಞಾನದ ಸ್ವಭಾವದೊಂದಿಗೆ ದೈವೀಶಕ್ತಿಯ ಒಂದು ಧ್ರುವವಾಗಿರುತ್ತಾನೆ. ಅದೇ ರೀತಿಯಲ್ಲಿ ಇಂದ್ರ ದೈವೀ ಪ್ರಕಾಶದ ಇನ್ನೊಂದು ಧ್ರುವವಾಗಿರುತ್ತಾನೆ, ಆ ಪ್ರಕಾಶದ ಸ್ವಭಾವ ಸ್ವರ್ಗದಿಂದ ಪೃಥ್ವಿಯೆಡೆಗೆ ಅವರೋಹಣ ಮಾಡುವುದಾಗಿ–ರುತ್ತದೆ. ಅವನು ಮಹಾಯೋಧನಾಗಿ ಹೊಳೆಯುವ ಕುದುರೆಗಳೊಂದಿಗೆ ನಮ್ಮ ಲೋಕದಲ್ಲಿ ಇಳಿದು ಬರುತ್ತಾನೆ, ಕತ್ತಲೆಯನ್ನು, ವಿಭಜನೆಯನ್ನು, ತನ್ನ ಮಿಂಚು–ಗಳೊಂದಿಗೆ ತೊಡೆದು ಹಾಕುತ್ತಾನೆ ಜೀವದಾಯಕ ಸ್ವರ್ಗೀಯ ಮಳೆಗಳನ್ನು ಧಾರೆಯಾಗಿ ಸುರಿಸುತ್ತಾನೆ, ಅನ್ವೇಷಕನ ಹೆಜ್ಜೆಗುರುತಿನಲ್ಲಿ ಅಂತರ್ಬೋಧೆಯನ್ನು, ಕಳೆದುಹೋದ ಇಲ್ಲವೆ ಅವಿತುಕೊಂಡ ಜ್ಞಾನೋದಯಗಳನ್ನು ಕಂಡುಹಿಡಿ–ಯುತ್ತಾನೆ, ದೈವೀ ಸತ್ಯದ ಸೂರ್ಯ ನಮ್ಮ ಮಾನಸಿಕತೆಯ ಸ್ವರ್ಗದಲ್ಲಿ ಮೇಲಕ್ಕೇರಿ ಹೋಗುವಂತೆ ಮಾಡುತ್ತಾನೆ.

**ಸೂರ್ಯ :** ಆ ಪರಮೋಚ್ಚ ದೈವೀ ಸತ್ಯದ ಪ್ರಭು– ಸತ್ತೆಯ ಸತ್ಯ, ಜ್ಞಾನದ ಸತ್ಯ, ವಿಧಾನ ಹಾಗೂ ಕ್ರಿಯೆ, ಚಲನೆ ಹಾಗೂ ಕಾರ್ಯಗತಿ ಇವೆಲ್ಲವುಗಳ ಸತ್ಯ. ಹಾಗಾಗಿ ಅವನು ಸೃಷ್ಟಿಕರ್ತ ಇಲ್ಲವೆ ಅದಕ್ಕೂ ಹೆಚ್ಚಾಗಿ ಎಲ್ಲ ವಸ್ತು–ವಿಷಯಗಳನ್ನು ಪ್ರಕಟಗೊಳಿಸುವವ– ಏಕೆಂದರೆ ಸೃಷ್ಟಿಯ ಕಾರ್ಯ ದೈವೀ ಸತ್ಯ ಹಾಗೂ ದೈವೀ ಸಂಕಲ್ಪಗಳ ಮೂಲಕ ಹೊರತರುವುದಾಗಿರುತ್ತದೆ, ಅಭಿವ್ಯಕ್ತ ಪಡಿಸುವುದಿರುತ್ತದೆ.– ನಮ್ಮ ಆತ್ಮಗಳಿಗೆ ಅವನು ತಂದೆ, ಪೋಷಿಸುವವನು, ಜ್ಞಾನೋದಯ ತಂದುಕೊಡುವವ ಆಗಿರುತ್ತಾನೆ. ನಾವು ಅರಸುತ್ತಿರುವ ಜ್ಞಾನೋದಯಗಳು ದೈವೀ ಅರುಣೋದಯದ ಹಾದಿಯಲ್ಲಿ ಬರುವ ಈ ದೈವೀಸೂರ್ಯನ ಹಿಂಡುಗಳು, ರಾತ್ರಿ ಅಡಗಿಸಿಟ್ಟ ಜಗತ್ತಿನ ನಂತರ ಬರುವ ಜಗತ್ತನ್ನು ಬಿಡುಗಡೆ ಮಾಡುವ, ತೆರೆದು ತೋರಿಸುವವನು ಈ ಸೂರ್ಯನಾಗಿರುತ್ತಾನೆ, ಇದು ಅತ್ಯುಚ್ಚ ದಿವ್ಯಾನಂದ ತಲುಪುವವರೆಗೆ ಇರುತ್ತದೆ.

**ಸೋಮ :** ಸೋಮ ಆ ದಿವ್ಯಾನಂದವನ್ನು ಪ್ರತಿನಿಧಿಸುವ ದೇವತೆ. ಅವನ ಅತ್ಯಾನಂದದ ಮಧು (wine) ಪೃಥ್ವಿಯ ಬೆಳವಣಿಗೆಗಳಲ್ಲಿ ಹಾಗೂ ಅಸ್ತಿತ್ವದ ಜಲಗಳಲ್ಲಿ ಮರೆಯಲ್ಲಿರುತ್ತದೆ, ಇಲ್ಲಿಯೂ ಕೂಡ ನಮ್ಮ ಭೌತಿಕ ಸತ್ತೆಯಲ್ಲಿ ಅವನ

ಅಮರತ್ವಗೊಳಿಸುವ ಪಾನೀಯಗಳಿರುತ್ತವೆ, ಮತ್ತು ಅವುಗಳನ್ನು ಒತ್ತಿ ಹಿಡಿದು ಹೊರಗೆ ತೆಗೆಯಬೇಕಾಗಿರುತ್ತದೆ ಮತ್ತು ಎಲ್ಲ ದೇವರುಗಳಿಗೆ ಅರ್ಪಿಸಬೇಕಾಗಿ–ರುತ್ತದೆ; ಏಕೆಂದರೆ ಆ ಬಲದಲ್ಲಿ ಇವು ಹೆಚ್ಚಾಗುತ್ತವೆ ಮತ್ತು ಜಯಿಸುತ್ತವೆ.

ಪ್ರಾಥಮಿಕ ಹಂತದ ಈ ಎಲ್ಲ ದೇವತೆಗಳಲ್ಲಿ ಪ್ರತಿಯೊಬ್ಬನ ಜೊತೆಗೆ ಇತರ ದೇವತೆಗಳ ಸಹಕಾರವಿರುತ್ತದೆ, ಅವನಿಂದಲೇ ಮೇಲಕ್ಕೇದ್ದು ಬರುವ ಕಾರ್ಯ ವಿಧಾನಗಳು ನೆರವೇರಿಕೆ ಕಂಡುಕೊಳ್ಳುವಂತೆ ಇತರ ದೇವತೆಗಳು ಮಾಡುತ್ತಾರೆ.

**CWSA, 15/379–80** **– ಶ್ರೀ ಅರವಿಂದರು**

*

**ವರುಣ–ಮಿತ್ರ–ಆರ್ಯಮಾನ್–ಭಗ :**

ಏಕೆಂದರೆ ಸೂರ್ಯನ ಸತ್ಯ ನಮ್ಮ ಮರ್ತ್ಯ ಸ್ವಭಾವದಲ್ಲಿ ಸ್ಥಿರವಾಗಿ ಸ್ಥಾಪಿತ–ಗೊಳ್ಳಬೇಕಾದರೆ ಅಲ್ಲಿ ಅತ್ಯಗತ್ಯವಾದ ಪೂರ್ವಭಾವಿಯಾಗಿರುವ ಷರತ್ತುಗಳಿವೆ; ವಿಶಾಲವಾದ ಪರಿಶುದ್ಧತೆ ಮತ್ತು ನಿರ್ಮಲವಾಗಿರುವ ವಿಸ್ತರಿಸಿಕೊಳ್ಳುವಿಕೆ–ಯಿರಬೇಕು, ಅದು ಎಲ್ಲ ಪಾಪವನ್ನು ಮತ್ತು ವಿಕಾರವಾದ ಮಿಥ್ಯೆಯನ್ನು ನಾಶಮಾಡಬೇಕು– ಇದು ವರುಣ; ಪ್ರೇಮದ ಪ್ರಕಾಶಮಯ ಸಾಮರ್ಥ್ಯ ನಮ್ಮ ಎಲ್ಲ ಯೋಚನೆಗಳನ್ನು, ಕ್ರಿಯೆಗಳನ್ನು ಮತ್ತು ಪ್ರಚೋದನೆಗಳನ್ನು ಮುಂದೆ ಕರೆದೊಯ್ಯುವಂತಹದು ಮತ್ತು ಸಾಮರಸ್ಯದಲ್ಲಿರಿಸುವಂತಹದು– ಇದು ಮಿತ್ರ, ಸ್ಪಷ್ಟವಾಗಿ ವಿವೇಚಿಸುವ ಅಭೀಪ್ಸೆಯ ಹಾಗೂ ಪ್ರಯತ್ನದ ಒಂದು ಅಮರ ಪ್ರಾಬಲ್ಯ– ಇದು ಆರ್ಯಮಾನ್, ಎಲ್ಲ ವಸ್ತು–ವಿಷಯಗಳಿಂದ ದೊರೆಯ–ಬಹುದಾದ ಸರಿಯಾದ ಸಂತೋಷವನ್ನು ಹೊಂದುವ ಸಂತೋಷಕರ ಸ್ವಯಂಪ್ರೇರಣೆ ಇರುವಂತಹದು, ಪಾಪ, ದೋಷ ಹಾಗೂ ವೇದನೆ ಇವುಗಳ ಅನಿಷ್ಟ ಕನಸನ್ನು ಚದುರಿಸುವಂತಹದು– ಇದು ಭಗ. ಈ ನಾಲ್ಕು ಸೂರ್ಯನ ದೈವೀ ಸತ್ಯದ ಸಾಮರ್ಥ್ಯಗಳಾಗಿವೆ.

**ಅಶ್ವಿನಿ ದೇವತೆಗಳು :** ಸೋಮನ ಇಡಿಯಾದ ದಿವ್ಯಾನಂದ ನಮ್ಮ ಸ್ವಭಾವದಲ್ಲಿ ಸ್ಥಾಪಿತಗೊಳ್ಳುವುದಕ್ಕಾಗಿ ಮನಸ್ಸು, ಜೀವಶಕ್ತಿ ಹಾಗೂ ದೇಹ ಇವುಗಳ ಸಂತೋಷಕರ, ಜ್ಞಾನೋದಯ ಪಡೆದ ಮತ್ತು ಊನಗೊಂಡಿರದ ಸ್ಥಿತಿ ಅವಶ್ಯವಾಗಿರುತ್ತದೆ. ಈ ಸ್ಥಿತಿಯನ್ನು ಇಬ್ಬರು ಅಶ್ವಿನಿ ದೇವತೆಗಳು ನಮಗೆ ಕೊಡುತ್ತಾರೆ; ದೈವೀ ಪ್ರಕಾಶದ ಪುತ್ರಿಯನ್ನು ಮದುವೆ ಮಾಡಿಕೊಂಡ ಅವರು,

ಜೇನುತುಪ್ಪ (ಮಧು) ವನ್ನು ಕುಡಿಯುವವರು, ಪರಿಪೂರ್ಣ ತೃಪ್ತಿಗಳನ್ನು ತಂದುಕೊಡುವವರು, ಊನವಾದದ್ದನ್ನು ವಾಸಿಮಾಡುವವರು ಆಗಿರುವುದರಿಂದ ನಮ್ಮ ಜ್ಞಾನದ ಹಾಗೂ ಕ್ರಿಯೆಯ ಭಾಗಗಳನ್ನು ಆಕ್ರಮಿಸಿರುತ್ತಾರೆ ಮತ್ತು ಸುಲಭ, ಜಯಶಾಲಿ ಆರೋಹಣಕ್ಕಾಗಿ ನಮ್ಮ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಸತ್ತೆಯನ್ನು ತಯಾರು ಮಾಡುತ್ತಾರೆ.

**ರಿಭುಗಳು ಮತ್ತು ಮರುತರು**

ದೈವೀ ಮನಸ್ಸಾದ ಇಂದ್ರನಿಗೆ, ಮಾನಸಿಕ ರೂಪಗಳಿಗೆ ಆಕಾರ ಕೊಡುವುದಕ್ಕಾಗಿ ಸಹಾಯಕರೆಂದು ಕುಶಲಕರ್ಮಿಗಳಿದ್ದಾರೆ, ಅವರು ರಿಭುಗಳು, ಅವರು ಮಾನಸಿಕ ಸಾಮರ್ಥ್ಯಗಳಾಗಿದ್ದಾರೆ, ಅವರು ಯಜ್ಞದ ತಮ್ಮ ಕರ್ಮದಿಂದ ಹಾಗೂ ಸೂರ್ಯನ ಉಜ್ವಲ ವಾಸಸ್ಥಳದತ್ತ ಆರೋಹಣ ಮಾಡುವುದರ ಮೂಲಕ ಅಮರತ್ವವನ್ನು ಸಿದ್ಧಿಸಿಕೊಂಡಿದ್ದಾರೆ ಮತ್ತು ಮನುಕುಲ ಆ ಸಿದ್ಧಿಯನ್ನು ಪುನರಾವರ್ತಿಸುವುದಕ್ಕೆ ಸಹಾಯ ಮಾಡುತ್ತಾರೆ. ಅವರು ಮನಸ್ಸಿನ ಮೂಲಕ ಇಂದ್ರನ ಕುದುರೆಗಳಿಗೆ, ಅಶ್ವಿನಿ ದೇವತೆಗಳ ರಥಕ್ಕೆ, ದೇವತೆಗಳ ಆಯುಧಗಳಿಗೆ, ಪ್ರಯಾಣದ ಹಾಗೂ ಸಮರದ ಎಲ್ಲ ಸಾಧನಗಳಿಗೆ ಆಕಾರ ನೀಡುತ್ತಾರೆ. ಆದರೆ ಸತ್ಯದ ದೈವೀಪ್ರಕಾಶ ನೀಡುವವನು, ವೃತ್ರಾಸುರನನ್ನು ವಧೆ ಮಾಡಿದವನು ಎಂದಾಗಿ ಇಂದ್ರನಿಗೆ ಮರುತರು ಸಹಾಯ ಮಾಡುತ್ತಾರೆ, ಅವರು ಯೋಚನೆಯ ಪ್ರಕಾಶವನ್ನು ಹಾಗೂ ಸ್ವ–ಅಭಿವ್ಯಕ್ತಿಯ ಧ್ವನಿಯನ್ನು ಸಿದ್ಧಿಸಿಕೊಂಡ ಸಂಕಲ್ಪದ ಹಾಗೂ ದೈವೀ ಪ್ರಾಣಿಕ ಶಕ್ತಿಯ ಸಾಮರ್ಥ್ಯಗಳಾಗಿರುತ್ತಾರೆ. ಅವರು ಎಲ್ಲ ಯೋಚನೆಗಳ ಹಿಂದಿರುತ್ತಾರೆ, ಮಾತುಗಳಿಗೆ ಪ್ರಚೋದನೆ ನೀಡುತ್ತಾರೆ, ಪರಮೋಚ್ಚ ಪ್ರಜ್ಞೆಯ ದೈವೀ ಪ್ರಕಾಶ, ದೈವೀ ಸತ್ಯ ಹಾಗೂ ದಿವ್ಯಾನಂದಗಳಿಗಾಗಿ ಅವುಗಳತ್ತ ಸಮರ ಕೈಕೊಳ್ಳುತ್ತಾರೆ.

**ಸ್ತ್ರೀಜಾತಿಯ ಚೈತನ್ಯಗಳು**

ಹಾಗೆಯೇ ಅಲ್ಲಿ ಸ್ತ್ರೀಜಾತಿಯ ಚೈತನ್ಯಗಳಿವೆ, ದೇವಾಧಿದೇವ ಪುರುಷನೂ ಆಗಿದ್ದಾನೆ, ಸ್ತ್ರೀಯೂ ಆಗಿದ್ದಾನೆ ಮತ್ತು ದೇವರುಗಳೂ ಕೂಡ ಕ್ರಿಯಾಶೀಲ–ವಾಗಿಸುವ ಆತ್ಮಗಳು ಇಲ್ಲವೆ ನಿಷ್ಕ್ರಿಯೆಯಲ್ಲಿದ್ದು ನಿರ್ವಹಣೆ ಮಾಡುವ, ಕ್ರಮಬದ್ಧ–ವಾಗಿರಿಸುವ ಚೈತನ್ಯಗಳಾಗಿರುತ್ತಾರೆ.

**ಅದಿತಿ ಹಾಗೂ ಅವಳ ಸಾಮರ್ಥ್ಯಗಳು**

ಅದಿತಿ ದೇವರುಗಳ ಅನಂತ ಮಾತೆಯಾಗಿದ್ದಾಳೆ, ಇವಳು ಮೊದಲು ಬರುತ್ತಾಳೆ, ಇವಳಲ್ಲದೆ ದೈವೀ ಪ್ರಜ್ಞೆಯ ಐದು ಸಾಮರ್ಥ್ಯಗಳಿವೆ– ಮಹಿ ಇಲ್ಲವೆ ಭಾರತಿ, ಇವಳು ದೈವೀ ಮೂಲದಿಂದ ಎಲ್ಲ ವಸ್ತು–ವಿಷಯಗಳನ್ನು ನಮಗೆ ತಂದುಕೊಡುವ ವಿಶಾಲ ದೈವೀಶಬ್ದ, ಇಳಾ, ಇವಳು ದೈವೀ ಸತ್ಯದ ಬಲವತ್ತರವಾದ ಆದಿಕಾಲದ ಶಬ್ದ, ನಮಗೆ ಅದರ ಕ್ರಿಯಾಶೀಲ ದರ್ಶನ ಮಾಡಿಸುತ್ತಾಳೆ; ಸರಸ್ವತಿ, ಇವಳು ಅಂತರ್ಬೋಧೆ, ಸ್ವರ್ಗದ ಅನ್ವೇಷಕಳು, ಅವಚೇತನದ ನೆಲಗವಿಯಲ್ಲಿ ಇಳಿದು ಹೋಗಿ ಅಲ್ಲಿ ಮರೆಯಲ್ಲಿರುವ ಜ್ಞಾನೋದಯಗಳನ್ನು ಕಂಡು ಹಿಡಿಯುತ್ತಾಳೆ; ದಕ್ಷಿಣಾ, ಇವಳ ಕಾರ್ಯವಿಧಾನ ಸರಿಯಾಗಿ ವಿವೇಚನೆ ಮಾಡುವುದು, ಕ್ರಿಯೆಯನ್ನು ಅರ್ಪಿತವಾದದ್ದನ್ನು ವ್ಯವಸ್ಥಿತಗೊಳಿಸುವುದು ಮತ್ತು ಯಜ್ಞದಲ್ಲಿ ಪ್ರತಿಯೊಬ್ಬ ದೇವಪ್ರಮುಖನಿಗೆ ಅವನ ಪಾಲನ್ನು ಹಂಚುವುದು ಆಗಿರುತ್ತದೆ. ಪ್ರತಿಯೊಬ್ಬ ದೇವನಿಗೆ ಅವನ ಸ್ತ್ರೀ ಚೈತನ್ಯವಿರುತ್ತದೆ.

ಈ ಎಲ್ಲ ಕ್ರಿಯೆ, ಹೋರಾಟ ಹಾಗೂ ಆರೋಹಣ ಇವುಗಳಿಗೆ ನಮ್ಮ ತಂದೆಯಾದ ಸ್ವರ್ಗ, ತಾಯಿಯಾದ ಪೃಥ್ವಿ, ದೇವತೆಗಳ ತಂದೆ ತಾಯಂದಿರು ಇವರುಗಳೆಲ್ಲ ಅನುಕ್ರಮವಾಗಿ ಕೇವಲ ಮಾನಸಿಕ, ಚೈತ್ಯಾತ್ಮಿಕ ಹಾಗೂ ಭೌತಿಕ ಪ್ರಜ್ಞೆ ಇವುಗಳನ್ನು ಪೋಷಿಸುತ್ತಾರೆ.

**CWSA, 15/379–82**

*

**ಅದಿತಿ ಮತ್ತು ಉಷಾ**

ಉಷಾಳನ್ನು ಆಕಳುಗಳ ತಾಯಿ ಎಂದು ಮತ್ತೆ, ಮತ್ತೆ ವರ್ಣಿಸಲಾಗಿದೆ. ಆಕಳು ಭೌತಿಕ ಪ್ರಕಾಶದ ಇಲ್ಲವೆ ಆಧ್ಯಾತ್ಮಿಕ ಜ್ಞಾನೋದಯದ ವೈದಿಕ ಸಂಕೇತವಾದರೆ, ಆ ಪದಗುಚ್ಛ ಹೊಂದಿರಬಹುದಾದ ಅರ್ಥ ಹೀಗಿದೆ: ಅವಳು ಹಗಲು ಹೊತ್ತಿನಲ್ಲಿರುವ ಬೆಳಕಿನ ಭೌತಿಕ ಕಿರಣಗಳ ಮಾತೆ ಇಲ್ಲವೆ ಮೂಲ, ಇಲ್ಲವೆ ಪರಮೋಚ್ಚ ದೈವೀ ದಿನದ ತೇಜಸ್ಸುಗಳನ್ನು, ಭವ್ಯತೆಯನ್ನು, ಆಂತರಿಕ ಜ್ಞಾನೋದಯಗಳನ್ನು ಸೃಷ್ಟಿಸುತ್ತಾಳೆ. ಆದರೆ ವೇದದಲ್ಲಿ ದೇವತೆಗಳ ಮಾತೆಯಾದ

ಅದಿತಿಯನ್ನು ಆಕಳು ಎಂದೂ ಮತ್ತು ಸರ್ವ ಸಾಧಾರಣ ಮಾತೆಯೆಂದೂ ವರ್ಣಿಸಿದ್ದನ್ನು ನಾವು ನೋಡುತ್ತೇವೆ; ಅವಳು ಪರಮೋಚ್ಚ ಪ್ರಕಾಶವಾಗಿದ್ದು ಅವಳಿಂದ ಎಲ್ಲ ತೇಜಸ್ಸುಗಳು ಮುಂದುವರಿದುಕೊಂಡು ಹೋಗುತ್ತವೆ, ಇದಕ್ಕೆ ವಿರುದ್ಧವಾಗಿ ದನು ಇಲ್ಲವೆ ದಿತಿ ವಿಭಜಿತ ಪ್ರಜ್ಞೆ, ವೃತ್ರನ ಹಾಗೂ ದಾನವರ ಮಾತೆಯಾಗಿದ್ದಾಳೆ,– ಅವರು ದೇವತೆಗಳ ಹಾಗೂ ತನ್ನ ಪ್ರಗತಿಪಥದಲ್ಲಿರುವ ಮನುಷ್ಯನ ವೈರಿಗಳಾಗಿದ್ದಾರೆ. ಹೆಚ್ಚು ಸರ್ವಸಾಧಾರಣ ಮುಖದಲ್ಲಿ ಅದಿತಿ ಪ್ರಜ್ಞೆಯ ಎಲ್ಲ ವಿಶ್ವವ್ಯಾಪಿ ರೂಪಗಳು ಎಂದರೆ ಭೌತಿಕ ಪ್ರಜ್ಞೆ ಹಾಗೂ ಅದರ ಮುಂದಿರುವ ಪ್ರಜ್ಞೆಯ ರೂಪಗಳ ಮೂಲವಾಗಿದ್ದಾಳೆ, ಏಳು ಆಕಳುಗಳು 'ಸಪ್ತ ಗಾವಃ", ಅವಳ ರೂಪಗಳು ಮತ್ತು ಅಲ್ಲಿ ಆ ದೈವೀಮಾತೆಯ ಏಳು ಹೆಸರುಗಳು ಹಾಗೂ ಏಳು ಆಸನಗಳಿವೆ ಎಂದು ಹೇಳಲಾಗಿದೆ. ಆಕಳುಗಳ ತಾಯಿಯಾದ ಉಷಾ ಅದಿತಿಯ ಈ ಪರಮೋಚ್ಚ ದೈವೀ ಪ್ರಕಾಶ, ಪರಮೋಚ್ಚ ದೈವೀಪ್ರಜ್ಞೆ ಇವುಗಳ ಒಂದು ಸಾಮರ್ಥ್ಯ ಇಲ್ಲವೆ ಒಂದು ರೂಪವಾಗಿರಬಹುದು. ಅವಳನ್ನು ಋಗ್ವೇದದಲ್ಲಿ (1.113.19) "ಮಾತಾ ದೇವಾನಾಂ ಅದಿತೇರ ಅನೀಕಂ" ದೇವತೆಗಳ ಮಾತೆ, ಅದಿತಿಯ ರೂಪ ಎಂದು ವರ್ಣಿಸಲಾಗಿದೆ.

**CWSA, 15/131–32** **– ಶ್ರೀ ಅರವಿಂದರು**

*

**ಮೂರು ದೇವಿಯರು: ಸರಸ್ವತಿ, ಭಾರತಿ, ಇಳಾ**

ಸರಸ್ವತಿ ನದಿಯ ರೂಪದಲ್ಲಿ ಇತರ ನದಿಗಳೊಂದಿಗೆ ಸಂಪರ್ಕ ಹೊಂದಿರುವಳಷ್ಟೇ ಅಲ್ಲ, ಆದರೆ ಇತರ ದೇವಿಯರೊಡನೆಯೂ ಕೂಡ ಸಂಪರ್ಕದಲ್ಲಿದ್ದಾಳೆ, ಆ ದೇವಿಯರು, ಸ್ಪಷ್ಟವಾಗಿ, ಅದರಲ್ಲೂ ವಿಶೇಷವಾಗಿ ಭಾರತಿ ಮತ್ತು ಇಳಾ ಇವರು ಮನೋವೈಜ್ಞಾನಿಕ ಸಂಕೇತಗಳಾಗಿದ್ದಾರೆ. ನಂತರದ ಪೂಜೆಯ ಪೌರಾಣಿಕ ರೂಪಗಳಲ್ಲಿ ಸರಸ್ವತಿ ಮಾತಿನ, ಕಲಿಕೆಯ ಹಾಗೂ ಕಾವ್ಯದ ದೇವಿಯಾಗಿದ್ದಾಳೆ, ಭಾರತಿ ಎಂಬುದು ಅವಳ ಹೆಸರುಗಳಲ್ಲಿ ಒಂದು, ಆದರೆ ವೇದದಲ್ಲಿ ಭಾರತಿ ಮತ್ತು ಸರಸ್ವತಿ ಇವರು ಭಿನ್ನ ದೇವಿಯರಾಗಿದ್ದಾರೆ. ಭಾರತಿಯನ್ನು ಮಹಿ ಎಂದು ಕೂಡ ಕರೆಯುತ್ತಾರೆ, ಮಹಿ ಎಂದರೆ ಭವ್ಯ, ಶ್ರೇಷ್ಠ ಇಲ್ಲವೆ ವಿಶಾಲ ಎಂಬ ಅರ್ಥ ಹೊಂದಿದೆ, ಇಳಾ, ಭಾರತಿ ಹಾಗೂ ಸರಸ್ವತಿ ಇವರು ಸತತ ಕಂಡುಬರುವ ಸೂತ್ರದಲ್ಲಿ ಒಬ್ಬರಿಗೊಬ್ಬರು ಸಹಕಾರಿಯಾಗಿದ್ದಾರೆ.

ಅಗ್ನಿಯಿಂದ ಯಜ್ಞಕ್ಕೆ ಆಹ್ವಾನಿತರಾಗುವವರನ್ನು ಕುರಿತು ಇರುವ ಸ್ತೋತ್ರಗಳಲ್ಲಿ ಹಾಗಿರುವುದು ಕಂಡುಬರುತ್ತದೆ.

ಇಳಾ ಸರಸ್ವತೀ ಮಹೀ ತಿಸ್ರೋ ದೇವೀರ್ ಮಯೋಭುವಃ
ಬರ್ಹಿಃ ಸೀದಂತ್ವಸ್ರಿಧಃ (I. 13.9)

"ಇಳಾ, ಸರಸ್ವತಿ ಮತ್ತು ಮಹಿ ಈ ಮೂವರು ದೇವಿಯರು ದಿವ್ಯಾನಂದಕ್ಕೆ ಜನ್ಮ ಕೊಡುವವರಾಗಿದ್ದಾರೆ, ಅವರು ಯಜ್ಞವೇದಿಕೆಯಲ್ಲಿ ತಮ್ಮ ಸ್ಥಾನಗಳನ್ನು ಅಲಂಕರಿಸಲಿ, ಅವರು ಎಡವುವರಲ್ಲ, ನೋವುಕೊಡಲು ಬರುವವರಲ್ಲ ಇಲ್ಲವೆ ನೋಯಿಸುವವರಲ್ಲ". ಆ ವಿಶೇಷಣದ ಅರ್ಥ, ನನ್ನ ಯೋಚನೆಯ ಪ್ರಕಾರ, ಅವರಲ್ಲಿ ಅನಿಷ್ಟ ಪರಿಣಾಮಗಳನ್ನುಂಟು ಮಾಡುವ ದುರಿತಮ್‌ದ, ಪಾಪದ ಇಲ್ಲವೆ ದೋಷ ಕೂಪಗಳಲ್ಲಿ ಎಡವಿ ಬೀಳುವಂತೆ ಮಾಡುವ ಮಿಥ್ಯೆಯ ಯಾವ ಚಲನೆಯೂ ಇರುವುದಿಲ್ಲ.

"ನಮ್ಮ ಯಜ್ಞಕ್ಕೆ ಭಾರತಿ ವೇಗದಿಂದ ಚಲಿಸುತ್ತ ಬರುವಂತಾಗಲಿ, ಇಲ್ಲಿ ಇಳಾ ನಮ್ಮ ಪ್ರಜ್ಞೆಯನ್ನು (ಇಲ್ಲವೆ ಜ್ಞಾನವನ್ನು ಇಲ್ಲವೆ ಗ್ರಹಿಕೆಗಳನ್ನು) ಜಾಣನಾದ ಮಾನವನಲ್ಲಿ ಎಚ್ಚತ್ತುಗೊಳ್ಳುವಂತೆ ಮಾಡಲಿ ಮತ್ತು ಸರಸ್ವತಿ– ಮೂರು ದೇವಿಯರು ದಿವ್ಯಾನಂದ ನೀಡುವ ಆಸನಗಳಲ್ಲಿ, ತಮ್ಮ ಕಾರ್ಯವನ್ನು ಚೆನ್ನಾಗಿ ಕೈಕೊಳ್ಳುತ್ತ ಕುಳಿತುಕೊಳ್ಳುವಂತಾಗಲಿ".

ಈ ಮೂರು ದೇವಿಯರಲ್ಲಿ ಹತ್ತಿರದಿಂದ ಜೋಡಣೆಗೊಳಗಾದ ಕಾರ್ಯವಿಧಾನಗಳಿವೆ, ಅವು ಸರಸ್ವತಿಯ ಸ್ಫೂರ್ತಿ ನೀಡುವ ಸಾಮರ್ಥ್ಯಕ್ಕೆ ಸದೃಶವಾಗಿವೆ ಎಂಬುದು ಸ್ಪಷ್ಟವಾಗಿದೆ, ಇನ್ನೂ ಹೆಚ್ಚು ಸ್ಪಷ್ಟವಾಗುವುದು. ಸರಸ್ವತಿ ದೈವೀಶಬ್ದ ಹಾಗೂ ಸ್ಫೂರ್ತಿಯಾಗಿದ್ದಾಳೆ, ನಾನು ಸೂಚಿಸಿದ ಹಾಗೆ ಅದು ರಿತಮ್ ಎಂದರೆ ದೈವೀಸತ್ಯಪ್ರಜ್ಞೆಯಿಂದ ಬರುತ್ತದೆ. ಭಾರತಿ ಮತ್ತು ಇಳಾ ಇವರೂ ಕೂಡ ಅದೇ ದೈವೀಶಬ್ದ ಇಲ್ಲವೆ ದೈವೀ ಜ್ಞಾನದ ಭಿನ್ನ ರೂಪಗಳಾಗಿರಬೇಕು.

**ಸೂರ್ಯ ಸಾವಿತ್ರಿ**

ಹಾಗಾದರೆ ಯಾರಿಂದ ಈ ಕಿರಣಗಳು ಹೊರಬರುತ್ತವೆಯೋ ಆ ಸೂರ್ಯ ಯಾರು? ಅವನು ದೈವೀಸತ್ಯದ ಪ್ರಭು, ಜ್ಞಾನೋದಯವನ್ನುಂಟು ಮಾಡುವ ಸೂರ್ಯ, ಸಾವಿತ್ರಿ ದೈವೀ ಸೃಷ್ಟಿಕರ್ತೆ, ಪೂಷನ್ ದೈವೀ ಹೆಚ್ಚಿಸುವವನು. ಅವನ

ಕಿರಣಗಳು ಅವುಗಳದೇ ಸ್ವಭಾವದಲ್ಲಿ ಜ್ಞಾನಪ್ರಕಾಶನದ, ಸ್ಫೂರ್ತಿಯ, ಅಂತರ್ಬೋಧೆಯ, ಪ್ರಕಾಶಮಯ ವಿವೇಚನೆಯ ಅತಿಮಾನಸ ಚಟುವಟಿಕೆ–ಗಳಾಗಿರುತ್ತವೆ ಮತ್ತು ವೇದಾಂತ ವಿಜ್ಞಾನ ಎಂದು ಕರೆಯುವ ವಿಶ್ವಾತೀತ ತತ್ವದ ಕ್ರಿಯೆಯಿಂದ ರಚಿತವಾಗಿರುತ್ತದೆ. ಈ ವಿಜ್ಞಾನ ಪರಿಪೂರ್ಣ ಜ್ಞಾನ, ವೇದ ರಿತಮ್, ದೈವೀ ಸತ್ಯವಾಗಿರುತ್ತದೆ. ಆದರೆ ಈ ಕಿರಣಗಳು ಮಾನವನ ಮಾನಸಿಕತೆಯಲ್ಲಿ ಇಳಿದು ಬರುತ್ತವೆ ಮತ್ತು ಅದರ ಶಿಖರದಲ್ಲಿ ಪ್ರಕಾಶಮಯ ಬುದ್ಧಿಮತ್ತೆಯ 'ಸ್ವರ'ದ ಜಗತ್ತನ್ನು ರೂಪಿಸುತ್ತವೆ, ಸ್ವರದ ಪ್ರಭು ಇಂದ್ರನಾಗಿರುತ್ತಾನೆ.

ಏಕೆಂದರೆ ವಿಜ್ಞಾನ ದೈವೀ ಕಾರ್ಯನಿರ್ವಾಹಕ ಶಕ್ತಿ, ಮಾನವನದಲ್ಲ. ಮಾನವ ಮನಸ್ಸು, ದೈವೀಮನಸ್ಸಿನ ಹಾಗೆ ಸ್ವ–ಪ್ರಕಾಶಿತ ಸತ್ಯದಿಂದ ರಚಿತವಾಗಿರುವುದಿಲ್ಲ, ಅದು ಇಂದ್ರಿಯ–ಮಾನಸಿಕತೆ, ಮನಸ್ಸು, ಅದು ದೈವೀ ಸತ್ಯವನ್ನು ಸ್ವೀಕರಿಸಬಲ್ಲದು, ತಿಳಿದುಕೊಳ್ಳಬಲ್ಲದು, ಆದರೆ ಅದರೊಡನೆ ಏಕವಾಗಿರುವುದಿಲ್ಲ. ಜ್ಞಾನದ ಪ್ರಕಾಶ ಈ ಮಾನವ ತಿಳಿವಳಿಕೆಗೆ ತನ್ನನ್ನು ಹದಗೊಳಿಸಿ ಮುಂದಿರಿಸಬೇಕು, ಅದರಿಂದಾಗಿ ಭೌತಿಕ ಪ್ರಜ್ಞೆಯ ಕ್ಷಮತೆಗಳಿಗೆ, ಸೀಮಿತತೆಗಳಿಗೆ ಅದರ ರೂಪ ಹೊಂದಿಕೊಳ್ಳುವಂತಾಗುವುದು. ಅದು ನಮ್ಮ ಮಾನಸಿಕ ಅಭಿವೃದ್ಧಿಗಾಗಿ ಒಂದರ ನಂತರ ಒಂದರಂತೆ ಬರುವ ಉತ್ಕ್ರಾಂತಿಪರ ಹಂತಗಳಲ್ಲಿ ನಮ್ಮನ್ನು ಪ್ರಗತಿಪರವಾಗಿ ಕರೆದೊಯ್ಯಬೇಕು. ಹಾಗಾಗಿ ನಮ್ಮ ಮಾನಸಿಕ ಅಸ್ತಿತ್ವವನ್ನು ರೂಪಿಸುವುದಕ್ಕಾಗಿ ಶ್ರಮಪಡುತ್ತಿದ್ದಂತೆ ಒಂದರ ಮೇಲೆ ಇನ್ನೊಂದಿರುವ ಮೂರು ಜಗತ್ತುಗಳನ್ನು ಒಂದರ ನಂತರ ಒಂದು ಬರುವಂತೆ ಸೂರ್ಯನ ಕಿರಣಗಳು ಸೃಷ್ಟಿಸುತ್ತವೆ– ಸಂವೇದನಾತ್ಮಕ, ಸೌಂದರ್ಯಾ–ಭಿರುಚಿಯಿರುವ ಹಾಗೂ ಭಾವನಾತ್ಮಕ ಮನಸ್ಸು, ಪರಿಶುದ್ಧ ಬುದ್ಧಿಮತ್ತೆ ಇರುವ ಮನಸ್ಸು ಮತ್ತು ದೈವೀ ಬುದ್ಧಿಮತ್ತೆಯ ಮನಸ್ಸು ಇವುಗಳನ್ನು ಕುರಿತು ಆ ಮೂರು ಜಗತ್ತುಗಳಿವೆ. ಮನಸ್ಸಿನ ಮೂರು ಲೋಕಗಳ ತುಂಬಿಕೊಂಡಿರುವಿಕೆ ಹಾಗೂ ಪರಿಪೂರ್ಣತೆ ಸತ್ತೆಯ ಪರಿಶುದ್ಧ ಮಾನಸಿಕ ಸ್ತರದ ಮೇಲಿರುತ್ತವೆ, ಅಲ್ಲಿ ಅವುಗಳ ಮೂರು ಪ್ರಭೆಗಳ ತ್ರೀಣಿ ರೋಶನಾನಿ ಹಾಗೆ ಮೂರು ಸ್ವರ್ಗಗಳ ಮೇಲೆ ಹೊಳೆಯುತ್ತವೆ ತಿಸ್ರೋದಿವಃ. ಆದರೆ ಅವುಗಳ ಭೌತಿಕ ಪ್ರಕಾಶ ಹಾಗೂ ಭೌತಿಕ ಪ್ರಜ್ಞೆಯ ಮೇಲೆ ಬೀಳುತ್ತದೆ ಮತ್ತು ಅದರ ಪ್ರಾಂತಗಳಲ್ಲಿ ಅನುಗುಣವಾದ ರೂಪತಾಳುವಿಕೆಗಳನ್ನು ಕೈಕೊಳ್ಳುತ್ತದೆ ಎಂದರೆ ಅವು ವೈದಿಕ ಪಾರ್ಥಿವಾನಿ ರಜಾಮ್ಸಿ, ಪೃಥ್ವಿಯ ಬೆಳಕಿನ ಪ್ರಾಂತಗಳಾಗಿರುತ್ತವೆ. ಅವು ತಿಸ್ರಃ ಪೃಥ್ವೀಃ ಮೂರು

ಪೃಥ್ವಿಗಳು ಕೂಡ ಆಗಿರುತ್ತವೆ. ಮತ್ತು ಈ ಎಲ್ಲ ಲೋಕಗಳಿಗೆ ಸೂರ್ಯ ಸಾವಿತ್ರಿ ಸೃಷ್ಟಿಕರ್ತನಾಗಿರುತ್ತಾನೆ.

ದೈವೀ ಸತ್ಯದ ಮೂಲಕ ಸಾವಿತ್ರಿ ಸೃಷ್ಟಿಕರ್ತೆಯಾಗಿರುತ್ತಾಳೆ, ಅದು ಬಿಡಿ ಭಾಗಗಳನ್ನು ಒಟ್ಟುಗೂಡಿಸಿ ರೂಪ ನೀಡುವಿಕೆ ಇಲ್ಲವೆ ವಸ್ತು-ವಿಷಯಗಳಿಗೆ ಯಾಂತ್ರಿಕ ರೂಪನೀಡುವಿಕೆ ಎಂಬ ಅರ್ಥದಲ್ಲಲ್ಲ. ಶಬ್ದದ ಬೀಜ ಪ್ರಚೋದನೆಯಾಗಿರುತ್ತದೆ, ಬಿಡುಗಡೆಗೊಳಿಸುವುದು, ಮುಂದೆ ಕಳಿಸಿಕೊಡುವುದು ಎಂದಾಗಿರುತ್ತದೆ, ಸೃಷ್ಟಿಗಾಗಿ ಸರ್ವಸಾಧಾರಣ ಶಬ್ದದ ಅರ್ಥವಿರುತ್ತದೆ, ಹಾಗಾಗಿ ಒಂದು ಉತ್ಪತ್ತಿಯಿರುತ್ತದೆ. ಪ್ರಾಸಂಗಿಕ ದೈವೀ ವಿಚಾರದ ಕ್ರಿಯೆ ಬಿಡಿ ಭಾಗಗಳನ್ನು ಒಟ್ಟುಗೂಡಿಸುವುದು ಆಗಿರುವುದಿಲ್ಲ, ಆದರೆ ತಪಸ್ಸಿನ ಮೂಲಕ, ತನ್ನ ಸತ್ತೆಯ ಪ್ರಜ್ಞೆಯ ಒತ್ತಡದ ಮೂಲಕ ಅದರೊಳಗೆ ಮರೆಯಲ್ಲಿರುವುದನ್ನು, ಸಾಧ್ಯಗೊಳಿಸುವ ಶಕ್ತಿಯಲ್ಲಿ ಗುಪ್ತವಾಗಿರುವುದನ್ನು, ದೈವೀ ಆಚೆಗಿರುವುದರಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವುದನ್ನು ಹೊರತರುತ್ತದೆ.

ಸೂರ್ಯ ದೈವೀ ಸತ್ಯದ ಪ್ರಕಾಶಗಳೊಂದಿಗೆ ಮನಸ್ಸನ್ನು ಹಾಗೂ ಯೋಚನೆಗಳನ್ನು ಪ್ರಕಾಶಿತಗೊಳಿಸುತ್ತಾನೆ. ಅವನು ವಿಪ್ರ, ಜ್ಞಾನೋದಯ ಪಡೆದವನು. ಆತ್ಮವನ್ನು ಸುತ್ತುವರಿದ ಪ್ರಜ್ಞೆಯಿಂದ, ವಾತಾವರಣದಿಂದ ವ್ಯಕ್ತಿಗತ ಮಾನವ ಮನಸ್ಸನ್ನು ಮುಕ್ತಗೊಳಿಸುವವನು ಅವನೇ ಆಗಿರುತ್ತಾನೆ ಮತ್ತು ತನ್ನದೇ ವ್ಯಕ್ತಿವಿಶಿಷ್ಟತೆಯೊಂದಿಗೆ ತನ್ನ ಪೂರ್ವಮಗ್ನತೆಯಿಂದ ಹೇರಲಾದ ಸೀಮಿತ ಚಲನೆಯನ್ನು ಭವ್ಯವಾಗಿಸುತ್ತಾನೆ. ಹಾಗಾಗಿ ಅವನು ಬೃಹತ್ (ಭವ್ಯವಾದವನು) ಆದರೆ ಅವನ ಪ್ರಕಾಶ ಅಸ್ಪಷ್ಟ ಪ್ರಕಾಶವೊಂದಲ್ಲ ಇಲ್ಲವೆ ಅವನ ಭವ್ಯತೆ ಗೊಂದಲಕ್ಕೀಡಾದ, ಕರಗಿಹೋದ ಆತ್ಮದ ಹಾಗೂ ಉದ್ದೇಶದ ದೃಷ್ಟಿಯಿಂದ ಬರುವುದಿಲ್ಲ; ಅದು ತನ್ನಲ್ಲಿ ವಸ್ತು-ವಿಷಯಗಳನ್ನು, ಅವುಗಳ ಇಡಿಯಾಗಿರು-ವಿಕೆಯಲ್ಲಿ, ಭಾಗಗಳಾಗಿರುವುಗಳಲ್ಲಿ ಹಾಗೂ ಸಂಬಂಧಗಳಲ್ಲಿ ಒಂದು ಸ್ಪಷ್ಟ ವಿವೇಚನೆಯನ್ನು ಹಿಡಿದುಕೊಂಡಿರುತ್ತದೆ. ಹಾಗಾಗಿ ಅವನು ವಿಪಶ್ಚಿತ್, ಗ್ರಹಿಕೆಯಲ್ಲಿ ಸ್ಪಷ್ಟತೆ ಇದ್ದವನು.

**CWSA, 15/288–89** **– ಶ್ರೀ ಅರವಿಂದರು**

*



ಮನುಷ್ಯನ ಆತ್ಮ ಸತ್ತೆಗಳಿಂದ ತುಂಬಿಕೊಂಡ ಒಂದು ಲೋಕ, ಅದು ಒಂದು ರಾಜ್ಯ, ಅದರಲ್ಲಿ ಪರಮೋಚ್ಚ ವಿಜಯಕ್ಕಾಗಿ ಸೈನ್ಯಗಳು ಸಹಾಯ ಮಾಡುತ್ತವೆ ಇಲ್ಲವೆ ಅಡೆತಡೆಯನ್ನುಂಟು ಮಾಡುತ್ತವೆ, ಅದೊಂದು ಮನೆಯಾಗಿದೆ, ಅಲ್ಲಿ ದೇವರುಗಳು ನಮ್ಮ ಅತಿಥಿಗಳಾಗಿರುತ್ತಾರೆ, ಆ ಮನೆಯನ್ನು ವಶವರ್ತಿ ಮಾಡಿಕೊಳ್ಳಲು ದಾನವರು ಹೋರಾಡುತ್ತಾರೆ. ಅದರ ಚೈತನ್ಯಗಳ ತುಂಬಿ–ಕೊಳ್ಳುವಿಕೆ ಹಾಗೂ ಅದರ ವಿಸ್ತಾರ ಇವು ಯಜ್ಞ ವೇದಿಕೆ ಹರಡಿಕೊಳ್ಳುವಂತೆ ಮಾಡುತ್ತವೆ, ಆ ವೇದಿಕೆಯನ್ನು ಸ್ವರ್ಗೀಯ ಸಭೆಗಾಗಿ ವ್ಯವಸ್ಥಿತಗೊಳಿಸ–ಲಾಗಿರುತ್ತದೆ ಮತ್ತು ಪರಿಶುದ್ಧಗೊಳಿಸಲಾಗಿರುತ್ತದೆ.

**CWSA, 15/384** **– ಶ್ರೀ ಅರವಿಂದರು**

*



ದೇವನೇ ಸ್ವತಃ ಯಜ್ಞದ ಪ್ರಭು. ದೇವ ಶಿವನಾಗಿದ್ದಾನೆ ಮತ್ತು ಪ್ರಕೃತಿ ಉಮಾ ಆಗಿದ್ದಾಳೆ. ಅವಳು ತನ್ನ ಹೃದಯದಲ್ಲಿ ಶಿವನ ಪ್ರತೀಕವನ್ನು ಕೊಂಡೊಯ್ಯುತ್ತಾಳೆ,

ಅವಳು ಅವನ ಗೋಚರ ರೂಪವನ್ನು ನೋಡಲಾಗುವುದಿಲ್ಲ. ಅವನ ಸ್ಪರ್ಶವೇದ್ಯವಾದ ದೇಹಕ್ಕಾಗಿ ಅವಳಲ್ಲಿ ಹಾತೊರೆತ ಇರುತ್ತದೆ. ಈ ಹಾತೊರೆತವೇ ವಿಶ್ವಂಭರ ಜೀವನದ ಆಳವಾದ ಪ್ರಾಮುಖ್ಯತೆಯಾಗಿದೆ.

**Bengali Writings : pp 46-47** **– ಶ್ರೀ ಅರವಿಂದರು**

*

## ವೇದದಲ್ಲಿರುವ ಮೂಲಭೂತ ಸತ್ಯಗಳು

### ಜಗತ್ತು ಆನಂದದಲ್ಲಿ ಹಾಗೂ ಆನಂದದ ಮೂಲಕ ಜೀವಿಸುತ್ತದೆ

ಜಗತ್ತು ಆನಂದದಲ್ಲಿ ಹಾಗೂ ಆನಂದದ ಮೂಲಕ ಜೀವಿಸುತ್ತದೆ. ಆನಂದದಿಂದ ನಾವು ಜನ್ಮತಾಳಿದೆವು, ಆನಂದದ ಮೂಲಕ ಜೀವಿಸುತ್ತಿದ್ದೇವೆ, ಆನಂದದತ್ತ ಮರಳಿ ಹೋಗುತ್ತೇವೆ ಎಂದು ವೇದ ಹೇಳುತ್ತದೆ. ಅದು ಅಧಿಕವಾಗಿ ಹೇಳುವುದೇನೆಂದರೆ ದಿವ್ಯಾನಂದದ ಈ ಸ್ವರ್ಗವಿರದಿದ್ದರೆ ಯಾವ ಮನುಷ್ಯನೂ ತನ್ನ ಉಸಿರನ್ನು ಒಳಗೆ ಎಳೆದುಕೊಳ್ಳುವುದಕ್ಕೆ ಹಾಗೂ ಹೊರಗೆ ಬಿಡುವುದಕ್ಕೆ ಅವನಲ್ಲಿ ಶಕ್ತಿಯಿರುತ್ತಿರಲಿಲ್ಲ, ಆಕಾಶದ್ರವ್ಯ (ether) ನಮ್ಮ ದೇಹವನ್ನು ಸುತ್ತುವರಿದ ರೀತಿಯಲ್ಲಿ ಆ ಸ್ವರ್ಗ ನಮ್ಮ ಅಸ್ತಿತ್ವವನ್ನು ಸುತ್ತುವರಿದಿರುತ್ತದೆ, ಅದು ತನ್ನ ಶಾಶ್ವತ ದ್ರವ್ಯದಿಂದ ಹಾಗೂ ಬಲದಿಂದ ಪೋಷಿಸುತ್ತದೆ ಹಾಗೂ ಜೀವನಕ್ಕೆ ಮತ್ತು ಚಟುವಟಿಕೆಗೆ ಆಧಾರವಾಗಿರುತ್ತದೆ. ಸಾರದಲ್ಲಿ ದಿವ್ಯಾನಂದದಿಂದ ಕೂಡಿದ ಜಗತ್ತು– ಇದು ವೇದಾಂತಿಕ ದರ್ಶನವಾಗಿತ್ತು ವೈದಿಕ ದೃಷ್ಟಾರನ ದೃಷ್ಟಿಯಾಗಿತ್ತು, ಅದು ತನ್ನ ಮೊದಲಿನ ವೀರ್ಯವತ್ತತೆಯಲ್ಲಿ ಹಿಂದುತ್ವವನ್ನು ಬೌದ್ಧಧರ್ಮದ ವಿಶ್ವವ್ಯಾಪಿ ವೇದನೆಯಿಂದ, ಮಾಯಾವಾದಿಯ ವಿಶ್ವವ್ಯಾಪಿ ಭ್ರಮೆಯಿಂದ ಭಿನ್ನವಾಗಿ ನೋಡುತ್ತದೆ. ಈ ದಿವ್ಯಾನಂದದಿಂದ ಪತನಗೊಳ್ಳುವ ಸಾಧ್ಯತೆಯಿದೆ, ಅದನ್ನು ಸಿದ್ಧಿಸಿಕೊಳ್ಳದೆ ಇರುವ ಆ ಪತನ ಅಪರಾ ಪ್ರಕೃತಿಯ ನಿಮ್ನ ಸ್ವಭಾವದಲ್ಲಾಗಿ ಅದನ್ನು ಗ್ರಹಿಸಲಾಗುವುದಿಲ್ಲ ವಶಪಡಿಸಿಕೊಳ್ಳಲಾಗುವುದಿಲ್ಲ. ಮನುಷ್ಯ ದಿವ್ಯಾನಂದದಿಂದ ತುಂಬಿಕೊಳ್ಳುವುಕ್ಕಾಗಿ ಎರಡು ವಿಷಯಗಳು ಅವಶ್ಯವಾಗಿವೆ, ಅವನ ಸತ್ತೆಯಲ್ಲಿ, ಜ್ಞಾನದಲ್ಲಿ ತುಂಬಿಕೊಂಡಿರುವಿಕೆ, ಅವುಗಳು ಏಕಗೊಳ್ಳುವುದರ ಮೂಲಕ ಎಲ್ಲ ಪ್ರಕಟಣೆಗಳಲ್ಲಿ ಅವನ ಬಲ ತುಂಬಿಕೊಳ್ಳುವುದಾಗಿದೆ, ಆ ಪ್ರಕಟಣೆ–

ಗಳೆಂದರೆ ವೀರ್ಯಮ್, ಬಲಮ್, ಭ್ರಜಸ್, ತೇಜಸ್ಸು, ಓಜಸ್ಸು. ದಿವ್ಯಾನಂದಕ್ಕಾಗಿ ಸತ್, ಚಿತ್ ಒಂದು ನೈಜತೆಯನ್ನುಂಟು ಮಾಡುತ್ತವೆ, ಚಿತ್ ಅದರ ಬಾಹ್ಯ ಕಾರ್ಯಗತಿಯಲ್ಲಿ ಪರಿಶುದ್ಧ ಶಕ್ತಿಯಾಗಿದೆ, ಅದಕ್ಕೆ ನಮ್ಮ ಋಷಿಗಳು 'ತಪಸ್' ಎಂಬ ಹೆಸರನ್ನು ಕೊಟ್ಟರು. ಇಲ್ಲಿ ಪೃಥ್ವಿಯ ಮೇಲೆಯೂ ಕೂಡ ಅಸ್ತಿತ್ವದ ಪೂರ್ಣತೆ, ಜ್ಞಾನೋದಯ ಹಾಗೂ ಶಕ್ತಿ ಇವುಗಳ ಮೇಲೆ ಅವಲಂಬಿಸಿರುವ ದಿವ್ಯಾನಂದದ ಪೂರ್ಣತೆಯನ್ನು ಸಿದ್ಧಿಸಿಕೊಳ್ಳುವುದಕ್ಕೆ ಮನುಕುಲದ ದಿಕ್ಕು ಬದಲಿಸುವಿಕೆ ಹಾಗೂ ಮನುಷ್ಯನ ಸಾಮೂಹಿಕ ಪ್ರಯತ್ನಗಳಿರಬೇಕು. ಅದನ್ನು ಇಲ್ಲಿ ಮತ್ತು ಆಚೆಗೆ ತನ್ನಲ್ಲಿ ಸಿದ್ಧಿಸಿಕೊಳ್ಳಲು ಇಹ ಚ ಅಮುತ್ರ ಚ, ಮಾನವ ವ್ಯಕ್ತಿಯ ದಿಕ್ಕು ಬದಲಿಸುವಿಕೆ ಹಾಗೂ ವ್ಯಕ್ತಿಗತ ಪ್ರಯತ್ನವಿರಬೇಕು. ಎಲ್ಲಿ ಅವನಲ್ಲಿರುವ ಜ್ಞಾನ ಈ ದಿವ್ಯಾನಂದವನ್ನು ಗ್ರಹಿಸಬಲ್ಲೆ ಎಂದು ಯೋಚಿಸು–ವುದೋ ಅಲ್ಲಿ ಅದು ಆ ಸ್ವರ್ಗವನ್ನು ಸ್ಥಿರಗೊಳಿಸುತ್ತದೆ.

**CWSA, 12/205–06** **– ಶ್ರೀ ಅರವಿಂದರು**

*

**ಹೆಚ್ಚು ಆಳವಾದ, ಉಚ್ಚತರವಾದ, ವಿಶಾಲವಾದ ದೈವೀ ಸತ್ಯವಿದೆ**

ಯಾವ ಯೋಚನೆಯ ಸುತ್ತ ಎಲ್ಲವೂ ಕೇಂದ್ರೀಕೃತವಾಗಿರುತ್ತದೆಯೋ ಅದು ದೈವೀ ಸತ್ಯ, ದೈವೀ ಪ್ರಕಾಶ ಹಾಗೂ ಅಮರತ್ವವನ್ನು ಅರಸುವುದಕ್ಕಾಗಿರುತ್ತದೆ. ಬಾಹ್ಯ ಅಸ್ತಿತ್ವದಲ್ಲಿರುವುದರ ಸತ್ಯಕ್ಕಿಂತ ಹೆಚ್ಚು ಆಳವಾದ, ಉಚ್ಚತರವಾದ ದೈವೀ ಸತ್ಯವಿರುತ್ತದೆ, ಮಾನವನ ತಿಳಿವಳಿಕೆಗಿಂತ ಶ್ರೇಷ್ಠತರವಾದ, ಉಚ್ಚತರವಾದ ದೈವೀ ಪ್ರಕಾಶವಿರುತ್ತದೆ, ಅದು ಜ್ಞಾನಪ್ರಕಾಶನ ಹಾಗೂ ಸ್ಫೂರ್ತಿಯಿಂದ ಬರುತ್ತದೆ, ಆತ್ಮ ಮೇಲಕ್ಕೇರಿ ಹೋಗಬೇಕಾದ ಅಮರತ್ವವಿದೆ. ನಾವು ಅದರತ್ತ ನಮ್ಮ ಮಾರ್ಗ ಕಂಡುಹಿಡಿಯಬೇಕು ಸಪಂತ ರಿತಮ್, ಅಮೃತಮ್ ಎಂದರೆ ದೈವೀ ಸತ್ಯ ಹಾಗೂ ಅಮರತ್ವ ಇವುಗಳ ಸ್ಪರ್ಶಕ್ಕೆ ಬರಬೇಕು, ದೈವೀ ಸತ್ಯದಲ್ಲಿ ಜನ್ಮ ತಾಳಿ ಅದರಲ್ಲಿ ಬೆಳೆಯಬೇಕು, ದೈವೀ ಸತ್ಯದ ಲೋಕದಲ್ಲಿ ಆತ್ಮದೊಂದಿಗೆ ಮೇಲಕ್ಕೇರಿ ಹೋಗಬೇಕು, ಅಲ್ಲಿ ಜೀವಿಸಬೇಕು, ಹಾಗೆ ಮಾಡುವುದೆಂದರೆ ದೇವ ಪ್ರಮುಖನೊಡನೆ ಏಕತೆ ಪಡೆಯುವುದಾಗಿದೆ ಮತ್ತು ಮರ್ತ್ಯ ಸ್ಥಿತಿಯಿಂದ ಅಮರತ್ವದತ್ತ ಸಾಗಿ ಹೋಗುವುದಾಗಿದೆ. ಇಲ್ಲಿ ಈ ಜಗತ್ತಿನ ನಿಮ್ನತರವಾದ

ಸತ್ಯವಿದೆ, ಅದಿದ್ದ ಹಾಗೆ ಬಹಳಷ್ಟು ಮಿಥ್ಯೆ ಹಾಗೂ ದೋಷಗಳ ಮಿಶ್ರಣಕ್ಕೊಳಗಾಗಿದೆ, ಅನೃತಸ್ಯ ಭೂರೇ. ದೈವೀ ಸತ್ಯದ ಮನೆಯಿದೆ, ಲೋಕವಿದೆ 'ಸದನಮ್ ಋತಸ್ಯ' ದೈವೀ ಸತ್ಯ ದೈವಿಕವಾಗಿ ಸರಿಯಾದದ್ದು, ವಿಶಾಲವಾದದ್ದು, 'ಸತ್ಯಮ್, ಋತಮ್, ಬೃಹತ್', ಅಲ್ಲಿ ಎಲ್ಲವೂ ದೈವೀ ಪ್ರಜ್ಞೆ 'ಋತಚಿತ್' ಮೂರು ಸ್ವರ್ಗಗಳನ್ನು ಹಾಗೂ ಅವುಗಳ ಪ್ರಕಾಶಗಳನ್ನು ತಲುಪುವವರೆಗೆ ಹಲವಾರು ಲೋಕಗಳಿವೆ; ಆದರೆ ಇದು ಅತ್ಯುಚ್ಚ ದೈವೀಪ್ರಕಾಶವಿರುವ ಲೋಕ. ದೈವೀ ಸತ್ಯದ ಸೂರ್ಯನಿರುವ ಲೋಕ, 'ಸ್ವರ' ಇಲ್ಲವೆ ಶ್ರೇಷ್ಠ ಸ್ವರ್ಗ. ಈ ಶ್ರೇಷ್ಠ ಸ್ವರ್ಗದತ್ತ ನಾವು ಮಾರ್ಗವನ್ನು ಕಂಡುಕೊಳ್ಳಬೇಕು. ಋತಸ್ಯ ಪಂಥಾಃ ಇಲ್ಲವೆ ಕೆಲವೊಮ್ಮೆ ಅದನ್ನು ದೇವತೆಗಳ ಮಾರ್ಗ ಎಂದು ಕರೆಯಲಾಗುತ್ತದೆ.

*

**ಏಕಮ್ ಸತ್–ಒಂದು ನೈಜತೆ**

ವೇದಾಂತದ ಬೋಧನೆಗಾಗಿ ಋಗ್ವೇದ ಬೀಜ ರೂಪದ್ದಾಗಿದೆ, ಹಾಗೆಯೇ ಅದರ ಆಂತರಿಕ ಆಚರಣೆ ಹಾಗೂ ಶಿಸ್ತುಪಾಲನೆ ಯೋಗ ಕುರಿತು ಕೈಕೊಳ್ಳಬೇಕಾದ ಆಚರಣೆ ಹಾಗೂ ಶಿಸ್ತುಪಾಲನೆಗೆ ಬೀಜ ರೂಪದ್ದಾಗಿದೆ. ಕೊನೆಯದಾಗಿ ವೈದಿಕ ಅನುಭಾವಿಗಳ ಬೋಧನೆಯ ತುತ್ತ ತುದಿಯಲ್ಲಿ ದೈವೀ ಏಕವಾದುದರ ನೈಜತೆ, 'ಏಕಮ್ ಸತ್ ಇಲ್ಲವೆ ತದ್ ಏಕಮ್' ಅದು ಉಪನಿಷತ್ತುಗಳ ಪ್ರಧಾನ ಶಬ್ದವಾಗುತ್ತದೆ. ದೈವೀ ಪ್ರಕಾಶದ ಹಾಗೂ ದೈವೀ ಸತ್ಯದ ಸಾಮರ್ಥ್ಯಗಳಾದ ದೇವರುಗಳು ದೈವೀ ಏಕೈಕನಾದವನ ಸಾಮರ್ಥ್ಯಗಳು ಹಾಗೂ ಹೆಸರುಗಳು, ಪ್ರತಿಯೊಬ್ಬ ದೇವ ಸ್ವತಃ ಎಲ್ಲ ದೇವರುಗಳಾಗಿರುತ್ತಾನೆ ಇಲ್ಲವೆ ಅವರನ್ನು ತನ್ನೊಳಗೆ ಕೊಂಡೊಯ್ಯುತ್ತಾನೆ. ಒಂದು ದೈವೀ ಸತ್ಯವಿದೆ, 'ತತ್ ಸತ್ಯಮ್', ಒಂದು ದಿವ್ಯಾನಂದವಿದೆ, ಅದರತ್ತ ನಾವು ಮೇಲಕ್ಕೇರಿ ಹೋಗಬೇಕು.

**CWSA, 16/19–21** – ಶ್ರೀ ಅರವಿಂದರು

*

**ಹಲವಾರು ಹೆಸರುಗಳುಳ್ಳ ಏಕೈಕ ದೈವೀ ಅಸ್ತಿತ್ವ**

ಅನುಭಾವಿಗಳ ಬೋಧನೆ ದೈವೀ ಅರಿತುಕೊಳ್ಳಲಾಗದವನನ್ನು, ಕಾಲರಹಿತ–ವಾದವನನ್ನು, ಹೆಸರಿಸಲಾಗದವನನ್ನು ಗುರುತಿಸುತ್ತದೆ, ಅಂತಹದು ಎಲ್ಲ ವಿಷಯಗಳ ಹಿಂದೆ ಹಾಗೂ ಮೇಲ್ಗಡೆಗಿದೆ ಮತ್ತು ಮನಸ್ಸು ಅಭ್ಯಾಸಪೂರ್ವಕ ಅದನ್ನು ಬೆಂಬತ್ತಿ ಹಿಡಿದುಕೊಳ್ಳಲಾರದು. ಅವ್ಯೆಯಕ್ತಿಕವಾಗಿ ಅದು 'ತತ್' ಏಕೈಕ ದೈವೀ ಅಸ್ತಿತ್ವ; ನಮ್ಮ ವ್ಯಕ್ತಿ ವಿಶಿಷ್ಟತೆ ಬೆಂಬತ್ತಿದಾಗ ಅದು ವಸ್ತು–ವಿಷಯಗಳ ರಹಸ್ಯದಿಂದ ದೇವನೆಂದು ಹೊರಹೊಮ್ಮಿ ತನ್ನನ್ನು ತೋರಿಸಿಕೊಡುತ್ತದೆ–ನಾಮರಹಿತವಾದಾಗ್ಯೂ ಅವನಿಗೆ ಹಲವಾರು ಹೆಸರುಗಳಿವೆ, ಪರಿಮಾಣ ರಹಿತವಾದಾಗ್ಯೂ ಹಾಗೂ ವರ್ಣನಾತೀತವಾದಾಗ್ಯೂ ಅವನು ತನ್ನಲ್ಲಿಯೇ ಹೆಸರು ಹಾಗೂ ಜ್ಞಾನದ ಎಲ್ಲ ವರ್ಣನೆಯನ್ನು, ರೂಪ ಹಾಗೂ ದ್ರವ್ಯ, ಶಕ್ತಿ ಹಾಗೂ ಚಟುವಟಿಕೆ ಇವೆಲ್ಲವುಗಳ ಪರಿಮಾಣಗಳನ್ನು ಹಿಡಿದಿಟ್ಟುಕೊಂಡಿರುತ್ತಾನೆ.

ದೇವ ಇಲ್ಲವೆ ದೇವ ಪ್ರಮುಖ ಮೂಲ ಕಾರಣ ಹಾಗೂ ಕೊನೆಯ ಪರಿಣಾಮ ಇವೆರಡೂ ಆಗಿರುತ್ತಾನೆ. ದೈವೀ ಅಸ್ತಿತ್ವದಲ್ಲಿರುವವನು, ಜಗತ್ತುಗಳ ಸೃಷ್ಟಿಕರ್ತ, ಎಲ್ಲ ವಸ್ತು–ವಿಷಯಗಳ ಪ್ರಭು ಹಾಗೂ ಉತ್ಪಾದಕ, ಪುರುಷ ಮತ್ತು ಸ್ತ್ರೀ, ದೈವೀ ಸತ್ತೆ ಹಾಗೂ ಪ್ರಜ್ಞೆ, ಜಗತ್ತುಗಳ ಹಾಗೂ ಅವುಗಳಲ್ಲಿ ವಾಸಿಸುವವರ ತಂದೆ–ತಾಯಿ, ಹಾಗೆಯೇ ಅವನು ಅವರ ಹಾಗೂ ನಮ್ಮ ದೈವೀ ಪುತ್ರ; ಏಕೆಂದರೆ ಅವನು ಜಗತ್ತುಗಳಲ್ಲಿ ಜನ್ಮತಾಳಿದ ದೈವೀಮಗು, ಅವನು ಜೀವಿಯ ಬೆಳವಣಿಗೆಯಲ್ಲಿ ತನ್ನನ್ನು ಪ್ರಕಟಿಸುತ್ತಾನೆ. ಅವನು ರುದ್ರ ಹಾಗೂ ವಿಷ್ಣು, ಪ್ರಜಾಪತಿ ಹಾಗೂ ಹಿರಣ್ಯಗರ್ಭ, ಸೂರ್ಯ, ಅಗ್ನಿ, ಇಂದ್ರ, ವಾಯು, ಸೋಮ, ಬೃಹಸ್ಪತಿ–ವರುಣ ಹಾಗೂ ಮಿತ್ರ ಹಾಗೂ ಭಗ, ಆರ್ಯಮಾನ್ ಹೀಗೆ ಎಲ್ಲ ದೇವರುಗಳಾಗಿದ್ದಾನೆ. ಅವನು ಜಾಣ, ಅಧಿಕಬಲವುಳ್ಳವನು ಹಾಗೂ ಮುಕ್ತಗೊಳಿಸುವವನು, ನಮ್ಮ ಕಾರ್ಯಗಳಿಂದ ಹಾಗೂ ನಮ್ಮ ಯಜ್ಞಗಳಿಂದ ಜನ್ಮತಾಳಿದವನು, ನಮ್ಮ ಸಂಗ್ರಾಮದ ಮಹಾಸಾಹಸಿ, ನಮ್ಮ ಜ್ಞಾನದ ದೃಷ್ಟಾರ, ನಮ್ಮ ದಿನಗಳೆದುರಿಗಿರುವ ವೇಗವಾಗಿ ಓಡುವ ಕುದುರೆ, ಅದು ಉಚ್ಚತರ ಸಮುದ್ರದತ್ತ ಜಿಗಿಯುತ್ತ ಹೋಗುತ್ತದೆ.

*

## ಮನುಷ್ಯನ ಆತ್ಮದ ಪ್ರಯಾಣ

ಮನುಷ್ಯನ ಆತ್ಮ ದೈವೀ ಪಕ್ಷಿ ಹಂಸದ ಹಾಗೆ ಹಾರಾಡುತ್ತದೆ, ಹೊಳೆಯುವ ಭೌತಿಕ ಹಾಗೂ ಮಾನಸಿಕ ಪ್ರಜ್ಞೆಯ ಅಂತರಿಕ್ಷಗಳಾಚೆಗೆ ಸಾಗಿ ಹೋಗುತ್ತದೆ, ಪ್ರಯಾಣಿಕನ ಹಾಗೆ ಮೇಲಕ್ಕೇರುತ್ತದೆ, ದೈವೀ ಸತ್ಯದತ್ತ ಆರೋಹಣ ಮಾಡುವ ಹಾಗೂ ಯೋಧನ ಮಾರ್ಗದಗುಂಟ ನಮಗಾಗಿ ಕಾದುಕೊಂಡಿರುವ ಈ ದೇವ ಪ್ರಮುಖನನ್ನು ಕಂಡುಹಿಡಿಯಲು, ಆ ಯೋಧ ದೇಹದ ಪೃಥ್ವಿ ಹಾಗೂ ಮನಸ್ಸಿನ ಸ್ವರ್ಗ ಇವುಗಳಾಚೆಗೆ ಸಾಗಿ ಹೋಗುತ್ತಾನೆ. ಈ ದೇವ ಪ್ರಮುಖ ಮೂರು ಬಗೆಯ ದೈವೀ ತತ್ವದಲ್ಲಿ ಆಸೀನನಾಗಿದ್ದಾನೆ, ದಿವ್ಯಾನಂದದ ಮೂಲವಾಗಿದ್ದಾನೆ, ಪರಮೋಚ್ಚ ರಹಸ್ಯವಿರುವ ಅಲ್ಲಿಂದ ನಮ್ಮತ್ತ ವಾಲಿಕೊಂಡಿರುತ್ತಾನೆ. ಶ್ರೇಷ್ಠತರ ದೇವರುಗಳಲ್ಲಿ ವ್ಯಕ್ತಿಯಾದ ಆ ದೇವ ಪ್ರಮುಖ ಅಲ್ಲಿ ಅಥವಾ ಇಲ್ಲಿ ಆಕರ್ಷಿಸುತ್ತಿರಲಿ ಇಲ್ಲವೆ ಔನ್ನತ್ಯದಲ್ಲಿರಲಿ ಯಾವಾಗಲೂ ಮನುಷ್ಯನ ಮಿತ್ರನಾಗಿ, ಪ್ರಿಯಕರನಾಗಿ ಸಹಾಯಕನಾಗಿರುತ್ತಾನೆ, ಹೊಳೆಯುತ್ತಿರುವ ಅವನು ಅನಂತದ ದೈವೀ ಆಕಳಿನ ಕೆಚ್ಚಲಿನಿಂದ ನಮಗೆ ಸಿಹಿಯಾದ ಹಾಲನ್ನು ಹಾಗೂ ಘೃತವನ್ನು ಕೊಡುವ ದನಗಾಹಿಗಳ ಹಿಂಡಿನ ಗ್ರಾಮೀಣ ದೈವೀ ಪ್ರಭುವಾಗಿದ್ದಾನೆ. ಅವನು ದೈವೀ ದಿವ್ಯಾನಂದದ ಅಮೃತದಂತಹ ಮದ್ಯದ ಮೂಲ ಹಾಗೂ ಹೊರಗೆ ಧಾರೆಯೆರೆಯವವನು, ನಾವು ಅಸ್ತಿತ್ವದ ಏಳು ಬಗೆಯ ಜಲಗಳಿಂದ ಎಳೆದುತಂದು ಅದನ್ನು ಕುಡಿಯುತ್ತೇವೆ ಇಲ್ಲವೆ ಸತ್ತೆಯ ಗುಡ್ಡದ ಮೇಲೆ ಬೆಳೆದ ಪ್ರಕಾಶಮಯ ಸತ್ಯದಿಂದ ಹಿಂಡಿ ಹೊರತೆಗೆದದ್ದನ್ನು ಕುಡಿದು ಹಾಗೂ ಅದರ ದಿವ್ಯಾನಂದಗಳಿಂದ ಮೇಲಕ್ಕೆತ್ತಲ್ಪಟ್ಟು ನಾವು ಅಮರರಾಗುತ್ತೇವೆ.

*

## ವೈದಿಕ ದೃಷ್ಟಾರರ ಪ್ರಧಾನ ಲೋಕಗಳು

1. ಪರಿಶುದ್ಧ ಅಸ್ತಿತ್ವ– ಸತ್ತೆಯ ಅತ್ಯುಚ್ಚ ಸತ್ಯದ ಸತ್ ಲೋಕ (ಸತ್ಯಲೋಕ)

2. ಪರಿಶುದ್ಧ ಪ್ರಜ್ಞೆ– ಅನಂತ ದೈವೀ ಸಂಕಲ್ಪ ಇಲ್ಲವೆ ಪ್ರಜ್ಞಾಪೂರ್ಣ ಶಕ್ತಿಯಿರುವ ಚಿತ್ ಲೋಕ. (ತಪೋಲೋಕ)

3. ಪರಿಶುದ್ಧ ದಿವ್ಯಾನಂದ– ಅಸ್ತಿತ್ವದ ಸೃಷ್ಟ್ಯಾತ್ಮಕ ಆನಂದದ ಲೋಕ (ಜನಲೋಕ)

4. ದೈವೀ ಜ್ಞಾನ ಇಲ್ಲವೆ ದೈವೀ ಸತ್ಯ– ವೈಶಾಲ್ಯದ ವಿಜ್ಞಾನ ಲೋಕ (ಮಹರ್ಲೋಕ)

5. ಮನಸ್ಸು– ಪ್ರಕಾಶದ ಲೋಕ (ಸ್ವರ)

6. ಪ್ರಾಣ– (ನರಗಳ ಸತ್ತೆ) ನಾನಾ ರೀತಿಯಲ್ಲಿ ಸಂಭವಿಸುತ್ತಿರುವ ಲೋಕಗಳು (ಭುವರ್)

7. ಭೌತದ್ರವ್ಯ– ಭೌತದ್ರವ್ಯವಿರುವ ಲೋಕ (ಭೂರ್).

**CWSA, 15/372** **– ಶ್ರೀ ಅರವಿಂದರು**

*

**ನಮ್ಮ ಜೀವನ ಒಂದು ಸಮರವಿದ್ದಂತೆ**

ನಮ್ಮ ಜೀವನ, ದೈವೀ ಪ್ರಕಾಶ, ದೈವೀ ಸತ್ಯ ಹಾಗೂ ಅಮರರಾದ ದೇವತೆಗಳು ಮತ್ತು ಅಂಧಕಾರದ ಸಾಮರ್ಥ್ಯಗಳು ಇವರ ನಡುವೆ ಒಂದು ಸಮರವಿದ್ದ ಹಾಗಿರುತ್ತದೆ. ಇವರನ್ನು ಅನೇಕ ಹೆಸರುಗಳಿಂದ ಎಂದರೆ ವೃತ್ರ ಹಾಗೂ ವೃತ್ರರು, ವಲ, ಪಾಣಿಗಳು, ದಸ್ಯುಗಳು ಹಾಗೂ ಅವರ ರಾಜರು ಇವುಗಳಿಂದ ಕರೆಯಲಾಗಿದೆ. ಈ ಅಂಧಕಾರದ ಸಾಮರ್ಥ್ಯಗಳು ಒಡ್ಡುವ ವಿರೋಧವನ್ನು ನಾಶಮಾಡಲು ನಾವು ದೇವತೆಗಳ ಸಹಾಯಕ್ಕೆ ಕರೆಕೊಡ–ಬೇಕಾಗುತ್ತದೆ, ಆ ಸಾಮರ್ಥ್ಯಗಳು ದೈವೀ ಪ್ರಕಾಶವನ್ನು ನಮ್ಮಿಂದ ಮುಚ್ಚಿಡುತ್ತವೆ. ಅದನ್ನು ಕಳುವು ಮಾಡುತ್ತವೆ, ಋತಸ್ಯ ಧಾರಾಃ ಎಂದರೆ ದೈವೀ ಸತ್ಯದ ಪ್ರವಾಹಗಳು, ಸ್ವರ್ಗದ ಪ್ರವಾಹಗಳು ಹರಿಯುವುದಕ್ಕೆ ತಡೆ ಉಂಟುಮಾಡುತ್ತವೆ, ಆತ್ಮದ ಆರೋಹಣವನ್ನು ಎಲ್ಲ ರೀತಿಯಲ್ಲಿ ತಡೆಗೊಳಪಡಿಸುತ್ತವೆ. ಆಂತರಿಕ ಯಜ್ಞದ ಮೂಲಕ ದೇವರನ್ನು ಆಹ್ವಾನಿಸಬೇಕು, ದೈವೀ ಶಬ್ದದ ಮೂಲಕ ನಮ್ಮೊಳಗೆ ಬರಲು ಕರೆಯಬೇಕು– ಅದು ಮಂತ್ರದ ವಿಶಿಷ್ಟ ಸಾಮರ್ಥ್ಯ,– ಯಜ್ಞದ ಕಾಣಿಕೆಗಳನ್ನು ಅವರಿಗೆ ಅರ್ಪಿಸಬೇಕು ಮತ್ತು ಆ ಅರ್ಪಣೆಯ ಮೂಲಕ ಅವರ ಕಾಣಿಕೆಗಳು ಬರುವುದನ್ನು ಸುರಕ್ಷಿತಪಡಿಸಬೇಕು, ಅದರಿಂದಾಗಿ ಈ ವಿಧಾನದ ಮೂಲಕ ನಾವು ನಮ್ಮ ಗುರಿಯತ್ತ ಆರೋಹಣ ಮಾಡಲು ಮಾರ್ಗ ನಿರ್ಮಾಣ ಮಾಡಬಹುದು. ವೇದದಲ್ಲಿ ಹೇಳಿದ ಬಾಹ್ಯಯಜ್ಞದ ಅಂಶಗಳನ್ನು ಆಂತರಿಕ ಯಜ್ಞ ಹಾಗೂ ಸ್ವ–ಸಮರ್ಪಣೆಗಳಿಗಾಗಿ ಸಂಕೇತಗಳೆಂದು ಉಪಯೋಗಿಸಲಾಗುತ್ತದೆ,

ನಾವಾಗಿರುವುದನ್ನು ಮತ್ತು ನಮ್ಮಲ್ಲಿರುವುದನ್ನು ಕೊಡುತ್ತೇವೆ ಅದರಿಂದಾಗಿ ದೈವೀ ಸತ್ಯ ಮತ್ತು ದೈವೀ ಪ್ರಕಾಶಗಳ ಸಂಪತ್ತು ನಮ್ಮ ಜೀವನದಲ್ಲಿ ಅವರೋಹಣ ಮಾಡುವಂತಾಗುತ್ತದೆ ಮತ್ತು ದೈವೀ ಸತ್ಯದಲ್ಲಿ ಆಂತರಿಕ ಜನ್ಮದ ಅಂಶಗಳಾಗುವಂತಾಗುತ್ತದೆ,– ಸರಿಯಾದ ಯೋಚನೆ, ಸರಿಯಾದ ತಿಳಿವಳಿಕೆ, ಸರಿಯಾದ ಕ್ರಿಯೆ ಇವು ನಮ್ಮಲ್ಲಿ ಅಭಿವೃದ್ಧಿ ಹೊಂದುವಂತಾಗಬೇಕು, ಅದು ಉಚ್ಚತರ ದೈವೀಸತ್ಯದ ಎಂದರೆ ಋತಸ್ಯ ಪ್ರೇಷ, ಋತಸ್ಯ ಧಿತಿ ಇವುಗಳಿಂದ ಯೋಚಿಸುವಿಕೆ, ಪ್ರಚೋದನೆ ಮತ್ತು ಕ್ರಿಯೆ ಮತ್ತು ಇವುಗಳ ಮೂಲಕ ನಮ್ಮನ್ನು ದೈವೀ ಸತ್ಯದಲ್ಲಿ ನಿರ್ಮಾಣ ಮಾಡಬೇಕು. ನಮ್ಮ ಯಜ್ಞ ಒಂದು ಪ್ರಯಾಣ, ಯಾತ್ರೆ ಹಾಗೂ ಸಮರ– ದೇವರುಗಳತ್ತ ಪ್ರಯಾಣ, ಮತ್ತು ನಾವು ಆ ಪ್ರಯಾಣವನ್ನು ಅಗ್ನಿಯ ಜೊತೆಗೆ ಕೈಕೊಳ್ಳಬೇಕು, ಆ ಅಗ್ನಿ ಆಂತರಿಕ ಜ್ವಾಲೆಯಾಗಿರುತ್ತದೆ, ಅದು ನಮಗೆ ಮಾರ್ಗ ಕಂಡುಹಿಡಿಯುವವ ಹಾಗೂ ನೇತಾರನಂತಿರುತ್ತದೆ. ರಹಸ್ಯ ಅಗ್ನಿಯ ಮೂಲಕ ನಮ್ಮ ಮಾನವ ಸಂಗತಿಗಳು ಅಮರ ಸತ್ತೆಯಲ್ಲಿ, ಶ್ರೇಷ್ಠ ಸ್ವರ್ಗದಲ್ಲಿ ಮೇಲಕ್ಕೆತ್ತಲ್ಪಡುತ್ತವೆ ಮತ್ತು ದೈವಿಕವಾದ ವಿಷಯಗಳು ನಮ್ಮೊಳಗೆ ಇಳಿದು ಬರುತ್ತವೆ.

**CWSA, 15/372** **– ಶ್ರೀ ಅರವಿಂದರು**

*

**ಮನುಷ್ಯ–ಸೂಕ್ಷ್ಮಪ್ರಮಾಣದ ವಿಶ್ವ**

ಮನುಷ್ಯ ಪೃಥ್ವಿ–ಮಾತೆಯ ಎದೆಯಲ್ಲಿ ವಾಸಿಸುತ್ತಾನೆ ಮತ್ತು ಮರ್ತ್ಯತ್ವವಿರುವ ಈ ಜಗತ್ತಿನ ಬಗೆಗಷ್ಟೇ ಅರಿವುಳ್ಳವನಾಗಿದ್ದಾನೆ, ಆದರೆ ಆಚೆಗೆ ಅತಿಮಾನಸದ ಉಚ್ಚಸ್ಥಿತಿ ಇದೆ, ಅಲ್ಲಿ ದೈವೀ ಜಗತ್ತುಗಳು ಆಸೀನವಾಗಿವೆ, ಪ್ರಕಾಶಮಯ ರಹಸ್ಯದೊಂದಿಗಿವೆ; ಅವನ ಮೇಲ್ಮೈಯ ಅನಿಸಿಕೆಯ ಕೆಳಗಡೆ ಅವಚೇತನ ಇಲ್ಲವೆ ಅಚೇತನ ಎಂಬುದಿದೆ, ಆ ಗರ್ಭಿತ ನಿಶೆಯಿಂದ ಅವನಿಗೆ ಕಾಣುತ್ತಿರುವ ಜಗತ್ತುಗಳು ಜನ್ಮತಾಳಿದವು. ಪ್ರಕಾಶಮಯ ಉಚ್ಚತರ ಲೋಕಗಳು ಮತ್ತು ಮಸುಕಾದ ನಿಮ್ನತರ ಸಾಗರ ಇವುಗಳ ನಡುವೆ ಇರುವ ಇನ್ನಿತರ ಲೋಕಗಳು? ಅವು ಇಲ್ಲಿವೆ, ಮನುಷ್ಯ ಪ್ರಾಣಲೋಕದಿಂದ ತನ್ನ ಪ್ರಾಣಿಕ ಸತ್ತೆಯನ್ನು, ಮನೋಲೋಕದಿಂದ ಮಾನಸಿಕತೆಯನ್ನು ಎಳೆದುಕೊಳ್ಳುತ್ತಾನೆ; ಅವನು

ಅವುಗಳೊಡನೆ ರಹಸ್ಯ ಸಂಸರ್ಗದಲ್ಲಿರುತ್ತಾನೆ, ಅವನು ಪ್ರಜ್ಞಾಪೂರ್ವಕವಾಗಿ ಅವುಗಳಲ್ಲಿ ಪ್ರವೇಶಿಸಬಲ್ಲನು, ಸಂಕಲ್ಪಮಾಡಿದರೆ ಅವುಗಳಲ್ಲಿ ಜನ್ಮತಾಳಬಲ್ಲನು. ದೈವೀ ಸತ್ಯದ ಸೂರ್ಯಲೋಕಗಳಲ್ಲಿಯೂ ಕೂಡ ಅವನು ಮೇಲಕ್ಕೇರಿ ಹೋಗಬಲ್ಲನು, ಅತಿಮಾನಸದ ಪ್ರವೇಶದ್ವಾರವನ್ನು ಪ್ರವೇಶಿಸಬಲ್ಲನು, ಪರಮೋಚ್ಚನ ಹೊಸ್ತಿಲನ್ನು ದಾಟಿ ಹೋಗಬಲ್ಲನು, ದೈವೀ ದ್ವಾರಗಳು ಹೆಚ್ಚುತ್ತಿರುವ ಆತ್ಮಕ್ಕೆ ತೆರೆದುಕೊಳ್ಳುವವು.

ಈ ಮಾನವ ಆರೋಹಣ ಸಾಧ್ಯವಿದೆ, ಏಕೆಂದರೆ ಪ್ರತಿಯೊಂದು ಸತ್ತೆ ತನಗೆ ಬಾಹ್ಯವೆನಿಸುವುದೆಂದು ತೋರಿಬರುವುದನ್ನು ನಿಜವಾಗಿ ಗ್ರಹಿಸಿ ತನ್ನಲ್ಲಿ ಹಿಡಿದಿಟ್ಟುಕೊಳ್ಳುತ್ತಾನೆ. ನಮ್ಮಲ್ಲಿ ಗುಪ್ತವಾಗಿರುವ ವ್ಯಕ್ತಿನಿಷ್ಠ ಕಾರ್ಯ ವಿಧಾನಗಳಿವೆ, ಅವು ವಸ್ತುವಿಶಿಷ್ಟ ವಿಶ್ವವ್ಯಾಪಿ ಪದ್ಧತಿಯ ಎಲ್ಲ ಸೋಪಾನಪೀಠಗಳಿಗೆ ಹಾಗೂ ಸ್ತರಗಳಿಗೆ ಅನುಗುಣವಾಗಿರುತ್ತವೆ; ಮತ್ತು ಇವು ನಮಗೆ ಸಾಧ್ಯವಾಗಬಹುದಾದ ಅಷ್ಟೊಂದು ಅಸ್ತಿತ್ವದ ಸ್ತರಗಳನ್ನು ರೂಪಿಸುತ್ತವೆ. ಭೌತಿಕ ಜಗತ್ತಿನ ಈ ಪ್ರಾಪಂಚಿಕ ಜೀವನ ಮತ್ತು ನಮ್ಮ ಸಂಕುಚಿತ ಸೀಮಿತ ಪ್ರಜ್ಞೆ ಇವುಗಳನ್ನು ಕುರಿತು ಮಾತ್ರ ಮನುಷ್ಯನ ಅನುಭವಕ್ಕೆ ಅನುಮತಿ ನೀಡಲಾಗಿರುವುದು ದೂರದ ವಿಷಯ– ಅವನು ಸಾವಿರಾರು ಸಲ ಪೃಥ್ವಿಯ ಪುತ್ರನಾಗಿರಬಹುದು. ಮಾತಾ ಸದೃಶಳಾದ ಪೃಥ್ವಿ ಅವನಿಗೆ ಜನ್ಮ ನೀಡಿ ಅವನನ್ನು ತನ್ನ ತೋಳುಗಳಲ್ಲಿ ಉಳಿಸಿಕೊಂಡಾಗ್ಯೂ ಸ್ವರ್ಗಕೂಡ ಅವನ ಜನ್ಮದಾತರಲ್ಲಿ ಒಂದಾಗಿರುತ್ತದೆ ಮತ್ತು ಅವನ ಸತ್ತೆಯ ಮೇಲೆ ಅದಕ್ಕೆ ಹಕ್ಕಿರುತ್ತದೆ. ಅಂತರಂಗದಲ್ಲಿರುವ ಗಾಢವಾದ ಆಳಗಳಿಗೆ, ಉಚ್ಚತರ ಎತ್ತರಗಳಿಗೆ ಎಚ್ಚೆತ್ತುಕೊಳ್ಳುವುದು ಅವನಿಗೆ ತೆರೆದಿಟ್ಟ ವಿಷಯ ಮತ್ತು ಈ ಬಗೆಯ ಎಚ್ಚೆತ್ತುಕೊಳ್ಳುವಿಕೆ ಅವನ ಉದ್ದೇಶಿತ ಪ್ರಗತಿ. ಈ ರೀತಿಯಲ್ಲಿ ಅವನು ತನ್ನದೇ ಹೆಚ್ಚು, ಇನ್ನೂ ಹೆಚ್ಚು ಎತ್ತರದಲ್ಲಿರುವ ಸ್ತರಗಳಿಗೆ ಏರಿ ಹೋದ ಹಾಗೆ ಅವನ ಜೀವನಕ್ಕೆ ಹಾಗೂ ದೃಷ್ಟಿಗೆ ಹೊಸ ಜಗತ್ತುಗಳು ತೆರೆದುಕೊಳ್ಳುತ್ತವೆ ಮತ್ತು ಅವನ ಅನುಭವದ ಕ್ಷೇತ್ರವಾಗುತ್ತವೆ ಹಾಗೂ ಅವನ ಆತ್ಮದ ಮನೆಯಾಗುತ್ತವೆ. ಅವುಗಳ ಸಾಮರ್ಥ್ಯಗಳು ಹಾಗೂ ದೇವಪ್ರಮುಖರು ಇವರ ಸಂಪರ್ಕದಲ್ಲಿ ಅವನು ಜೀವಿಸುತ್ತಾನೆ ಮತ್ತು ಅವರ ಪ್ರತೀಕದಲ್ಲಿ ತನಗೆ ಮರುಎರಕ ಮಾಡಿಕೊಳ್ಳುತ್ತಾನೆ. ಹೀಗೆ ಪ್ರತಿಯೊಂದು ಆರೋಹಣ ಆತ್ಮದ ಹೊಸ ಜನ್ಮವಾಗಿರುತ್ತದೆ.

**CWSA, 15/373–74** **– ಶ್ರೀ ಅರವಿಂದರು**

*

## ಮುನ್ನಡೆ, ಸಮರ ಹಾಗೂ ಯಾತ್ರೆ

ಈ ಯಜ್ಞದ ಪ್ರತೀಕ ಕೆಲವೊಮ್ಮೆ ಪ್ರಯಾಣ ಇಲ್ಲವೆ ಜಲಮಾರ್ಗ, ಅಂತರಿಕ್ಷ ಮಾರ್ಗ ಇವುಗಳ ಮೂಲಕ ಕೈಕೊಂಡ ಪ್ರಯಾಣದ ಹಾಗಿರುತ್ತದೆ, ಏಕೆಂದರೆ ಅದು ಪ್ರಯಾಣ ಮಾಡುತ್ತದೆ, ಆರೋಹಣ ಮಾಡುತ್ತದೆ, ಅದಕ್ಕೊಂದು ಗುರಿಯಿರುತ್ತದೆ– ವೈಶಾಲ್ಯವಿರುತ್ತದೆ, ನಿಜವಾದ ಅಸ್ತಿತ್ವವಿರುತ್ತದೆ, ಪ್ರಕಾಶ ಹಾಗೂ ಆನಂದಗಳಿರುತ್ತವೆ– ಮತ್ತು ಅದಕ್ಕೆ ಒಳ್ಳೆಯದನ್ನು ಕಾಪಾಡಿಕೊಂಡು ಬರಲು, ಗುರಿಯತ್ತ ನೇರವಾದ ಮತ್ತು ಸಂತೋಷಕರ ಮಾರ್ಗವನ್ನು, ಪ್ರಯಾಸಕರ–ವಾದಾಗ್ಯೂ ಸಂತೋಷಕರವಾಗಿರುವ ದೈವೀ ಸತ್ಯದೆಡೆಗಿನ ಮಾರ್ಗವನ್ನು ಶೋಧಿಸಲು ಕರೆಕೊಡಲಾಗಿರುತ್ತದೆ. ಪರ್ವತದ ಪ್ರಸ್ತಭೂಮಿ (plateau) ಯೊಂದರಿಂದ ಇನ್ನೊಂದು ಪ್ರಸ್ತಭೂಮಿಯತ್ತ ದೈವೀ ಸಂಕಲ್ಪದ ಪ್ರಜ್ವಲಿಸುವ ಬಲದಿಂದ ಅದು ಮೇಲಕ್ಕೇರುವುದಿರುತ್ತದೆ, ಅಸ್ತಿತ್ವದ ಜಲಗಳನ್ನು ಹಡಗೊಂದರ ಮೂಲಕ ದಾಟಿ ಹೋಗುವುದಿರುತ್ತದೆ, ಅದರ ನದಿಗಳನ್ನು ಹಾಯ್ದುಹೋಗು (traverse) ವುದಿರುತ್ತದೆ, ಅವುಗಳ ಆಳವಾದ ತಗ್ಗು ಪ್ರದೇಶಗಳ ಮೇಲೆ ಹಾಗೂ ತರಂಗಗಳ ಮೇಲೆ ಜಯ ಸಾಧಿಸುವುದಿರುತ್ತದೆ.

ಮತ್ತು ಇದು ಸುಲಭವಾದ, ಶಾಂತಿಯಿಂದ ಕೂಡಿದ ಮಾರ್ಗವಲ್ಲ, ಬಹಳ ಋತುಗಳ ಕಾಲ ಭೀಕರ ಹಾಗೂ ನಿರ್ದಯ ಸಮರವನ್ನು ಎದುರಿಸುವುದಿರುತ್ತದೆ. ಆರ್ಯಪುರುಷ ಸತತ ಶ್ರಮಪಡುವುದಿರುತ್ತದೆ, ಹೋರಾಡುವುದಿರುತ್ತದೆ, ಜಯಿಸುವುದಿರುತ್ತದೆ, ಅವನು ಶ್ರಮಿಕ, ಪ್ರಯಾಣಿಕ ಹಾಗೂ ಕಡು ಶಿಸ್ತಿನ ಯೋಧ, ಅವನು ನಗರದ ನಂತರ ನಗರ ತೆರೆದುಕೊಳ್ಳುವಂತೆ ಒತ್ತಾಯ ತರಬೇಕು, ದಾಳಿ ಮಾಡಬೇಕು ಮತ್ತು ವಜಾ ಮಾಡಬೇಕು, ಒಂದು ರಾಜ್ಯದ ನಂತರ ಇನ್ನೊಂದು ರಾಜ್ಯವನ್ನು ಗೆದ್ದುಕೊಳ್ಳಬೇಕು ಶತ್ರುಗಳ ನಂತರ ಶತ್ರುಗಳನ್ನು ಜಯಿಸಬೇಕು, ನಿಷ್ಕರುಣೆಯಿಂದ ಅವರನ್ನು ತುಳಿದು ಹಾಕಬೇಕು, ಅವನ ಇಡೀ ಪ್ರಗತಿ ದೇವರುಗಳು ಹಾಗೂ ದೈತ್ಯರು, ದೇವರುಗಳು ಹಾಗೂ ಸೈತಾನರು ಇವರುಗಳ ಯುದ್ಧ ಕೈಕೊಳ್ಳುವುದರಲ್ಲಿರುತ್ತದೆ. ಇಂದ್ರ ಹಾಗೂ ಸರ್ಪ, ಆರ್ಯನ್ ಹಾಗೂ ದಸ್ಯು, ತೆರೆದ ಕ್ಷೇತ್ರದಲ್ಲಿ ಅವನು ಎದುರಿಸಬೇಕಾದ ಆರ್ಯರ ಶತ್ರುಗಳು, ಏಕೆಂದರೆ ಹಳೆಯ ಮಿತ್ರರು ಸಹಾಯಕರು ಶತ್ರುಗಳಾಗಿ ಬದಲಾಗಿರುತ್ತಾರೆ, ಅವನು

ಗೆದ್ದುಕೊಂಡ ಕೊನೆ ತಲುಪಿಸಿದ ಆರ್ಯನ್ ರಾಜರುಗಳು ದಸ್ಯುಗಳ ಜೊತೆ ಕೂಡಿಕೊಳ್ಳುತ್ತಾರೆ ಮತ್ತು ಅವನ ಮುಕ್ತ ಹಾಗೂ ಕಟ್ಟಕಡೆಯ ದಾಟಿ ಹೋಗುವಿಕೆಯನ್ನು ತಡೆಗಟ್ಟಲು ಒಟ್ಟುಗೂಡಿ ಪರಮೋಚ್ಚ ಸಮರ ನಡೆಸುತ್ತಾರೆ.

**CWSA, 15/376–78** **– ಶ್ರೀ ಅರವಿಂದರು**

*

ಆರ್ಯನ್ ಮನಸ್ಸಿದ್ದವನು ಸ್ವ–ಪ್ರಕಾಶಿತ ಏಕೈಕನಾದವನನ್ನು ಗುರಿಯಾಗಿ–ರಿಸಿಕೊಂಡಿರುತ್ತಾನೆ; ಹಾಗಾಗಿ ದೃಷ್ಟಾರರು ಅವನನ್ನು ಸೂರ್ಯನ ಪ್ರತೀಕದಲ್ಲಿ ಪೂಜೆ ಮಾಡಿದರು. ಅಸ್ತಿತ್ವದಲ್ಲಿ ಏಕೈಕನಾದ ಅವನಿಗೆ ದೃಷ್ಟಾರರು ಇಂದ್ರ, ಅಗ್ನಿ, ಯಮ, ಮಾತರಿಶ್ವನ್ ಇತ್ಯಾದಿ ಅನೇಕ ಹೆಸರುಗಳನ್ನು ನೀಡಿದ್ದಾರೆ. 'ತದೇಕಮ್', 'ತತ್ ಸತ್ಯಮ್' ಈ ಪದಗುಚ್ಛಗಳು ವೇದದಲ್ಲಿರುವುದು ಸತತ ಕಂಡುಬರುತ್ತದೆ, ಅದು ಅತ್ಯುಚ್ಚವಾದವನಿಗೆ ಮತ್ತು ಇಲ್ಲಿಯ ಅವನ (ಸೂರ್ಯನ) ಕಾರ್ಯಗಳೊಂದಿಗೆ ಸಂಬಂಧ ಹೊಂದಿರುತ್ತದೆ. ಘನತೆವೆತ್ತ ಹಾಗೂ ಆಧ್ಯಾತ್ಮಿಕವಾದ ಒಂದು ಸ್ತೋತ್ರದಲ್ಲಿ "ದೇವರುಗಳ ವಿಶಾಲ ಸರ್ವಶಕ್ತತೆ– ಆ ಏಕೈಕನಾದವನು" ಶಬ್ದಗಳಿರುವ ಪಲ್ಲವಿ ನಿರಂತರವಾಗಿ ಮರಳಿ ಬರುತ್ತದೆ. ಅಲ್ಲಿ ದೈವೀ ಸತ್ಯದ ಮಾರ್ಗದಿಂದ ಕೈಕೊಳ್ಳಲಾಗುವ ಸೂರ್ಯನ ಪ್ರಯಾಣದ ಗುರಿ ಇದೆ, ಅದು ಎಚ್ಚತ್ತುಕೊಂಡ, ಜ್ಞಾನೋದಯ ಪಡೆದ ಆತ್ಮದ ಪ್ರಯಾಣ ಎಂಬುದನ್ನು ನಾವು ನೋಡಿದ್ದೇವೆ. "ಈ ಸತ್ಯದಿಂದ ಮರೆಯಲ್ಲಿರಿಸಲಾದ ನಿನ್ನ ಆ ದೈವೀ ಸತ್ಯ" ಇದು ಮಿತ್ರ ಹಾಗೂ ವರುಣ ಅವರದು, ಅಲ್ಲಿ ಅವರು ಸೂರ್ಯನ ಕುದುರೆಗಳ ನೊಗ ಬಿಚ್ಚಿಡುತ್ತಾರೆ. ಅಲ್ಲಿ ಹತ್ತು ಸಾವಿರ ಲೆಕ್ಕದಲ್ಲಿ ಭೇಟಿ ಮಾಡುವವರಿರುತ್ತಾರೆ,– ಆ ಏಕೈಕನಾದವನನ್ನು (ತದೇಕಮ್), ಮೈವೆತ್ತ ದೇವತೆಗಳ ದೇವನನ್ನು ನಾನು ನೋಡಿದ್ದೇನೆ. "ಆದರೆ ತನ್ನಲ್ಲಿಯೇ ಏಕೈಕವಾದ ಅದು ಕಾಲರಹಿತವಾಗಿರುತ್ತದೆ, ನಮ್ಮ ಮನಸ್ಸು ಸತ್ತೆ ಕಾಲಗತಿಯಲ್ಲಿರುತ್ತದೆ". ಅದು ಇಂದಿನದಲ್ಲ, ನಾಳೆಯದೂ ಅಲ್ಲ, ವಿಶ್ವಾತೀತವಾದ ಆ 'ತತ್'ನ್ನು ಯಾರು ನೋಡಿದ್ದಾರೆ? ಅದನ್ನು ಸಮೀಪಿಸಿದಾಗ ಅದು ನಮ್ಮಿಂದ ಮಾಯವಾಗುತ್ತದೆ. ಹಾಗಾಗಿ ನಾವು ಅದರತ್ತ ಬೆಳೆಯಬೇಕು, ಅದನ್ನು ನಮ್ಮಲ್ಲಿಯೇ ದೇವರುಗಳಿಗೆ ಜನ್ಮ ನೀಡುವುದರ ಮೂಲಕ, ಅವರ ಬಲವತ್ತರವಾದ ತೇಜಸ್ಸುಳ್ಳ ರೂಪಗಳನ್ನು

ಹೆಚ್ಚಿಸುವುದರ ಮೂಲಕ, ಅವರ ದೈವೀ ದೇಹಗಳನ್ನು ನಿರ್ಮಾಣ ಮಾಡುವುದರ ಮೂಲಕ ಕೈಕೊಳ್ಳಬಹುದು, ಮತ್ತು ಈ ಹೊಸ ಜನ್ಮ ಮತ್ತು ಸ್ವ-ನಿರ್ಮಾಣ ಯಜ್ಞದ ನಿಜವಾದ ಸ್ವಭಾವವಾಗಿರುತ್ತದೆ,– ಆ ಯಜ್ಞದಾದ್ಯಂತ ಅಮರತ್ವದತ್ತ ನಮ್ಮ ಪ್ರಜ್ಞೆಯ ಎಚ್ಚತ್ತುಕೊಳ್ಳುವಿಕೆ ಇರುತ್ತದೆ.

**CWSA, 15/492–93** **– ಶ್ರೀ ಅರವಿಂದರು**

*

ವೈದಿಕ ಋಷಿಗಳ ಪ್ರಧಾನ ವಿಚಾರ ಮಾನವ ಆತ್ಮ ಮೃತ್ಯುವಿನ ಒಂದು ಸ್ಥಿತಿಯಿಂದ ಅಮರತ್ವದ ಸ್ಥಿತಿಯತ್ತ ಸಂಕ್ರಮಣ ಮಾಡುವುದಾಗಿತ್ತು; ಅದನ್ನು ಮಿಥ್ಯೆಯ ಬದಲಾಗಿ ದೈವೀಸತ್ಯವನ್ನು, ವಿಭಜಿತಗೊಂಡ ಹಾಗೂ ಸೀಮಿತ ಸತ್ತೆಯ ಬದಲಾಗಿ ಸಮಗ್ರತೆ ಹಾಗೂ ಅನಂತತೆಯನ್ನು ವಿನಿಮಯ ಮಾಡಿಕೊಳ್ಳು-ವುದಾಗಿತ್ತು. ಮೃತ್ಯು ಮನಸ್ಸು ಪ್ರಾಣಗಳನ್ನೊಳಗೊಂಡ ಭೌತದ್ರವ್ಯದ ಮರ್ತ್ಯಸ್ಥಿತಿ. ಅಮರತ್ವ ಅನಂತ ಸತ್ತೆಯ, ಪ್ರಜ್ಞೆಯ ಹಾಗೂ ದಿವ್ಯಾನಂದದ ಸ್ಥಿತಿ. ಮನುಷ್ಯ ಎರಡು ಅಂತರಿಕ್ಷಗಳ ಮೇಲೇರಿ ದೈವೀ ಸತ್ಯದ ಅನಂತತೆಯತ್ತ, ಮಹಸ್ಸಿನತ್ತ, ಹಾಗೆಯೇ ದಿವ್ಯಾನಂದದತ್ತ ಹೋಗುತ್ತಾನೆ, ಆ ಅಂತರಿಕ್ಷಗಳು ಸ್ವರ್ಗ ಹಾಗೂ ಪೃಥ್ವಿ, ಮನಸ್ಸು ಹಾಗೂ ದೇಹದವಾಗಿರುತ್ತವೆ. ಇದು "ಶ್ರೇಷ್ಠ ದಾಟಿ ಹೋಗುವಿಕೆ" ಇದನ್ನು ಪೂರ್ವಜರು ಹಾಗೂ ಪ್ರಾಚೀನ ಕಾಲದ ಋಷಿಗಳು ಶೋಧಿಸಿದರು.

**CWSA, 15/45–46** **– ಶ್ರೀ ಅರವಿಂದರು**

*

ವೇದದ ಪ್ರಧಾನ ಕಲ್ಪನೆ ಅವಿದ್ಯೆಯ ಅಂಧಕಾರದಲ್ಲಿರುವ ದೈವೀ ಸತ್ಯದ ಮೇಲೆ ಹಾಗೂ ಅಮರತ್ವದ ಮೇಲೆ ಜಯ ಸಾಧಿಸುವುದನ್ನು ಕುರಿತಾಗಿದೆ. ಏಕೆಂದರೆ ವೈದಿಕ 'ಋತಮ್' ಆಧ್ಯಾತ್ಮಿಕ ಹಾಗು ಮನೋವೈಜ್ಞಾನಿಕ ಕಲ್ಪನೆ. ನಿಜವಾದ ಸತ್ತೆ, ನಿಜವಾದ ಪ್ರಜ್ಞೆ, ಅಸ್ತಿತ್ವದ ನಿಜವಾದ ದಿವ್ಯಾನಂದ ಇವು ದೇಹದ ಈ ಪೃಥ್ವಿ, ಪ್ರಾಣಿಕ ಶಕ್ತಿಯ ಮಧ್ಯದ ಪ್ರದೇಶ, ಈ ಸರ್ವಸಾಧಾರಣ ಆಕಾಶ ಇಲ್ಲವೆ ಮನಸ್ಸಿನ ಸ್ವರ್ಗ ಇವುಗಳಾಚೆಗಿವೆ. ನಾವು ಈ ಎಲ್ಲ ಸ್ತರಗಳನ್ನು ದಾಟಿ ಹೋಗಬೇಕಾಗಿದೆ, ಅದು ಅತಿಮಾನಸ ದೈವೀಸತ್ಯದ ಉಚ್ಚತರ ಸ್ತರವನ್ನು

ತಲುಪುವುದಕ್ಕಾಗಿದೆ, ಆ ಸ್ತರ ದೇವರುಗಳ ಮನೆ ಮತ್ತು ಅಮರತ್ವದ ತಳಹದಿಯಾಗಿರುತ್ತದೆ.

**CWSA, 15/241–42** **– ಶ್ರೀ ಅರವಿಂದರು**

*

ಈ ಅತಿಮಾನಸ ವೈಶಾಲ್ಯವೂ ಕೂಡ ಸತ್ತೆಯ ಮೂಲಭೂತ ಸತ್ಯ **'ಸತ್ಯಮ್'**, ಅದರೊಳಗಿಂದ ಅದರ ಕ್ರಿಯಾಶೀಲ ಸತ್ಯ ಸ್ವಾಭಾವಿಕವಾಗಿ, ಪ್ರಯತ್ನದ ಹೋರಾಟವಿಲ್ಲದೆ ಪರಿಪೂರ್ಣ, ದೋಷರಹಿತವಾದ ಚಲನೆಯೊಂದಿಗೆ ಹೊರಹರಿದು ಬರುತ್ತದೆ, ಏಕೆಂದರೆ ಆ ಎತ್ತರಗಳ ಮೇಲೆ ವಿಭಜನೆ ಇರುವುದಿಲ್ಲ, ಪ್ರಜ್ಞೆ ಹಾಗೂ ಶಕ್ತಿ ಇವುಗಳ ನಡುವೆ ಕಂದರವಿರುವುದಿಲ್ಲ, ಜ್ಞಾನ ಹಾಗೂ ಸಂಕಲ್ಪಗಳ ನಡುವೆ ಪ್ರತ್ಯೇಕಿಸುವಿಕೆ ಇರುವುದಿಲ್ಲ, ನಮ್ಮ ಸತ್ತೆ ಹಾಗೂ ಅದರ ಕ್ರಿಯೆ ಇವುಗಳ ನಡುವೆ ಅಸಾಮರಸ್ಯ ಇರುವುದಿಲ್ಲ; ಅಲ್ಲಿರುವ ಪ್ರತಿಯೊಂದೂ 'ನೇರ' ವಾಗಿರುತ್ತದೆ, ಅಲ್ಲಿ ಕನಿಷ್ಠ ಮಟ್ಟದ ವಂಚನೆಯಿರುವ ಸಾಧ್ಯತೆಯಿರುವುದಿಲ್ಲ, ಹಾಗಾಗಿ ಈ ವೈಶಾಲ್ಯವಿರುವ ನಿಜವಾದ ಸತ್ತೆಯ ಅತಿಮಾನಸ ಸ್ತರ ಋತಮ್ ಕೂಡ ಆಗಿರುತ್ತದೆ, ಎಲ್ಲ ವಸ್ತು–ವಿಷಯಗಳ ನಿಜವಾದ ಚಟುವಟಿಕೆಯಾಗಿರುತ್ತದೆ, ಅದು ಚಲನೆಯ, ಕ್ರಿಯೆಯ ಪರಮೋಚ್ಚ ಸತ್ಯ, ಸಂಕಲ್ಪದ, ಹೃದಯದ ಹಾಗೂ ಜ್ಞಾನದ ವಿಫಲವಾಗದ ಸತ್ಯ; ಯೋಚನೆಯ, ಶಬ್ದದ ಹಾಗೂ ಭಾವನೆಯ ಪರಿಪೂರ್ಣ ಸತ್ಯ, ಅದು ಸ್ವಯಂಪ್ರೇರಿತವಾಗಿ ಸರಿಯಾದದ್ದು, ಮುಕ್ತ ನಿಯಮ (ಶಾಸನ), ವಿಭಜಿತ, ಪ್ರತ್ಯೇಕಿಸುವ ಪ್ರಜ್ಞೆಯ ಮಿಥ್ಯೆಗಳ ಸ್ಪರ್ಶಕ್ಕೊಳಗಾಗದೆ ಇರುವಂತಹದು. ಅದು ವಿಶಾಲ, ದೈವಿಕವಾದ ಸ್ವಯಂಪ್ರಕಾಶಿತ ಸಮನ್ವಯ, ಮೂಲಭೂತ ಏಕತೆಯಿಂದ ಜನಿಸಿದ್ದು, ನಮ್ಮದು ಅದರಲ್ಲಿಯ ಕ್ಷುದ್ರ ಅಸ್ತಿತ್ವವಾಗಿದ್ದು ಬಡವಾಗಿದ್ದು, ಭಾಗಶಃವಾದದ್ದು, ಛಿದ್ರಗೊಂಡದ್ದು ಹಾಗೂ ವಿಕೃತಗೊಂಡ ರೀತಿಯಲ್ಲಿ ಕತ್ತರಿಸಿ ತೆಗೆದದ್ದು, ವಿಶ್ಲೇಷಣೆಗೊಳಗಾದದ್ದು. ವೈದಿಕ ಪೂಜೆಯ ಸೂರ್ಯ ಹೀಗಿದ್ದ, ಪೂರ್ವಜರು ಅಭೀಪ್ಸೆಪಡುತ್ತಿದ್ದ ಪ್ರಕಾಶದ ಸ್ವರ್ಗ ಹೀಗಿತ್ತು, ಜಗತ್ತು, ಅದಿತಿಯ ಮಗ ಸೂರ್ಯನ ದೇಹ ಹೀಗಿದ್ದವು.

**CWSA, 15/475** **– ಶ್ರೀ ಅರವಿಂದರು**

*

ವಿಪ್ರ ಶಬ್ದದ ಅರ್ಥ ಬ್ರಾಹ್ಮಣ ಎಂದಲ್ಲ, ವಿ ಬೀಜಾಕ್ಷರದ ಪ್ರಾಮುಖ್ಯತೆ ಪ್ರಕಟವಾಗುವುದಾಗಿದೆ, ಪ್ರಕಾಶಿತಗೊಳಿಸುವುದಾಗಿದೆ ಮತ್ತು ವಿಪ್ ಬೀಜಾಕ್ಷರದ ಅರ್ಥ ಲೀಲೆ ಇಲ್ಲವೆ ಕಂಪನ ಇಲ್ಲವೆ ಪ್ರಕಟಣೆಯನ್ನು ಇಡಿಯಾಗಿ ಹೊರಹೊರಡಿಸುವಿಕೆ, ಯಾರ ಮನಸ್ಸಿನಲ್ಲಿ ಜ್ಞಾನದ ಅರುಣೋದಯ–ವಾಗಿದೆಯೋ, ಯಾರ ಮನಸ್ಸಿನ ದ್ವಾರ ಜ್ಞಾನದ ಪ್ರಬಲ ಲೀಲೆಗಾಗಿ ತೆರೆದುಕೊಂ–ಡಿದೆಯೋ ಅವನು ನಿಜವಾಗಿ ವಿಪ್ರ. ಬೀಜಾಕ್ಷರ ಮಾ ದ ಪ್ರಾಮುಖ್ಯತೆ ಹಿಡಿದುಕೋ ಎಂದಿದೆ. ತಾಯಿ ಮಗುವನ್ನು ಗರ್ಭದಲ್ಲಿ ಹಿಡಿದಿಟ್ಟುಕೊಂಡಿರುತ್ತಾಳೆ ಹಾಗಾಗಿ ಅವಳನ್ನು ಮಾತಾ ಎಂದು ಕರೆಯಲಾಗುತ್ತದೆ. ಕ್ರಿಯೆಯ ಹಾಗೂ ಪ್ರಾಣದ ಆದ್ಯಪ್ರವರ್ತಕ (founder) ನಾದ ವಾಯು ಮಾತರಿಶ್ವ ಎಂದು ಪರಿಚಿತ–ನಾಗಿದ್ದಾನೆ ಅವನು "ತನ್ನನ್ನು ಮಾತೆಯಲ್ಲಿ ವಿಸ್ತರಿಸಿಕೊಳ್ಳುವವನು, ಇಲ್ಲವೆ ತುಂಬುವವನಾದ ಆಕಾಶ".– ಆ ಆಕಾಶ ತನ್ನ ಗರ್ಭದಲ್ಲಿ ಎಲ್ಲ ಜೀವಿಗಳ ಜನ್ಮ, ಲೀಲೆ ಹಾಗೂ ಮೃತ್ಯು, ಎಲ್ಲ ಸತ್ತೆಗಳು ಇವುಗಳನ್ನೆಲ್ಲ ಹಿಡಿದಿಟ್ಟುಕೊಂಡಿರುತ್ತದೆ. ಆದಾಗ್ಯೂ ಅದು ಎಲ್ಲ ಕಾಲದಲ್ಲಿ ಪ್ರಶಾಂತವಾಗಿರುತ್ತದೆ, ಅವಿಚಲವಾಗಿರುತ್ತದೆ. ಭೀಕರ ಚಂಡಮಾರುತ ಕ್ಷಿತಿಜಕ್ಕೆ ಭದ್ರವಾಗಿ ಅಂಟಿಕೊಂಡು ಮಿಂಚು ಹೊಡೆಸುತ್ತಿದ್ದಾಗ, ಹುಚ್ಚುಹಿಡಿದ ರೀತಿಯಲ್ಲಿ ಗುಡುಗುತ್ತಿದ್ದಾಗ, ಗಿಡಗಳನ್ನು, ಪಶುಗಳನ್ನು, ಮನೆಗಳನ್ನು ದೈವೀ ಸಂತೋಷದ ನೃತ್ಯದೊಂದಿಗೆ ಏಟಿಗೆ ಒಳಪಡಿಸುತ್ತಿದ್ದಾಗ ಅದನ್ನೆಲ್ಲ ಒಳಗೊಳ್ಳುವ ಹಾಗೂ ತಾಳಿಕೊಳ್ಳುವ ಆಕಾಶದ ಹಾಗೆ ಸಹನೆಯುಳ್ಳ ಮನುಷ್ಯ ತನ್ನದೇ ದೇಹ ಬಯಲಿನಲ್ಲಿ ಲೀಲೆಗಾಗಿ ಸಹಿಸಿಕೊಳ್ಳಲಾಗದ ಭೌತಿಕ ಹಾಗೂ ಪ್ರಾಣಿಕ ನೋವುಗಳಿಗೆ ಒಳಗಾಗಿದ್ದಾಗ್ಯೂ ಶಾಂತರೀತಿಯಲ್ಲಿ ಉಳಿದುಕೊಂಡು ಅದನ್ನು ಹೊರಳಿಸಲು ಶಕ್ತನಾಗಿರುತ್ತಾನೆ, ಸ್ವ–ದಿವ್ಯಾನಂದದಿಂದ ತುಂಬಿಕೊಂಡಿರುತ್ತಾನೆ, ಅದೆಲ್ಲವನ್ನೂ ಸಾಕ್ಷೀಪುರುಷನ ಹಾಗೆ ಸಹಿಸಿಕೊಳ್ಳುತ್ತಾನೆ, ಅವನು ನಿಜವಾಗಿ ಮಾವಾನ. ಇಂತಹ ಮಾವಾನ ವಿಪ್ರನಾದಾಗ (ಜ್ಞಾನೋದಯ ಪಡೆದವನಾದಾಗ) ಇಂತಹ ಪ್ರಶಾಂತ ತಿಳಿದು–ಕೊಳ್ಳುವವನು ತನ್ನ ದೇಹವನ್ನು ಯಜ್ಞದ ವೇದಿಕೆಯೆಂದು ಅರ್ಪಿಸಿದಾಗ ಇಂದ್ರ ಹಾಗೂ ವರುಣ ಅದರಲ್ಲಿ ಮುಕ್ತವಾಗಿ ಸಂಚರಿಸುತ್ತಾರೆ, ಕೆಲವೊಮ್ಮೆ ಅವರು ಸ್ವಯಂಪ್ರೇರಣೆಯಿಂದ ಬರುತ್ತಾರೆ, ಆಹುತಿಯನ್ನು ರಕ್ಷಿಸುತ್ತಾರೆ, ಅವನು

ಬಯಸಿದ ಕ್ರಿಯೆಯ ಆಧಾರ ಹಾಗೂ ತಳಹದಿಯಾಗುತ್ತಾರೆ, ಧರ್ತಾರಾ ಚರ್ಷನೀನಾಮ್ ("ನೀವು ನಿಜವಾಗಿ ಎಲ್ಲ ಕ್ರಿಯೆಯನ್ನು ಎತ್ತಿ ಹಿಡಿಯುವವರು") ಅವನಿಗೆ ಶ್ರೇಷ್ಠ ಆನಂದ, ಸಾಮರ್ಥ್ಯ ಹಾಗೂ ಜ್ಞಾನೋದಯಗಳನ್ನು ದಯಪಾಲಿಸುತ್ತಾರೆ.

**Bengali Writings pp. 52-53** – **ಶ್ರೀ ಅರವಿಂದರು**

*

ವೈದಿಕ ಋಷಿಗಳಲ್ಲಿ ಯಾರಾದರೊಬ್ಬರು ಅತಿಮಾನಸ ಸ್ತರವನ್ನು ಸಿದ್ಧಿಸಿಕೊಂಡಿದ್ದರು ಎಂದು ನಾನು ಹೇಳಲಾರೆ, ಆದರೆ ಅದರತ್ತ ಆರೋಹಣ ಅವರ ಉದ್ದೇಶವಾಗಿತ್ತು. ಸ್ವರ ಸ್ಪಷ್ಟವಾಗಿ ಮನಸ್ಸಿನ ಜ್ಞಾನೋದಯ ಪಡೆದ ಪ್ರಾಂತಗಳದಾಗಿದೆ, ಅದು ಸೂರ್ಯನಿಂದ ರಚಿತಗೊಂಡು ಅತಿಮಾನಸ ಸ್ತರ ಹಾಗೂ ಮಾನವ ಬುದ್ಧಿಮತ್ತೆ ಇವುಗಳ ನಡುವಿದೆ. ಉಪನಿಷತ್ತುಗಳ ಪ್ರಕಾರ ಸೂರ್ಯನ ಕಿರಣಗಳಲ್ಲಿ ಆರೋಹಣ ಮಾಡಿದವರು ಮರಳಿ ಬರುತ್ತಾರೆ, ಆದರೆ ಸೂರ್ಯನಲ್ಲಿ ಆರೋಹಣ ಮಾಡಿ ಹೋದವರು ಮರಳಿ ಬರುವುದಿಲ್ಲ. ಅದು ಏಕೆಂದರೆ ಅತಿಮಾನಸದತ್ತ ಆರೋಹಣ ಮಾಡುವುದನ್ನು ನಿರೀಕ್ಷಿಸಲಾಗಿತ್ತು, ಆದರೆ ಅವರೋಹಣ ಮತ್ತು ಇಲ್ಲಿ ಅತಿಮನಸ್ಸನ್ನು ಸಂಘಟಿಸುವಿಕೆ ಇವುಗಳನ್ನು (ಕಿರಣಗಳ ಅವರೋಹಣಕ್ಕಿಂತ ಬೇರೆಯಾಗಿ) ನಿರೀಕ್ಷಿಸಲಾಗಿರಲಿಲ್ಲ.

**CWSA, 29/417** – **ಶ್ರೀ ಅರವಿಂದರು**

*

## ಋಗ್ವೇದದ ಮೊದಲ ಸ್ತೋತ್ರ

1. ಅಗ್ನಿಮೀಳೆ ಪುರೋಹಿತಂ ಯಜ್ಞಸ್ಯ ದೇವಮ್ ಋತ್ವಿಜಂ । ಹೋತಾರಂ ರತ್ನ ಧಾತಮಮ್ ॥ 1 ॥

ಸರಿಯಾದದ್ದನ್ನು ನೋಡುವ ದೇವನಾದ, ಆಹುತಿಯನ್ನು ಅರ್ಪಿಸುವವ–ನಾದ, ದಿವ್ಯಾನಂದವನ್ನು ಸರಿಯಾಗಿ ಅಳವಡಿಸಿಕೊಡುವವರಲ್ಲಿ ಮುಖ್ಯನಾದ ಅಗ್ನಿಯೇ ನಿನ್ನನ್ನು ನಾನು ಆರಾಧಿಸುತ್ತೇನೆ.

2. ಅಗ್ನಿಃ ಪೂರ್ವೇಭಿಃ ಋಷಿಭಿರೀಡ್ಯೋ ನೂತನೈರುತ । ಸ ದೇವಾನೇಹ ವಕ್ಷತಿ ॥ 2 ॥

ಪೂರ್ವಕಾಲದ ಋಷಿಗಳಿಂದ ಆರಾಧಿಸಲ್ಪಟ್ಟ ಅಗ್ನಿ, ಇಂದಿನವರಿಗೆ ಆರಾಧ–ನೀಯನಾಗಿರುವವನು ದೇವತೆಗಳನ್ನಿಲ್ಲಿ ತರುತ್ತಾನೆ.

3. ಅಗ್ನಿನಾ ರಯಿಮಶ್ನವತ್ ಪೋಷಮೇವ ದಿವೆ ದಿವೆ । ಯಶಸಂ ವೀರವತ್ತಮಂ ॥ 3 ॥

ಅಗ್ನಿಯ ಮೂಲಕ ಮನುಷ್ಯ ದಿವ್ಯಾನಂದವ (ಇಲ್ಲವೆ ಶಕ್ತಿಯ)ನ್ನು ದೊರಕಿಸುತ್ತಾನೆ ಮತ್ತು ದಿನದಿಂದ ದಿನಕ್ಕೆ ಅತಿ ವಿಸ್ತಾರವಾದ (ಹೆಚ್ಚು ಪ್ರಕಟವಾದ ಇಲ್ಲವೆ ಹೆಚ್ಚು ಶಕ್ತಿಯುತವಾದ) ವಿಜಯದೊಂದಿಗೆ ಬೆಳೆಯುತ್ತಾನೆ.

4. ಅಗ್ನೇ ಯಂ ಯಜ್ಞಮಧ್ವರಂ ವಿಶ್ವತಃ ಪರಿಭೂರಸಿ । ಸ ಹೃದ್ದೇವೇಷು ಗಚ್ಛತಿ ॥ 4 ॥

ಓ ಅಗ್ನಿ ಇಲ್ಲಿ ಕೆಳಗೆ ನಡೆಯುತ್ತಿರುವ ಯಜ್ಞವನ್ನು ನೀನು ಪ್ರತಿಯೊಂದು ಬದಿಯಿಂದ ಸುತ್ತುವರಿದಿರುವಿ, ದೇವತೆಗಳಲ್ಲಿ ಚಲಿಸುತ್ತಿರುವುದು (ಇಲ್ಲವೆ ದೇವತೆಗಳತ್ತ ಸಾಗುತ್ತಿರುವುದು) ಅದೇ ಆಗಿದೆ.

5. ಅಗ್ನಿರ್ಹೋತಾ ಕವಿಕ್ರತುಃ ಸತ್ಯಶ್ಚಿತ್ರಶ್ರವಸ್ತಮಃ । ದೇವೋ ದೇವೇಭಿರಾಗಮತ್ ॥ 5 ॥

ಹೋತಾ ಆದ ಅಗ್ನಿ, ಬಲಿಷ್ಠ ವಿವೇಕವುಳ್ಳವನು, ನಿಜವಾಗಿರುವವನು, ಸ್ಫೂರ್ತಿಗೊಂಡ ಜ್ಞಾನದಲ್ಲಿ ವೈವಿಧ್ಯವುಳ್ಳವನು, ದೇವತೆಗಳೊಂದಿಗೆ ದೇವತೆಯೊಬ್ಬನಾಗಿ ಬರುತ್ತಾನೆ.

6. ಯದಂಗ ದಾಶುಷೆ ತ್ವಮಗ್ನೇ ಭದ್ರಂ ಕರಿಷ್ಯಸಿ । ತವೇತ್ತತ್ಸತ್ಯಮಂಗಿರಃ ॥6 ॥

ಆ ನೀನು, ಓ ಪ್ರೀತಿಪಾತ್ರನೆ, ಕೊಡುವವರಿಗೆ ಒಳ್ಳೆಯದನ್ನು ಮಾಡುತ್ತೀ ಓ ಅಗ್ನಿ, ಓ ಪ್ರೀತಿಯ ಪ್ರಭುವೆ ನಿನ್ನಲ್ಲಿರುವ ಸತ್ಯ ಇದೇ ಆಗಿದೆ.

7. ಉಪ ತ್ವಾಗ್ನೆ ದಿವೆ ದಿವೆ ದೋಷಾವಸ್ತರ್ಧಿಯಾ ವಯಂ । ನಮೋ ಭರಂತ ಏಮಸಿ ॥ 7 ॥

ನಿನಗೆ ಓ ಅಗ್ನಿ, ದಿನದಿಂದ ದಿನಕ್ಕೆ ಮಬ್ಬಿನಲ್ಲಿ ರಕ್ಷಿಸುತ್ತಿರುವುದರ ಕಾರಣದಿಂದಾಗಿ ನಾವು ಆ ತಿಳಿವಳಿಕೆಯೊಂದಿಗೆ ಅಭಿವಾದನಗಳನ್ನು ಹೊತ್ತುಕೊಂಡು ಬರುತ್ತೇವೆ, ಮತ್ತು ನೀನು ನಿನ್ನ ಬಲಕ್ಕೆ ಬೆಳೆಯುತ್ತಿರುವಿ.

8. ರಾಜಂತಮಧ್ವರಾಣಾಂ ಗೋಪಾಮೃತಸ್ಯ ದೀದಿವಿಂ । ವರ್ಧಮಾನಂ ಸ್ವೆ ದಮೆ ॥ 8 ॥

ಕೆಳಸ್ತರದಲ್ಲಿರುವ ವಸ್ತುಗಳ ಮೇಲೆ ನಡೆಸುತ್ತ ಅಮರತ್ವವನ್ನು ರಕ್ಷಿಸುವವನೆ, ತನ್ನ ಮನೆಯಲ್ಲಿ ವರ್ಧಿಸುತ್ತಿರುವ ಭವ್ಯತೆಯೆ

9. ಸ ನಃ ಪಿತೇನ ಸೂನವೆ ಅಗ್ನೆ ಸೂಪಾಯನೋ ಭವ । ಸಚಸ್ವಾ ನಃ ಸ್ವಸ್ತಯೆ ॥ 9 ॥

ಹಾಗಾಗಿ ಓ ಅಗ್ನಿ, ತಂದೆ ಮಗುವಿಗಾಗಿ ಇರುವ ಹಾಗೆ ನೀನು ನಮಗೆ ಸುಲಭವಾಗಿ ಲಭ್ಯವಾಗಿರು, ನಮ್ಮ ದಿವ್ಯಾನಂದಕ್ಕಾಗಿ ನಮಗೆ ಅಂಟಿಕೊಂಡಿರು.

**CWSA, 16/452–53** **– ಶ್ರೀ ಅರವಿಂದರು**

*


## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 5/12/2016ರ ಸೋಮವಾರದಂದು "ಶ್ರೀ ಅರವಿಂದರ ಮಹಾಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7 ಗಂಟೆಯಿಂದ 7–30ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಆನಂತರ ಸಾಯಂಕಾಲ 5 ಗಂಟೆಯಿಂದ 6–10ರವರೆಗೆ "Pictures of Sri Aurobindo's Poems" ಎಂಬ ವಿಷಯದ ಬಗ್ಗೆ ವೀಡಿಯೋ ಚಿತ್ರಣವನ್ನು ತೋರಿಸಲಾಯಿತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 3/12/2016 ಮತ್ತು 4/12/2016 ರಂದು ಮೀರಾಂಬಿಕ ಸ್ಕೂಲ್ ಫ಼ಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಶೈಕ್ಷಣಿಕ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು. "ಭೂತಾಯಿ" ಶೀರ್ಷಿಕೆಯಡಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶಾಲಾ ಅಧ್ಯಕ್ಷರಾದ ಶ್ರೀಮಾನ್ ಅಜಿತ್ ಸಬ್ನೀಸ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಿದ್ಯಾರ್ಥಿಗಳು ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ತಾವೇ ಸಿದ್ಧಪಡಿಸಿದ ಮಾದರಿಗಳನ್ನು ಪ್ರದರ್ಶಿಸಿದರು. ಸಮಗ್ರ ಶಿಕ್ಷಣ ಪರಿಕಲ್ಪನೆಯ ಎಲ್ಲ ವಿಷಯಗಳನ್ನು (ಆಟೋಟ, ನೃತ್ಯ, ಯೋಗ, ಸಂಗೀತ) ಪ್ರಸ್ತುತಿ ಪಡಿಸಲಾಯಿತು. ಪ್ರದರ್ಶನ ವೀಕ್ಷಿಸಿದ ಪೋಷಕರು, ಅತಿಥಿಗಳು ವಿದ್ಯಾರ್ಥಿಗಳನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.



*Each victory gained over oneself means new strength to gain more victories.*

- Sri Aurobindo

**RNI No. 22511/1971**
No. of Pages **60 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.